ISSN : 3048-7137

# ಆರಯ್

## ಕನ್ನಡ ಇಮ್ಮುಖ ಕುರುಡೋದು (Double Blind) ಮತ್ತು ದಟ್ಟೋದು (Peer Review) ಮೂರು ತಿಂಗಳ ಆನ್ಲಯಿನ್ ಸಂಶೋಧನಾ ಪತ್ರಿಕೆ

ಸಂಪುಟ–೨ ಸಂಚಿಕೆ–೨

ಏಪ್ರಿಲ್-ಜೂನ್ ೨೦೨೫

Kannada Online Double Blind Peer-Review Quarterly Research Journal

Volume-2, Number-2 April-June 2025

ಕಟ್ಟುಗ

ಬಸವರಾಜ ಕೋಡಗುಂಟಿ

ಬಂಡಾರ ಪ್ರಕಾಶನ

ಮಸ್ಕಿ

**ಆರಯ್**
ಕನ್ನಡ ಇಮ್ಮುಖ ಕುರುಡೋದು (Double Blind) ಮತ್ತು ದಟ್ಟೋದು
(Peer Review) ಮೂರು ತಿಂಗಳ ಆನ್ಲಯಿನ್ ಸಂಶೋಧನಾ ಪತ್ರಿಕೆ
ಸಂಪುಟ–೨, ಸಂಚಿಕೆ–೨, ಏಪ್ರಿಲ್–ಜೂನ್ ೨೦೨೫
ISSN : 3048-7137

**ARAY**
Kannada Online Double Blind Peer-Review Quarterly
Research Journal
Volume-2, Number-2, April-June 2025
https://aray.in/

ಪುಟ/Pages : 134

ಹಕ್ಕು/@: ಪ್ರಕಾಶಕರು

ಬೆಲೆ/Price : **ರೂ. 50/–**

ಸಂಪಾದಕ
**ಪ್ರೊ. ಬಸವರಾಜ ಕೋಡಗುಂಟಿ**

ಅತಿಥಿ ಸಂಪಾದಕ
**ಪ್ರೊ. ಕೆ. ಶಾರದಾ**

ಸಲಹಾ ಮಂಡಳಿ
**ಪ್ರೊ. ಪುರುಷೋತ್ತಮ ಬಿಳಿಮಲೆ, ಪ್ರೊ. ನಟರಾಜ್ ಬೂದಾಳ್**
**ಪ್ರೊ. ಸತ್ಯನಾಥ್ ಟಿ.ಎಸ್. ಪ್ರೊ. ಶ್ರೀನಿವಾಸ ವಿ. ಪಾಡಿಗಾರ, ಪ್ರೊ. ಶ್ರೀಧರ್ ಎಸ್.ಎನ್.**

ಸಂಪಾದಕ ಮಂಡಳಿ
**ಪ್ರೊ. ಚೈತ್ರಾ ಪುಟ್ಟಸ್ವಾಮಿ, ಪ್ರೊ. ಮನು ವಿ ದೇವದೇವನ್**
**ಪ್ರೊ. ಗಿಲ್ ಬೆನ್–ಹೆರುತ್, ಪ್ರೊ. ತಾರಕೇಶ್ವರ್ ವಿ.ಬಿ., ಪ್ರೊ. ಪರಮಶಿವಮೂರ್ತಿ ಡಿ.ವಿ.**

ಕಾರ್ಯಕಾರಿ ಮಂಡಳಿ
**ಡಾ. ಮಲ್ಲೇಶಪ್ಪ ಸಿದ್ರಾಂಪುರ, ಡಾ. ರಾಮಕೃಷ್ಣ ಜಿ, ಡಾ. ಮಹಾಂತೇಶ ಪಾಟೀಲ್**
**ಡಾ. ಬಸಯ್ಯ ಸ್ವಾಮಿ, ಡಾ. ಮಧು ಬಿರಾದಾರ್, ಶ್ರೀ ರೇಣುಕಾ ಕೊಡಗುಂಟಿ**

ಪ್ರಕಾಶಕರು

**ಪರಶುರಾಮ ಕೋಡಗುಂಟಿ**
ಪ್ರಕಾಶಕ, ಬಂಡಾರ ಪ್ರಕಾಶನ
ಮಸ್ಕಿ–೫೮೪ ೧೨೪, ಜಿ. ರಾಯಚೂರು
ಕರೆ–೯೧ ೯೮೮೬೪ ೦೭೦೧೧
bandaraprakashana@gmail.com
https://bandaraprakashana.com

# ಪ ರಿ ವಿ ಡಿ


| | |
|---|---|
| ಕಾಲದಲ್ಲಿ ಕಲೆಯ ಬಯಲಿನ ತೆಲುಗು ಬಯಲಾಟ<br>**ಸ.ರಘುನಾಥ** | **4-13** |
| ಜನಪದ ರಂಗಭೂಮಿಯಲ್ಲಿ ಪುರಾಣ ಕಥಾನಕಗಳು: ಮರುಚಿಂತನೆ<br>**ಡಿ.ಎಸ್.ಚೌಗಲೆ** | **14-22** |
| ಬಯಲಾಟಗಳಲ್ಲಿ ಮಹಿಳೆಯರು<br>**ಅನಸೂಯ ಕಾಂಬಳೆ** | **23-37** |
| ಗಡಿನಾಡ ಬಯಲಾಟಗಳಲ್ಲಿ ಸಾಮಾಜಿಕ ಮತ್ತು ಸಾಂಸ್ಕೃತಿಕ ಅನನ್ಯತೆ<br>**ಅರುಣ್ ಕುಮಾರ್ ಎಂ ಬಿ** | **38-48** |
| ಮಧ್ಯ ಕರ್ನಾಟಕ ಭಾಗದ ಬಯಲಾಟದ ಸ್ವರೂಪ ಮತ್ತು ಬಯಲಾಟದ ನೆಲೆಗಳು<br>**ಚಿಕ್ಕಣ್ಣ ಯಣ್ಣೆಕಟ್ಟೆ** | **49-87** |
| ಚಕ್ರಬಿಂಬ ಕೋಟೆ: ಒಂದು ಪಾಠ್ಯಿಕ ವಿಶ್ಲೇಷಣೆ<br>**ಡಾ. ಮುನಿರಾಜ ಎ.** | **88-98** |
| ನನ್ನೂರಿನ ನಾಟಕರಂಗ<br>**ಹುಚ್ಚೇಗೌಡ ಎಚ್.** | **99-113** |
| ಆನೇಕಲ್ ತಾಲ್ಲೂಕಿನ ಕೇಳಿಕೆಗಳು<br>**ಕೆ. ಮುನಿಯಪ್ಪ** | **114-121** |
| ಹೆಣ್ಣನ್ನು ಕಟಕಟೆಯಲ್ಲಿ ನಿಲ್ಲಿಸುವ ಚಿತ್ರಪಟ ರಾಮಾಯಣ<br>**ಶ್ವೇತ ಜೆ.** | **122-130** |

Aray, Vol - 2, No.2

# ಮಧ್ಯ ಕರ್ನಾಟಕ ಭಾಗದ ಬಯಲಾಟದ ಸ್ವರೂಪ ಮತ್ತು ಬಯಲಾಟದ ನೆಲೆಗಳು

ಚಿಕ್ಕಣ್ಣ ಯಣ್ಣೆಕಟ್ಟೆ

**ಸೂಚಕ ಪದಗಳು**

ಬಯಲಾಟ, ಮಧ್ಯ ಕರ್ನಾಟಕ, ಜನಪದ ಕಲಾ ಪರಂಪರೆ, ಬಯಲಾಟ ಸ್ವರೂಪ

ಸಾರಲೇಖ

ಮಧ್ಯ ಕರ್ನಾಟಕದ ತುಮಕೂರು, ಮೈಸೂರು, ಚಿತ್ರದುರ್ಗ, ಕೋಲಾರ, ಮಂಡ್ಯ, ಬೆಂಗಳೂರು ನಗರ ಮತ್ತು ಗ್ರಾಮಾಂತರ, ಹಾಸನ, ಚಾಮರಾಜನಗರ, ದಾವಣಗೆರೆ ಭಾಗಗಳಲ್ಲಿ ಬಯಲಾಟ ಕಲೆ ಬಹುಪ್ರಾಚೀನ, ಜನಪದ ಹಾಗೂ ಸಮೂಹಿಕ ಚಟುವಟಿಕೆ ಆಗಿದ್ದು, ಇದನ್ನು ಬಯಲುಕತೆ, ಬಯಲಾಟ, ಕುಣಿಯೋಮೇಳ, ಅಟ್ಟದಾಟ ಎಂಬ ಪರ್ಯಾಯ ಹೆಸರಿನಿಂದ ಕರೆಯಲಾಗುತ್ತದೆ. ಈ ಕಲೆಯಲ್ಲಿ ನೃತ್ಯ, ಸಂಗೀತ, ಮಾತುಗಾರಿಕೆ, ಮುಖವೀಣೆ, ಮೃದಂಗ, ತಾಳ, ಶ್ರುತಿಪೆಟ್ಟಿಗೆ ಮತ್ತು ಆಕರ್ಷಕ ವೇಷಭೂಷಣಗಳೊಂದಿಗೆ ವೈವಿಧ್ಯಮಯ ಕಲಾತ್ಮಕತೆಯು ಕಾಣಿಸುತ್ತದೆ. ಭಾಗವತರು ಪಾತ್ರಧಾರರೊಂದಿಗೆ ಮೌಖಿಕವಾಗಿ ಪದ್ಯಗಳನ್ನು ಕಲಿತಿರುವುದು, ಶೈಲಿವೈವಿಧ್ಯತೆಯ ರಾಗಗಳ (ಕಂದ, ಭಾಮಿನಿ, ಯಾಲಪದ, ಕಾವೇರಿ, ಭೈರವೀರಾಗ

ಇತ್ಯಾದಿ)ಳೊಂದಿಗೆ ಅಭಿನಯಿಸುವುದು ವಿಶೇಷ. ಬಯಲಾಟವು ದೇವಾಲಯದ ಮಂಟಪದಿಂದ ಬೇರೆಯಾದ, ಜನಪರ, ವಾಸ್ತವ ರಂಗ ಮಾದರಿಯಾಗಿದೆ. ಮಧ್ಯ ಕರ್ನಾಟಕದ ಬಯಲಾಟವು ಉತ್ತರ, ದಕ್ಷಿಣ ಕರ್ನಾಟಕ ಮತ್ತು ಕರಾವಳಿ ಯಕ್ಷಗಾನದಿಂದ ಸ್ವರೂಪದಲ್ಲಿ ಭಿನ್ನವಾಗಿದೆ. ಭಾಗವತರಿಗೆ ಶೃತಿ ವಾದ್ಯವಾಗಿ ಮುಖವೀಣೆ ಮುಖ್ಯವಾಗಿದ್ದು, ರಸ ಭಾವಗಳಾದ ರೌದ್ರ, ಕರುಣ, ಶೃಂಗಾರ, ವೀರದ ಮೂಲಕ ಪ್ರಸಂಗಗಳನ್ನು ಪ್ರೇಕ್ಷಕರಿಗೆ ಮನನೀಯವಾಗಿ ತಂದುಕೊಡುತ್ತಾರೆ. ಇಂದಿನ ಇತ್ತೀಚಿನ ಸಂದರ್ಭದಲ್ಲಿ ಈ ಕಲೆಯನ್ನು ಮೂಡಲಪಾಯ ಬಯಲಾಟ/ಮೂಡಲಪಾಯ ಬಯಲುಕತೆ ಎಂದು ಗುರುತಿಸುತ್ತಾರೆ.

ಮಧ್ಯ ಕರ್ನಾಟಕದ ಭೌಗೋಳಿಕ ಪರಿಸರದ ಭಾಗಗಳಾದ ತುಮಕೂರು, ಮೈಸೂರು, ಚಿತ್ರದುರ್ಗ, ಕೋಲಾರ, ಮಂಡ್ಯ, ಬೆಂಗಳೂರು ಗ್ರಾಮಾಂತರ, ಬೆಂಗಳೂರು ನಗರ, ಹಾಸನ, ಚಾಮರಾಜನಗರ, ದಾವಣಗೆರೆ– ಈ ಭೂ ಪ್ರದೇಶಗಳು ಬಯಲಾಟ ಕಲೆಯ ಪ್ರಮುಖ ನೆಲೆಗಳು. ಈ ಕಲೆಗೆ ಬಯಲು ಕತೆ, ಆಟ, ಬಯಲಾಟ, ಕುಣಿಯೋಮೇಳ, ಅಟ್ಟದಾಟ, ಈ ಬಗೆಯ ಪರ್ಯಾಯ ಪದಗಳೊಂದಿಗೆ ಕರೆಯಲಾಗುತ್ತದೆ. ಇದು ಜನಪದ ರಂಗಸಂಬಂಧಿ ಸಾಮೂಹಿಕ ಚಟುವಟಿಕೆಯಾಗಿದ್ದು, ಈ ಕಲೆಯಲ್ಲಿ ಬಹು ಬಗೆಯ ಕಲಾ ವೈವಿಧ್ಯತೆ ಇರುತ್ತದೆ. ಸಂಗೀತ, ನೃತ್ಯ, ಮಾತುಗಾರಿಕೆ, ಆಕರ್ಷಕ ವೇಷಭೂಷಣ, ಈ ಬಯಲಾಟ ಕಲೆಯ ವಿಶೇಷ. ಹಾಡುಗಾರಿಕೆಯಲ್ಲಿ ಪಾತ್ರದಾರರೊಂದಿಗೆ ಮುಮ್ಮೇಳದಲ್ಲಿ ಭಾಗವತನಿದ್ದು; ಆತನಿಗೆ ಶೃತಿ ಹಾಡುಗಾರರಾಗಿ ಹಿಮ್ಮೇಳದವರು ಇರುತ್ತಾರೆ. ಇವರಿಗೆ ಪೂರಕವಾಗಿ ಮುಖವೀಣೆ, ಮೃದಂಗ, ಶ್ರುತಿಪೆಟ್ಟಿಗೆ, ತಾಳದಾರರು ಇರಲೇಬೇಕಾಗಿರುವ ವಾದ್ಯ ಪರಿಕರಗಳು. ಈ ವಾದ್ಯ ಪರಿಕರಗಳಿಂದ ಸಂಗಮಿಸಿದ ಸಂಗೀತ ಸುಧೆ; ಜನಮನ ತಟ್ಟುವಲ್ಲಿ ಯಶಸ್ವಿಯಾಗುತ್ತದೆ. ಪ್ರೇಕ್ಷಕರ ವೀಕ್ಷಕರಿಗೆ ಮನನವಾಗಲೆಂದೇ ಸಂಗೀತವನ್ನು ಹಿನ್ನೆಲೆ ಮುನ್ನೆಲೆಯಲ್ಲಿ ಎತ್ತರದ ಧ್ವನಿಯಲ್ಲಿ ಹಾಡಲಾಗುತ್ತದೆ. ಈ ಸಂಗೀತದಲ್ಲಿ ಮುಖವೀಣೆಯ ಪಾತ್ರ ಅತಿ ಮುಖ್ಯವಾದುದು. ಮುಖವೀಣೆ ಮಧ್ಯ ಕರ್ನಾಟಕ ಭಾಗದ ಬಯಲಾಟದ ಜೀವಸೆಲೆ. ಅತ್ಯಂತ ಪ್ರಭಾವಿ ವಾದನ. ಇದರ ಆಕೃತಿ ಒಂದು ಅಡಿ ಉದ್ದ ಮಾತ್ರ. ಆದರೆ ನಾದ ಮಾಧುರ್ಯ ಮೂರ್ನಾಲ್ಕು ಮೈಲಿಗಳ ದೂರ ತಲುಪುವ ಇಂಪಾದ, ಮಧುರವಾದ, ವೈವಿಧ್ಯ ರಾಗಗಳ, ವಿವಿಧ

ಮಟ್ಟುಗಳ, ರಾಗ ಪ್ರಪಂಚ. ಇದು ಅದ್ಭುತ. ಇದನ್ನು ಗೌಳಿ ವಾದನ ಎಂತಲೂ ಬಯಲು ಸೀಮೆಯಲ್ಲಿ ಕರೆಯುತ್ತಾರೆ.

ಈ ಮಧ್ಯ ಕರ್ನಾಟಕದ ಬಯಲಾಟ, ಕರ್ನಾಟಕದ ಇತರ ಪ್ರದೇಶಗಳಾದ ಉತ್ತರ ಕರ್ನಾಟಕ, ದಕ್ಷಿಣ ಕರ್ನಾಟಕ, ಉತ್ತರ ಕನ್ನಡ– ಹೀಗೆ ಕರ್ನಾಟಕದ ಇತರ ಭೂ ಭಾಗಗಳಿಗಿಂತ ಕೊಂಚ ಭಿನ್ನ ಸ್ವರೂಪದಲ್ಲಿ ಪ್ರಕಟವಾಗುತ್ತದೆ. ಇದೊಂದು ಪ್ರಾಚೀನ ರಂಗ ಸ್ವರೂಪವಾಗಿದ್ದು; ಸಮಷ್ಟಿಯ ಕಲೆ. ಅವಿದ್ಯಾವಂತರೇ ಇದರ ಸಂಪನ್ನರು; ಪಾತ್ರಧಾರಿಗಳು. ಬಯಲಾಟವನ್ನು ಕಲಿಸುವವರಿಗೆ 'ಭಾಗವತ' ಎಂತಲೇ ಕರೆಯುತ್ತಾರೆ. ಶಿಷ್ಟ ರಂಗಭೂಮಿಯಾದ ಪೌರಾಣಿಕ ನಾಟಕಗಳನ್ನು ಕಲಿಸುವವರಿಗೆ ಹಾರ್ಮೋನಿಯಂ ಮಾಸ್ಟರ್ ಎಂದು ಕರೆಯುತ್ತಾರೆ. ಇವರು ಸಾಮಾನ್ಯವಾಗಿ ವಿದ್ಯಾವಂತರಾಗಿದ್ದು, ಹಾರ್ಮೋನಿಯಂ ಸಂಗೀತ ಶಿಕ್ಷಣ ಪಡೆದವರಾಗಿರುತ್ತಾರೆ. ಆದರೆ ಬಯಲಾಟದ ಭಾಗವತರಲ್ಲಿ ಅವಿದ್ಯಾವಂತರೇ ಅಧಿಕ. ತಮ್ಮ ಅವಿದ್ಯಾವಂತಿಕೆಯ ನಡುವೆಯೂ, ತಮಗೆ ಸಿಕ್ಕ ಅವಕಾಶದಲ್ಲಿ ನೋಡಿ, ಕಲಿತವರೆಂದೇ ಹೇಳಿಕೊಳ್ಳುತ್ತಾರೆ. ಗ್ರಾಮೀಣ ಪರಿಸರದ ಈ ಭಾಗವತರುಗಳು ಆರರಿಂದ ಹತ್ತು ಬಯಲಾಟ ಪ್ರಸಂಗಗಳನ್ನು ಮೌಖಿಕ ನೆಲೆಯಲ್ಲಿಯೇ ಕಲಿತು, ತಮ್ಮ ಎದೆಯಾಳದಲ್ಲಿ ಇರಿಸಿಕೊಂಡು, ತಾಳದೊಂದಿಗೆ ಪೂರ್ಣಪ್ರಸಂಗವನ್ನು ಹಾಡುತ್ತಾರೆ. ಸಂಭಾಷಣೆಯೂ ಅಷ್ಟೇ. ಕೆಲವು ಪ್ರಸಂಗಗಳ ಪಾತ್ರಗಳಿಗೆ ಅವರವೆ ಪಾತ್ರದಾರಿಕೆಗೆ ಬೇಕಾಗುವ ಸಂಭಾಷಣೆಯನ್ನು ದೈನಂದಿನ ಪ್ರಾಕ್ಟೀಸ್‌ನಲ್ಲಿ ಕಲಿಸುತ್ತಾರೆ. ಮಾದರಿಗಾಗಿ ಹಳೆಯದಾದ ಜರಾಜೀರ್ಣ ಸ್ಥಿತಿಯಲ್ಲಿರುವ ಕೈಬರಹದ ಹಸ್ತಪ್ರತಿಯನ್ನು ಸಾಮಾನ್ಯವಾಗಿ ಭಾಗವತರು ತಮ್ಮ ಬಳಿ ಇಟ್ಟುಕೊಂಡಿರುತ್ತಾರೆ. ಕೆಲವರು ಇದನ್ನು ವಿದ್ಯಾವಂತ ಯುವಕರ ಸಹಕಾರದಿಂದ ಕಥೆಯ ಓಟಕ್ಕೆ ಮಾತ್ರ ಒಂದು ಮಾರ್ಗದರ್ಶಿ ಪ್ರತಿಯಾಗಿ ಬಳಸುವುದು ವಾಡಿಕೆ. ಉಳಿದಂತೆ ಬಯಲಾಟದ ಪ್ರಸಂಗಗಳಿಗೆ ಆಯಾಯ ಪಾತ್ರಗಳಿಗೆ; ಬಯಲಾಟದಲ್ಲಿ ಪಾತ್ರಗಳನ್ನು ಯಾಸ, ವೇಷ ಎಂತಲೂ ಕರೆಯುತ್ತಾರೆ. ಉದಾ: ಕೌರವನ ವೇಷ, ಅಭಿಮನ್ಯು ವೇಷ, ದ್ರೌಪತಿ ವೇಷ ಇತ್ಯಾದಿ. ಈ ಪಾತ್ರಗಳಿಗೆ ನೃತ್ಯ ಸಂಯೋಜನೆ, ಕಲಿಸುವಿಕೆ, ಭಾಗವತನ ವಿಶೇಷ. ಬಯಲಾಟದ ಭಾಗವತನಿಗೆ ಸಂಗೀತ ಜ್ಞಾನ ಅತ್ಯಂತ ಮುಖ್ಯ. ಇದು ಪುಸ್ತಕ ಅಥವಾ ಪ್ರಸಂಗ ಸಾಹಿತ್ಯ ನೋಡಿಕೊಂಡು ಹಾಡುವುದಿಲ್ಲ. ಭಾಗವತ, ಪ್ರತಿ ಪಾತ್ರ, ಸಂದರ್ಭಗಳಿಗೆ ತಕ್ಕಂತೆ, ನಾನಾ ಶೈಲಿಯ, ದಾಟಿಯ, ಸಂಗೀತವನ್ನು ಹಾಡುತ್ತಾನೆ. ಇದರಲ್ಲಿ ಕಂದ, ಭಾಮಿನಿ, ಮಟ್ಟು, ಯಾಲಪದ, ಈ ಬಗೆಯ ವೈವಿಧ್ಯಮಯವಾದ ರಾಗಗಳೊಂದಿಗೆ, ಮುಖವೀಣೆಯ ಶ್ರುತಿಯೊಂದಿಗೆ ಹಾಡುತ್ತಾನೆ. ಹಿಮ್ಮೇಳದವರು

ISSN : 3048-7137

ಮೊದಲ ಚರಣಗಳನ್ನು ಆಲಾಪದ ಮಾದರಿಯಲ್ಲಿ ಹಾಡುತ್ತಾರೆ. ಪಾತ್ರಧಾರಿಯೂ ಭಾಗವತರೊಂದಿಗೆ ಧ್ವನಿಗೂಡಿಸುವುದಿದೆ.

ಬಯಲಾಟ ಪ್ರಸಂಗಗಳಲ್ಲಿ ಬಳಸುವ ರಾಗಗಳನ್ನು ಭೈರವೀರಾಗ, ಕಾಂಬೋಧಿರಾಗ, ತೋಡಿ ರಾಗ, ಬೇಗಡೆ ರಾಗ, ಕಾವೇರಿ ರಾಗ, ಸೌರಾಷ್ಟ್ರ ರಾಗ, ಸಾವೇರಿ ರಾಗ–ತ್ರಿಪುಡೆ, ಜಂಪೆ, ಯಾಲಪದ ಎಂದು ಭಾಗವತರು ಪರಿಚಯಿಸುತ್ತಾರೆ. ಕಂದ, ದರವು, ರೂಪಕ, ಭಾಮಿನಿ ಎಂದೂ ಕರೆಯುವುದಿದೆ. ಇವುಗಳನ್ನು ದ್ವಿಪದಿ, ತ್ರಿಪದಿ, ಚೌಪದಿ, ಷಟ್ಪದಿಗಳಲ್ಲಿ ಹಾಗೂ ವಿವಿಧ ತಾಳಮಟ್ಟುಗಳು, ವರ್ಣ ವೃತ್ತಾಂತಗಳಲ್ಲಿ; ಬಯಲಾಟದ ಸಂಗೀತ ಪರಂಪರೆ ಬೆಳೆದು ಬಂದಿದೆ. ಈ ಬಗೆಯ ಪದ್ಯಗಳು ಅಪ್ಪಟ ಶಿಷ್ಟ ಕಾವ್ಯ ಮೂಲದವುಗಳಾದರೂ; ಜನಪದ ಹಿನ್ನೆಲೆಯ ಭಾಗವತರು ಈ ಪದ್ಯಗಳನ್ನು ಮನನ ಕ್ರಿಯೆಯ ಕಾರಣಗಳಿಂದ ಒಂದು ಬಗೆಯಲ್ಲಿ ಮೌಖಿಕ ಕಾವ್ಯವೆಂಬಂತೆ ಹೇಳುತ್ತಾ ಹೋಗುತ್ತಾರೆ. ಏಕೆಂದರೆ ಬಯಲಾಟದ ಭಾಗವತರು ಹೆಚ್ಚಿನವರು ಅವಿದ್ಯಾವಂತಿಕೆಯ ಪರಂಪರೆಯಿಂದ ಬಂದವರು. ಉದಾ: ತುಮಕೂರು ಜಿಲ್ಲೆಯ ಗುಬ್ಬಿ ತಾಲ್ಲೂಕು ಚೇಳೂರು ಹೋಬಳಿಯ ಇರಕಸಂದ್ರದ ಭಾಗವತ ಚಂದಪ್ಪ, ಯಣ್ಣೆಕಟ್ಟೆ ನಾಗಮ್ಮನವರ ನಿಂಗಣ್ಣ; ಸಿರಾ ತಾಲ್ಲೂಕು ಶಾಗದಡು ಲಕ್ಷ್ಮೀ ರಾಮೇಗೌಡ, ಬಂದಕುಂಟೆ ಗೋಪಾಲಯ್ಯ, ಬುಕ್ಕಾಪಟ್ಟಣ ಬಂಗಾರಿ–ಹಟ್ಟಿ ದೊಡ್ಡಯ್ಯ ಇವರುಗಳು ಅಪ್ಪಟ ಅವಿದ್ಯಾವಂತರು. ಆದರೂ ಬಯಲಾಟ ಪ್ರಸಂಗದ ವಿವಿಧ ಮಟ್ಟುಗಳನ್ನು ಒಬ್ಬೊಬ್ಬ ಭಾಗವತರೂ 50 ರಿಂದ 70 ಪದ್ಯಗಳನ್ನು ಕಂಠಪಾಠದ ಮಾದರಿಯಲ್ಲಿ ಹೇಳುತ್ತಾ; ತಾವು ಕಲಿಸುತ್ತಿದ್ದ ಪ್ರಸಂಗಗಳ ಪಾತ್ರದವರಿಗೆ ಕಂಠಪಾಠದ ಮಾದರಿಯಲ್ಲಿ ಕಲಿಸುತ್ತಿದ್ದರು. ತುಂಬಾ ಅಚ್ಚುಕಟ್ಟಾಗಿ, ಅರ್ಥಕ್ಕೆ ಒಂದಿಷ್ಟೂ ಚ್ಯುತಿ ಬಾರದ ಹಾಗೆ ಪದ್ಯಗಳನ್ನು ಹೇಳುತ್ತಿದ್ದ ರೀತಿ, ನಿಜಕ್ಕೂ ಸೋಜಿಗ, ಇದು ಅಭಿಜಾತ ಪರಂಪರೆಯ ಪ್ರತೀಕ. ಇಂದಿಗೂ ಇದರ ಮುಂದುವರಿಕೆಯ ಕೆಲವು ಮಾದರಿಗಳನ್ನು ಮಧ್ಯ ಕರ್ನಾಟಕದ ಬಯಲಾಟಗಳಲ್ಲಿ ಕಾಣಬಹುದಾಗಿದೆ.

ಬಯಲಾಟ ಸಂಗೀತದ ವಿವಿಧ ರಸ ಭಾವಗಳಾದ ರೌದ್ರ, ಕರುಣಾ, ಶೃಂಗಾರ, ವೀರ, ಈ ಅರ್ಥಪೂರ್ಣವಾದ ರಾಗ ಸಂಯೋಜನೆಯ ಮೂಲಕ ಭಾಗವತ ಪ್ರೇಕ್ಷಕರನ್ನು ರಾತ್ರಿಪೂರ್ತಿ ಪ್ರಸಂಗದೊಂದಿಗೆ ಹಿಡಿದಿಡುವ ಚಮತ್ಕಾರಿಕೆಯನ್ನು ತೋರುವುದು ಭಾಗವಂತಿಕೆಯ ವಿಶೇಷ. ಭಾಗವತನಿಗೆ ಶೃತಿ ವಾದ್ಯವಾಗಿ ಸಹಾಯ ಮಾಡುವುದು ಮುಖವೀಣೆ. ಭಾಗವತ ದೇವಗಣಗಳ ಶೃತಿಗೀತೆಯನ್ನು ಕಂದ ಪದ್ಯದ ಮೂಲಕ ಆರಂಭಿಸುವುದು ವಿಶೇಷ. ಈ ದೇವತಾ ಸ್ತುತಿ ಗೀತೆ ಮುಗಿದ ತರುವಾಯ ಗಣಪತಿಯ ಆಗಮನ, ನಂತರ ಸರಸ್ವತಿ, ಪುರೋಹಿತರು ಹೀಗೆ ಸುಮಾರು ಅರ್ಧ

ಗಂಟೆಯ ಕಾಲ ಮುಖವೀಣೆ ಭಾಗವತರ ಚಮತ್ಕಾರಿಕೆ ರೋಚಕವಾಗಿ ಪ್ರಕಟವಾಗುತ್ತದೆ.

ಬಯಲಾಟ ವಾಸ್ತವವಾಗಿ; ರಂಗಮಂದಿರ, ದೇವಾಲಯದ ಮಂಟಪ ಈ ಬಗೆಯ ಸುಸಜ್ಜಿತ ಮಂಟಪ ಅಥವಾ ಥಿಯೇಟರ್ ಮಾದರಿಯ ಸ್ಥಳವನ್ನು ಅಪೇಕ್ಷಿಸದ, ಜನಪರವಾದ, ಬೀದಿಯ ಸರ್ವರಿಗೂ ಅವಕಾಶವಾಗುವ ರೀತಿಯ, ಒಂದು ಬಗೆಯ ರಂಗ ಮಾದರಿಯನ್ನು ಅನುಸರಿಸಿ ಬೆಳೆದು ಬಂದ ಕಲೆ. ಬಯಲು ಸೀಮೆಯ ತುಮಕೂರು, ಕೋಲಾರ, ಚಿತ್ರದುರ್ಗ, ಬೆಂಗಳೂರು ಗ್ರಾಮಾಂತರ ಪ್ರದೇಶಗಳಲ್ಲಿ ಇಂದಿಗೂ ಪ್ರದರ್ಶನಗೊಳ್ಳುವ ಈ ಆಟಕ್ಕೆ ವರ್ತಮಾನದಲ್ಲಿ ಮೂಡಲಪಾಯ ಯಕ್ಷಗಾನ, ಮೂಡಲಪಾಯ ಬಯಲಾಟ, ಮೂಡಲಪಾಯ ಬಯಲು ಕತೆ ಎಂದೇ ಕರೆಯುತ್ತಾರೆ. ಮೂಡಲಪಾಯ ಎಂಬ ಪದ ಪ್ರಯೋಗ ತೀರ ಇತ್ತೀಚಿನದು ಎಂಬುದು ಹಿರಿಯ ಭಾಗವತ, ಯಣ್ಣೆಕಟ್ಟೆ ನಾಗಮ್ಮನವರ ನಿಂಗಯ್ಯ ಅವರದ್ದು. ಮೂಡಲಪಾಯ ಎಂಬುದು ಸೂರ್ಯನಾರಾಯಣನನ್ನು ಅನುಸರಿಸಿ, ರೂಢಿಯಾದ ಪದ. ಪಾಯ ಎಂದರೆ ಅಟ್ಟು ಅಥವಾ ಸ್ಟೇಜ್ ಎಂದೇ ಕರೆಯುತ್ತಾರೆ. ವಾಸ್ತವವಾಗಿ, ಕರಾವಳಿ ಯಕ್ಷಗಾನದಲ್ಲಿಯೂ ಈ ದಿಕ್ಕನ್ನೇ ಉದ್ದೇಶಿಸಿ, ತೆಂಕ ತಿಟ್ಟು, ಬಡಗ ತಿಟ್ಟು ಎಂಬ ಭಿನ್ನತೆಯನ್ನು ಗುರುತಿಸಲಾಗಿದೆ. ಹೌದು ಈ ಎರಡು ಹೆಸರಿನ ಯಕ್ಷಗಾನ ಪ್ರಸಂಗಗಳಲ್ಲಿನ ಹಾಡು, ಕಂದಗಳಲ್ಲಿ ಏಕತಾನತೆ ಕಂಡುಬಂದರೂ, ನೃತ್ಯ ಹಾಗೂ ಬಳಸುವ ವಾದ್ಯ ಪರಿಕರಗಳಲ್ಲಿ ಕೊಂಚ ಬದಲಾವಣೆಯನ್ನು ಗುರುತಿಸಲಾಗುತ್ತಿದೆ. ಕರಾವಳಿಯ–ಕಾಸರಗೋಡಿನಿಂದ ಮಂಗಳೂರು, ಪುತ್ತೂರು, ಉಡುಪಿ, ಕುಂದಾಪುರದತನಕ ತೆಂಕ ತಿಟ್ಟಿನ ಸ್ವರೂಪವನ್ನು ಗುರುತಿಸಿದರೆ, ಕುಂದಾಪುರದಿಂದ ಉತ್ತರೋತ್ತರವಾಗಿ ಭಟ್ಕಳ, ಹೊನ್ನಾವರ, ಶಿರಸಿ, ಕುಮಟಾ, ಕಾರವಾರ, ದಾಂಡೇಲಿ, ಸಾಗರ, ಹೊಸನಗರ, ಶಿವಮೊಗ್ಗ–ಈ ಘಟ್ಟದ ಮೇಗಲಿನ ಪ್ರದೇಶಗಳ ಆಟಕ್ಕೆ ಬಡಗ ತಿಟ್ಟು ಎಂದೇ ಕರೆದುಕೊಳ್ಳುತ್ತಾರೆ. ಈ ಎರಡೂ ಯಕ್ಷಗಾನ ಪ್ರಭೇದಗಳು ಗುರುತಿಸಿಕೊಳ್ಳುವುದು ದಿಕ್ಕುಗಳ ಮೂಲದಿಂದ. ತೆಂಕ (ದಕ್ಷಿಣ) ಬಡಗ ಎಂದರೆ ಉತ್ತರ. ಹಾಗೆಯೇ ಮೂಡಲಪಾಯವು ಗುರುತಿಸಿಕೊಂಡಿರುವುದು, ಮೂಡಲ ದಿಕ್ಕಿನ ಮೂಲಕವೇ ಎಂಬುದನ್ನು ಹೆಚ್ಚು ಸಮರ್ಥನೆಯಾಗಿ ಭಾಗವತ ನಿಂಗಯ್ಯನವರು ವಿವರಿಸುತ್ತಾರೆ.

ಮಧ್ಯ ಕರ್ನಾಟಕದ ಬಯಲಾಟದ ಪ್ರಸಂಗಗಳು ಸಾಮಾನ್ಯವಾಗಿ ಊರ ದೇವರ ಗುಡಿಯ ಮುಂಭಾಗದಲ್ಲಿ ನಡೆಯುತ್ತವೆ. ಇಲ್ಲಿ ಅಟ್ಟು ಅಥವಾ ಸ್ಟೇಜನ್ನು ಪೂರ್ವ ದಿಕ್ಕಿಗೆ ಮುಖಮಾಡಿ ಹಾಕಲಾಗುತ್ತದೆ. ಆಟಗಳು ಆರಂಭವಾಗುವುದು ಸೂರ್ಯ

ಮುಳುಗಿದ ತರುವಾಯ. ಹೀಗೆ ಸುರುವಾದ ಬಯಲಾಟ ಪ್ರಸಂಗಗಳು, ಸೂರ್ಯ ಹುಟ್ಟುವ ತನಕ ಪ್ರದರ್ಶನಗೊಳ್ಳುತ್ತವೆ. ಸೂರ್ಯ ಹುಟ್ಟಿ, ಆತನ ಕಿರಣಗಳು, ಅಟ್ಟಿನ ಮೇಲೆ ಬಿದ್ದಾಗ, ಸಾಕ್ಷಾತ್ ದೇವರೇ ಸೂರ್ಯನಾರಾಯಣನಾಗಿ ಬಂದು ನಮಗೆ ಆಶೀರ್ವದಿಸಿದನೆಂಬ ಬಲವಾದ ನಂಬಿಕೆ ಕಲಾವಿದರದ್ದು ಮತ್ತು ಸಂಘಟಕರದ್ದು, ಗ್ರಾಮಸ್ಥರದ್ದು. ಇದರಿಂದ ತಾವು ಆಡಿದ ಆಟಕ್ಕೆ, ನೋಡಿದ ಜನಕ್ಕೆ, ಮಾಡಿಸಿದ ಮಹಾ ಜನತೆಗೆ, ಸನ್ಮಂಗಳ ಉಂಟಾಯಿತೆಂಬುದು ಮೂಡಲಪಾಯ ಬಯಲಾಟದ ಪರಿಕಲ್ಪನೆ.

ಜನಪದರು ಪೂರ್ವ ದಿಕ್ಕನ್ನು ಮೂಡಲ ಎಂದು ಕರೆಯುತ್ತಾರೆ. ಪಾಯ ಎಂದರೆ ನೆಲೆ, ಸ್ಥಳ, ರೂಪ, ಆದಿ ಎಂದೆಲ್ಲಾ ಅರ್ಥದಲ್ಲಿ ಕರೆಯುತ್ತಾರೆ. ಹೀಗೆ ಮೂಡಲ ದಿಕ್ಕಿಗೆ ಮುಖ ಮಾಡಿಕೊಂಡು ಆಡುವ ಆಟಕ್ಕೆ ಮೂಡಲ ಆಟ, ಮೂಡಲಪಾಯ, ಮೂಡಲ ಬಣ್ಣದ ಆಟ, ಮೂಡಲ ಮೇಳ, ಮೂಡಲ ಕತೆ, ಮೂಡಲ ಬಯಲಾಟ– ಈ ಅರ್ಥದಲ್ಲಿಯೂ ಕರೆಯುತ್ತಿದ್ದರು. ಆದರೆ ಇತ್ತೀಚಿನ ಪ್ರದರ್ಶನಗಳಲ್ಲಿ ಮೂಡಲಪಾಯ ಅಥವಾ ಬಯಲಾಟ ಈ ಪದವನ್ನು ವ್ಯಾಪಕವಾಗಿ ಬಳಸುತ್ತಾರೆ. ವಿಶೇಷವಾಗಿ ಮಂಡ್ಯ, ನಾಗಮಂಗಲ, ಬೆಳ್ಳೂರು, ಕುಣಿಗಲ್, ನೆಲ್ಲಿಗೆರೆ, ತುಮಕೂರಿನ ಗುಬ್ಬಿ, ತುರುವೇಕೆರೆ, ತಿಪಟೂರು– ಈ ಪರಿಸರದಲ್ಲಿ ಇಂದು ವ್ಯಾಪಕವಾಗಿ ಬಳಸುವುದು ಮೂಡಲಪಾಯ ಯಕ್ಷಗಾನ ಎಂಬುದಾಗಿದೆ.

ಸಿರಾ, ಮಧುಗಿರಿ, ಗುಬ್ಬಿ ತಾಲೂಕಿನ ಚೇಳೂರು, ಹಾಗಲವಾಡಿ ಈ ಹೋಬಳಿ ವ್ಯಾಪ್ತಿಯಲ್ಲಿ ವ್ಯಾಪಕವಾಗಿ ಪ್ರದರ್ಶನವಾಗುತ್ತಿರುವ ಬೈಲಾಟಗಳಿಗೆ ಬಯಲು ಕಥೆ, ಕುಣಿಯೋಮೇಳ, ಮೇಳ– ಈ ಹೆಸರಿನಲ್ಲಿಯೇ ಕರೆದುಕೊಳ್ಳುತ್ತಿದ್ದಾರೆ. 1980ರ ದಶಕಗಳ ಈ ಬಗೆಯ ಬಯಲಾಟ ಪ್ರದರ್ಶನಗಳ ಕರಪತ್ರಗಳಲ್ಲಿಯೂ ಬಯಲಾಟ ಪ್ರದರ್ಶನ ಎಂದೇ ಉಲ್ಲೇಖಿಸಿದ್ದಾರೆ. ಆದರೆ ತಿಪಟೂರು ತಾಲೂಕಿನ ಬಿದರೆಗುಡಿ, ಮತ್ತಿಹಳ್ಳಿ, ಹೊನ್ನವಳ್ಳಿ, ಅರಳಗುಪ್ಪೆ, ತುರುವೇಕೆರೆ ತಾಲೂಕಿನ ಬಾಣಸಂದ್ರ, ದಂಡಿನಶಿವರ– ಇಲ್ಲಿನ ಬಯಲಾಟದ ಆಹ್ವಾನ ಪತ್ರಿಕೆಗಳಲ್ಲಿ 'ಶ್ರೀ ಬಿದಿರಾಂಬಿಕ ಕೃಪಾಪೋಷಿತ ಯಕ್ಷಗಾನ, ಶ್ರೀ ಕೆಂಪಮ್ಮ ಕೃಪಾಪೋಷಿತ ಯಕ್ಷಗಾನ' ಎಂಬ ಹೆಸರು ಪ್ರಸ್ತಾಪವಾಗಿರುವುದನ್ನು ಕಾಣಬಹುದು. (ಗಮನಿಸಿ: ಮೂಡಲಪಾಯ ಯಕ್ಷಗಾನ ಬಯಲಾಟ ಒಂದು ಅಧ್ಯಯನ. ಡಾ. ಚಿಕ್ಕಣ್ಣ ಯಣ್ಣೆಕಟ್ಟೆ– 2019, ಅಂಕನಹಳ್ಳಿ ಪ್ರಕಾಶನ ರಾಮನಗರ) ಈ ಭಾಗಗಳಲ್ಲಿ ಇಂದಿಗೂ ಮೂಡಲಪಾಯ ಯಕ್ಷಗಾನ ಕೇಂದ್ರ ಎಂದೇ ಹೆಸರಿಸುವುದು ವಾಡಿಕೆಯಲ್ಲಿದೆ. ಆದರೆ ತಿಪಟೂರು ತಾಲ್ಲೂಕು ಮತ್ತಿಹಳ್ಳಿಯ ಭಾಗವತ ಸಣ್ಣ ದೊಡ್ಡಯ್ಯನವರು ಬಯಲಾಟದ ಹಸ್ತಪ್ರತಿಗಳನ್ನು

ಬರೆದಿದ್ದು; ಇವರು 107 ವರ್ಷಗಳ ಕಾಲ 1876–1983 (2–12–1987 ನಿಧನ) ಬದುಕಿದ್ದವರು. ದೇವಿ ಮಹಾತ್ಮೆ, ಗಯ ಚರಿತ್ರೆ, ತ್ರಿಪುರ ಸಂಹಾರ, ಪಂಚವಟಿ, ಚೋರ ಕಥೆ, ದುಶ್ಯಾಸನ ಕಾಳಗ, ಕುಶಲವರ ಕಥೆ– ಈ ಹಸ್ತಪ್ರತಿಗಳು ಉಪಲಬ್ಧವಿದ್ದು, ಇದರ ಕರ್ತೃ ಮತ್ತಿಹಳ್ಳಿ ಸಣ್ಣ ದೊಡ್ಡಯ್ಯನವರು ಎಂಬ ಬರಹವಿದೆ. (ಗಮನಿಸಿ: ಮೂಡಲಪಾಯ ಯಕ್ಷಗಾನ ಪ್ರಸಂಗ ಸಾಹಿತ್ಯ ಸಂಪುಟ–1, ಸಂ. ಡಾ. ಚಿಕ್ಕಣ್ಣ ಯಣ್ಣೆಕಟ್ಟೆ 2021, ಕೇಂದ್ರ ಗಡಿನಾಡ ಜಾನಪದ ಸಂಪರ್ಕ ಅಧ್ಯಯನ ಕೇಂದ್ರ, ಕಾಳಿದಾಸ ನಗರ, ಸಿರಾ) ಇದೇ ಯಕ್ಷಗಾನ ಎಂಬ ಬಳಕೆಯನ್ನು ಭಾಗವತ ಹಾಗೂ ಹಸ್ತಪ್ರತಿ ತಯಾರಕರಾದ ಶಿರಾ ತಾಲ್ಲೂಕು, ಮೇಲುಕುಂಟೆ ಗ್ರಾಮದ ಪುರಾಣ ಗೋಪಾಲಾಚಾರ್ಯರು ರಚಿಸಿರುವ ಐರಾವತ ಯಕ್ಷಗಾನ ಈ ಹಸ್ತಪ್ರತಿಯಲ್ಲಿಯೂ ತಮ್ಮ ಹೆಸರು, ಯಕ್ಷಗಾನ ಪದ ಬಳಸಿರುವುದನ್ನು ಕಾಣಬಹುದು. "ಅಪ್ಪ ಬಾಲಕ ಶ್ರೀ ಮೇಲುಕುಂಟೆಪುರವನ್ನು ಪರಿಪಾಲಿಸುವ ಶ್ರೀ ವೇಣುಗೋಪಾಲಸ್ವಾಮಿ ಪೂರ್ಣ ಭಕ್ತರಾದ ಪುರಾಣ ಗೋಪಾಲಾಚಾರ್ಯರಿಂದ ರಚಿಸಲ್ಪಟ್ಟಿರುವ ಈ ಯಕ್ಷಗಾನ ಶ್ಲಾಘನೀಯವಾಗಿರುವುದಲ್ಲದೆ ಆಗಿದ್ದಾಂಗ್ಗೆ ಮನರಂಜನೆಯನ್ನು ನೀಡುವಂತೆ ವರವನ್ನು ನೀಡಿರುತ್ತೇನೆ. ನಾನು ಬಂದು ಬಹಳ ಹೊತ್ತಾಯಿತು, ನಾನಿನ್ನು ಸ್ವಸ್ಥಾನಕ್ಕೆ ತೆರಳುತ್ತೇನೆ. ಸೂತ್ರಧಾರ ಈ ಪ್ರಸಂಗಕ್ಕೆ ನಿನ್ನದೇ ಅಧಿಕಾರ" (ಮೂಡಲಪಾಯ ಯಕ್ಷಗಾನ ಪ್ರಸಂಗ ಸಾಹಿತ್ಯ ಸಂಪುಟ–1, ಸಂ.ಡಾ. ಚಿಕ್ಕಣ್ಣ ಯಣ್ಣೆಕಟ್ಟೆ, ಪ್ರಸ್ತಾವನೆ ಐರಾವತ).

ಹೀಗೆ ಮಧ್ಯ ಕರ್ನಾಟಕದ ಇಂದಿನ ಬಯಲಾಟಗಳಿಗೆ ಮೂಡಲ ಯಕ್ಷಗಾನ ಎಂದೂ, ಬಯಲಾಟ, ಬಯಲು ಕಥೆಯೆಂದೂ ಕರೆಯುತ್ತಾರೆ. ಸಾಮಾನ್ಯವಾಗಿ ಈ ಪದ ಬಳಕೆಯಲ್ಲಿ ವಿದ್ಯಾವಂತಿಕೆ, ನಾಗರಿಕ ಮಾಧ್ಯಮಗಳ ಸಂಪರ್ಕವು ಕಾರಣವಾಗುತ್ತಿದೆ. ಹೆಚ್ಚು ವಯಸ್ಸಾದ, ಕುರಿಗಾಯಿಗಳೂ ಸೇರಿದಂತೆ ಹಿರಿಯರು ಹೇಳುವುದು 'ಬಯಲು ಕತೆ' ಎಂದು. ವಿದ್ಯಾವಂತರು, ನಾಗರಿಕ ಸೌಲಭ್ಯಗಳಾದ ಮೊಬೈಲ್, ಪೇಪರ್ ಓದುವ, ಕರಪತ್ರ ಗಮನಿಸುವ ಒಟ್ಟಾರೆ ಕಲಿತವರು ಕರೆಯುವುದು ಯಕ್ಷಗಾನ ಬಯಲಾಟ, ಯಕ್ಷಗಾನ ಮೂಡಲಪಾಯ ಎಂತಲೇ. ಹಾಗಾಗಿ ದಾವಣಗೆರೆ ಜಿಲ್ಲಾ ಭೂಪ್ರದೇಶದಿಂದ ದಕ್ಷಿಣಕ್ಕೆ ಮೈಸೂರಿನ ತನಕ, ಪೂರ್ವದ ಕೋಲಾರದವರೆಗಿನ ತುಮಕೂರು, ಚಿತ್ರದುರ್ಗ, ಹಾಸನ, ಮೈಸೂರು, ಮಂಡ್ಯ, ರಾಮನಗರ, ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ ಇಲ್ಲಿ ಖಚಿತವಾಗಿ ಮೂಡಲಪಾಯ ಯಕ್ಷಗಾನ ಎಂದು ಕರೆಯುತ್ತಾರೆ. ಈ ಭಾಗದ ಭಾಗವತರಲ್ಲಿಯೂ ಈ ಬದಲಾವಣೆಯಾಗುತ್ತಿದ್ದು, ಅವರು ಸಹ ಮೂಡಲಪಾಯ ಯಕ್ಷಗಾನ ಸಂಘ, ಸಮಿತಿ, ಕಲಾವಿದ, ಭಾಗವತ, ಪ್ರಸಂಗ, ಸಂಘಟಕ,

ವೇಷಭೂಷಣಗಳನ್ನು ಉಲ್ಲೇಖಿಸುವಾಗ 'ಮೂಡಲಪಾಯ' ಈ ಪದವನ್ನು ಬಳಸುವುದು ವಾಡಿಕೆಯಾಗಿದೆ.

ಮಧ್ಯ ಕರ್ನಾಟಕ ಬಯಲಾಟದ ಸ್ವರೂಪದಲ್ಲಿ ಪ್ರದರ್ಶನಗೊಳ್ಳುತ್ತಿರುವ ಕೋಲಾರ, ಬೆಂಗಳೂರು ಗ್ರಾಮಾಂತರದ ದೊಡ್ಡಬಳ್ಳಾಪುರ, ಹೊಸಕೋಟೆ, ಇಲ್ಲಿ ಮಾತ್ರ ಬಯಲಾಟಕ್ಕೆ ಪರ್ಯಾಯವಾಗಿ ಕೇಳಿಕೆ ಯಕ್ಷಗಾನ, ಯಕ್ಷಗಾನ ಕೇಳಿಕೆ– ಈ ಪದವನ್ನು ಬಳಸುತ್ತಿದ್ದಾರೆ. ಕೋಲಾರ ಗ್ರಾಮಾಂತರ ತಾಲ್ಲೂಕಿನ ಬಳಮಾರನ ಹಳ್ಳಿಯಲ್ಲಿ ಒಂದು ಕೇಳಿಕೆ ತಂಡವಿದ್ದು, ಭಾಗವತ ಬಳಮಾರನಹಳ್ಳಿ ಬಸವರಾಜು ಇದರ ನೇತೃತ್ವ ವಹಿಸಿಕೊಂಡು, ಕಳೆದ 50 ವರ್ಷಗಳಿಂದ, ದುಶ್ಯಾಸನ ವಧೆ, ರತಿ ಕಲ್ಯಾಣ, ಲವಕುಶಲರ ಕಾಳಗ, ದೇವಿ ಮಹಾತ್ಮೆ– ಈ ಪ್ರಸಂಗಗಳನ್ನು ಪ್ರದರ್ಶಿಸುತ್ತಾ ಬರುತ್ತಿದ್ದಾರೆ. ಬಯಲಾಟ ಪ್ರದರ್ಶನಕ್ಕೆ ಬಳಸುವ ಮುಖ ವೀಣೆ, ಮದ್ದಳೆ, ಶ್ರುತಿ ಪಟ್ಟಿಗೆ, ತಾಳವಾದನಗಳೇ ಇಲ್ಲಿಯೂ ಪ್ರಧಾನವಾದಗಳು.

ಹೆಗ್ಗಡೆದೇವನಕೋಟೆ, ಹುಣಸೂರು, ಈ ಪರಿಸರದಲ್ಲಿ ಬಯಲಾಟ ಸ್ವರೂಪದಲ್ಲಿಯೇ ಪ್ರದರ್ಶನವಾಗುತ್ತಿರುವ ಪ್ರದರ್ಶನಕ್ಕೆ ಘಟ್ಟದ ಕೋರೆ ಎಂದು ಕರೆಯುತ್ತಾರೆ. ಹೆಗ್ಗಡೆ ದೇವನ ಕೋಟೆ ತಾಲ್ಲೂಕಿನ, ಕೋಳೂರಿನ ಬಸವರಾಜ ಅರಸ್, ಘಟ್ಟದ ಕೋರೆ ಪ್ರಸಂಗವನ್ನು ಹೆಚ್ಚು ವಿಸ್ತರಿಸಿದವರು. ಅವರ ಕುಟುಂಬದ ಕೆಲವರು ಹಾಗೂ ಭಾಗವತ ನಾಗರಾಜ ಅವರ ಭಾಗವಂತಿಕೆಯಲ್ಲಿ ಘಟ್ಟದ ಕೋರೆಯ ಹೆಸರಿನ ಬಯಲಾಟದ ಪ್ರಸಂಗಗಳಾದ ವಾಲಿ ವಧೆ, ಜಟಾಯು ಮೋಕ್ಷ, ಜಾಂಬವತಿ ಕಲ್ಯಾಣ, ಲವಕುಶ–ಈ ಬಗೆಯ ಪ್ರಸಂಗಗಳನ್ನು ಪ್ರದರ್ಶಿಸುತ್ತಿದ್ದಾರೆ. ಇಲ್ಲಿಯೂ ಪ್ರಧಾನವಾಗಿ ಮುಖವೀಣೆಯನ್ನು ರಂಗವಾದ್ಯವನ್ನಾಗಿ ಬಳಸುವುದಿದೆ.

ಮಧ್ಯ ಕರ್ನಾಟಕದ ಬಯಲಾಟ ಸಂಪ್ರದಾಯದಲ್ಲಿ ಎರಡು ಬಗೆಯ ಸಂಪ್ರದಾಯಗಳನ್ನು, ತಿಪಟೂರು ಪರಿಸರದಲ್ಲಿ ಗುರುತಿಸುತ್ತಾರೆ. ಅವೆಂದರೆ : 1. ಉತ್ತರಾದಿ ಯಕ್ಷಗಾನ 2. ದಕ್ಷಿಣಾದಿ ಯಕ್ಷಗಾನ

ಉತ್ತರಾದಿ ಯಕ್ಷಗಾನವನ್ನು ಉತ್ತರ ಭಾರತದ ಮೂಲಕ್ಕೆ ವಿಶೇಷವಾಗಿ ಮಹಾರಾಷ್ಟ್ರ, ಪುಣೆ– ಈ ಭಾಗಗಳಿಗೆ ಸಂಬಂಧ ಕಲ್ಪಿಸುತ್ತಾರೆ. ವಿಶೇಷವಾಗಿ ಸಂಗೀತ, ನೃತ್ಯ, ಉಡುಗೆ, ತೊಡಿಗೆ, ಬಣ್ಣಗಾರಿಕೆ, ಇಲ್ಲೆಲ್ಲಾ ಹೆಚ್ಚು ಹೆಚ್ಚು ನಾಗರಿಕತೆಯ ಸ್ಪರ್ಶ ಪಡೆದ ಪೌರಾಣಿಕ (ಸಾಮಗಾನ) ಸ್ವರೂಪದಲ್ಲಿ ಕಾಣುವುದಿದೆ. ಆದರೂ ಬಯಲಾಟದ ಮಾದರಿಯ ಮುಖವೀಣೆ, ಮದ್ದಲೆ, ತಾಳ, ಹಾರ್ಮೋನಿಯಂ, ಸಂಗೀತ ಪರಿಕರ ಗಳಾಗಿ ಬಳಸುತ್ತಾರೆ. ತಿಪಟೂರು ಪರಿಸರದಲ್ಲಿ ಅರಳುಗುಪ್ಪೆಗೆ ಪುಣೆ ಕಡೆಯಿಂದ ಬಂದ ದರ್ಜಿ ರಾಮಣ್ಣ ಎಂಬವರು ಉತ್ತರರಾಯಣ ಬಯಲಾಟದ ಪ್ರತಿಪಾದಕರು.

ದಕ್ಷಿಣಾದಿ ಬಯಲಾಟದಲ್ಲಿ ಅಪ್ಪಟ ದೇಶಿ ಮೂಲ. ಸ್ಥಳೀಯವಾಗಿ ದೊರಕುವ ಚೌಲಿ ಕೂದಲು, ಮೀಸೆಗೆ ಕುರಿ ತುಪ್ಪಟ, ಹಳ್ಳಿಯ ವಸ್ತ್ರ–ಆಭರಣಗಳ ಬಳಕೆ, ಪರಿಕರಗಳಾಗಿ ತಾಳ, ಚಿಟಿಕೆ, ಕುಂಭ, ಮುಖವೀಣೆ, ಪುಂಗಿ, ಈ ಬಗೆಯ ರಂಗ ಸಂಗೀತವಾದನ, ವೇಷಭೂಷಣಗಳ ಬಳಕೆಯನ್ನು ಕಾಣಬಹುದು. ವಾಸ್ತವವಾಗಿ ಪ್ರಸ್ತುತದಲ್ಲಿ ಈ ಬದಲಾವಣೆ ಭಿನ್ನತೆಗಳೇನು ಉಳಿದಿಲ್ಲ. ಬಯಲಾಟಗಳಿಗೂ ಆಧುನಿಕ ಸ್ಪರ್ಶ ಪಡೆದು, ಜಗಜಗಿಸುವ ರಂಗ ಸೀನರಿ, ಉಡುಗೆ ತೊಡುಗೆ, ಧ್ವನಿವರ್ಧಕ, ವಿದ್ಯುತ್‌ಗಳ ಬಳಕೆಯಾದರೆ, ಕಿರೀಟ, ಉಡುಗೆ, ಆಯುಧಗಳಲ್ಲಿಯೂ ಪೌರಾಣಿಕ (ಸಾಮಗಾನ) ಸ್ವರೂಪ ಪಡೆದು, ಪರಸ್ಪರ ಆಕರ್ಷಣೆ, ಪ್ರತಿ ಆಕರ್ಷಣೆಗಳಲ್ಲಿ ಸ್ಪರ್ಧೆ ಏರ್ಪಡುವ ಪರಿಸ್ಥಿತಿಯಲ್ಲಿದ್ದು, ಈ ಬಯಲಾಟಗಳ ಸ್ವರೂಪ, ಪೌರಾಣಿಕ ನಾಟಕಗಳಲ್ಲಿ ವಿಲೀನವಾಗುವ ಪರಿಸ್ಥಿತಿ ಬಂದಿದೆ. ಮುಖವೀಣೆ ಬಳಸದೆ ಬಯಲಾಟ ಪ್ರದರ್ಶನ ನಡೆಯುತ್ತಿದೆ. ಪ್ರದರ್ಶನಕ್ಕೆ ಪುರುಷರೇ ನಿರ್ವಹಿಸುವ ಸ್ತ್ರೀ ಪಾತ್ರಗಳಿಗೆ ಆಹ್ವಾನಿತ ಉದ್ಯೋಗ ನಿರತ ಹೆಂಗಸರನ್ನು ಕರೆತಂದು, ಅವರಿಂದ ಯಕ್ಷಗಾನದ ನೃತ್ಯಕ್ಕೆ ಬದಲಾಗಿ ಶಾಸ್ತ್ರೀಯ ಚಲನಚಿತ್ರಗಳ ನೃತ್ಯವನ್ನು ನಡೆಸುವ ಮೂಲಕ ಆಕರ್ಷಣೆಯ ಅವತಾರ ತೋರಿಸುತ್ತಿದ್ದಾರೆ.

ಬಯಲಾಟದಲ್ಲಿ ಭಾಗವತರು ಹಾಗೂ ಹಿಮ್ಮೇಳದಲ್ಲಿ ಭಾಗವತರೊಂದಿಗೆ ಹಾಡುವ ಒಂದಿಷ್ಟು ಹಾಡುಗಾರರು, ಮದ್ದಲೆಯವರು ರಂಗದ ಬಲಬದಿಯಲ್ಲಿ ನಿಂತು, ಇಡೀ ಆಟ ನಡೆಸಿಕೊಡುವುದು ವಾಡಿಕೆ. ಇದು ಇಂದಿಗೂ ಮುಂದುವರೆದಿದೆ. ಆದರೆ ಕೆಲವು ಕಡೆ ಭಾಗವತ ಹಾಗೂ ಆತನಿಗೆ ಸಹಾಯಕವಾಗಿ ಮೃದಂಗ ಕಲಾವಿದ ಇವರಿಬ್ಬರೂ ರಂಗದ ಮುಖ್ಯಸ್ಥಳದಲ್ಲಿ ಟೇಬಲ್ ಕುರ್ಚಿಯ ಮೇಲೆ ಕುಳಿತು, ಯಕ್ಷಗಾನ ನಡೆಸಿಕೊಡುವ ಕರಾವಳಿ ಸ್ವರೂಪ ಪಡೆಯುತ್ತಿದೆ. ತಿಪಟೂರು ತಾಲ್ಲೂಕು ಅರಳುಗುಪ್ಪೆಯ ಭಾಗವತ ನಂಜಪ್ಪ, ಭಾಗವತ ಪುಟ್ಟಸ್ವಾಮಿ, ಈ ಭಾಗವತರು ಯಕ್ಷಗಾನ ಪ್ರದರ್ಶನವನ್ನು ನಡೆಸಿಕೊಡುತ್ತಿದ್ದಾರೆ. ಇವರಲ್ಲಿ ಮುಖವೀಣೆಯ ಅಪೇಕ್ಷೆಯು ಇರುವುದಿಲ್ಲ, ಇಲ್ಲದಿದ್ದರೂ ನಡೆಯುತ್ತದೆ ಎಂಬ ಭಾವವಿದೆ. ಮುಖವೀಣೆಯ ವಾದಕರ ಅಲಭ್ಯತೆಯು ಇದಕ್ಕೆ ಕಾರಣ ಎನ್ನಲಾಗುತ್ತಿದೆ. ಹೀಗೆ ಮೂಲ ಸ್ವರೂಪದ ಬಯಲಾಟದಲ್ಲಿ ಇಂದು ಮಾರ್ಪಾಡುಗಳ ಸ್ವರೂಪವನ್ನು ಕಾಣಬಹುದಾಗಿದೆ.

ಬಯಲಾಟದ ಸ್ಟೇಜ್ ಇದನ್ನು ಅಟ್ಟು ಎಂದೂ ಕರೆಯುತ್ತಾರೆ. ಇದನ್ನು ಸಾಮಾನ್ಯವಾಗಿ ಮೂಡಲ ದಿಕ್ಕಿಗೆ ಮುಖವಾಗಿಸಿ, 40x30 ಅಡಿ ಅಳತೆಯಲ್ಲಿ ಹಾಕುತ್ತಾರೆ. ಬಂಡಿಯ ಚಕ್ರಗಳನ್ನು ನೆಲಕ್ಕೆ ಹಾಸಿ, ಅದರ ಮೇಲೆ ಮರದ ದಿಮ್ಮಿಗಳನ್ನು

ISSN : 3048-7137

ಹಾಸಿ, ಅದರ ಮೇಲೆ ಮರದ ಹಲಗೆಗಳನ್ನ ಜೋಡಿಸಿ, ಅವು ಅಲುಗಾಡದಂತೆ ಹಗ್ಗದಿಂದ ಬಿಗಿದು ಕಟ್ಟುತ್ತಾರೆ. ಇದರ ಮೇಲೆ ಪಾತ್ರಧಾರಿಗಳು ಕುಣಿಯುತ್ತಾರೆ. ಸಾಮಾನ್ಯವಾಗಿ ಬಯಲಾಟದಲ್ಲಿ ಒಂದು ಅಥವಾ ಎರಡು ಪರದೆಗಳನ್ನು ಮಾತ್ರ ಬಳಸುತ್ತಾರೆ. ಸ್ಟೇಜಿನ ಹಿಂದಕ್ಕೆ ಬಣ್ಣ ಹಾಕುವ ವೇಷಭೂಷಣಕ್ಕೆ ಸ್ಥಳಾವಕಾಶವನ್ನು ಮಾಡಿರುತ್ತಾರೆ. ಇಲ್ಲವೇ ಪಕ್ಕದಲ್ಲಿ ದೇವಾಲಯ ಅಥವಾ ಖಾಲಿ ಮನೆಗಳಿದ್ದರೆ ಅವುಗಳನ್ನೇ ಬಣ್ಣದ ಮನೆಯನ್ನಾಗಿ ರೂಪಿಸಿಕೊಳ್ಳುವುದು ವಾಡಿಕೆ.

ಬಯಲಾಟದ ಪಾತ್ರಗಳನ್ನು ದೇವ ಪಾತ್ರಗಳು, ರೌದ್ರ ಪಾತ್ರಗಳು, ಘೋರ ಪಾತ್ರಗಳು, ಸಾಧು ಪಾತ್ರಗಳು ಎಂಬ ವರ್ಗೀಕರಣ ದಿಂದಲೇ ಗುರುತಿಸುತ್ತಾರೆ. ರೌದ್ರ ಪಾತ್ರಗಳನ್ನು ಕೆಲವೊಮ್ಮೆ ಘೋರ ಪಾತ್ರ, ದೈತ್ಯ ಪಾತ್ರ, ರಾಕ್ಷಸ ಪಾತ್ರ ಎಂತಲೂ ಕರೆಯುತ್ತಾರೆ. ಕೌರವ, ಶತಕಂಠ ರಾವಣ, ರಾಕ್ಷಸ, ದುಶ್ಯಾಸನ, ಈ ಬಗೆಯ ಪಾತ್ರಗಳನ್ನು ರೌದ್ರ ಪಾತ್ರಗಳೆಂದೇ ಕರೆಯುತ್ತಾರೆ. ಇವುಗಳು ರಂಗಸ್ಥಳಕ್ಕೆ ಮೊದಲ ಬಾರಿಗೆ ಆಗಮಿಸುವಾಗ, ರಂಗಸ್ಥಳದ ಎದುರಿಗೆ ಸುಮಾರು 150 ಮೀಟರ್ ದೂರದಿಂದ, ಪ್ರೇಕ್ಷಕರ ನಡುವೆ, ಪ್ರೇಕ್ಷಕರನ್ನು ಎಡಬಲಕ್ಕೆ ಸರಿಸಿ, ಸ್ಥಳ ಮಾಡಿಕೊಂಡು, ತಮಟೆ ಅಥವಾ ನಗಾರಿ ಬಾರಿಸಿಕೊಂಡು, ಅದರ ಹಿಂದೆ ಈ ಪಾತ್ರಗಳು ತಮ್ಮ ಎರಡೂ ಕೈಗಳಿಂದ ಉರಿಯುತ್ತಿರುವ ಪಂಜನ್ನು ಅಥವಾ ತೆಂಗಿನ ಗರಿಯಿಂದ ಕಟ್ಟಿರುವ ಸುಡಿಗೆಯನ್ನು ಹಿಡಿದುಕೊಂಡು ಪ್ರವೇಶಿಸುತ್ತವೆ. ಹೀಗೆ ಪ್ರವೇಶಿಸುವುದಕ್ಕೆ ಕನಿಷ್ಠ 15 ರಿಂದ 20 ನಿಮಿಷಗಳ ಕಾಲಾವಕಾಶದಲ್ಲಿ, ರಂಗದಲ್ಲೇ ನಿಂತು ಊದುವ ಮುಖವೀಣೆ, ತಾಳ, ರಾಗಕ್ಕೆ ತಕ್ಕನಾಗಿ, ತಮಟೆಯ ಸಪ್ಪಳಕ್ಕೆ ಪೂರಕವಾಗಿ ಹೆಜ್ಜೆ ಹಾಕುತ್ತಾ; ಕಿರುಚುತ್ತಾ ಪ್ರವೇಶಿಸುವುದು ವಿಶೇಷ. ಹೀಗೆ ಅಟ್ಟಿನ ಬಳಿಗೆ ಬಂದಾಗ, ಆ ಪಾತ್ರಗಳ ಮುಂದೆ ಕುಂಬಳಕಾಯಿ, ತೆಂಗಿನಕಾಯಿ, ನಿಂಬೆಹಣ್ಣು, ಒಡೆಯುವ ಸಂಪ್ರದಾಯವೂ ಇದೆ.

ಆದಿಶಕ್ತಿ, ಶ್ರೀದೇವಿ, ಈ ಬಗೆಯ ಪಾತ್ರಗಳು ಮೈದುಂಬಿದಾಗ ಕಾಯಿ ಒಡೆಯುವ, ನಿಂಬೆಹಣ್ಣು, ಗೋಮೂತ್ರ ಹಾಕುವುದೂ ಇದೆ. ಕೆಲವು ಕಡೆ ದೇವಿಯ ಮುಂದೆ ಕುರಿ, ಕೋಳಿ, ಬಲಿ ಕೊಡುವ ಸಾಂಪ್ರದಾಯವೂ ಇದೆ.

ಬಯಲಾಟದ ವಿಶೇಷ ಆಕರ್ಷಣೆ, ಚಾರ. ಈತನನ್ನು ಚಾರ, ದೂತ, ಸಾರಥಿ, ಎಂತಲೂ ಕರೆಯಲಾಗುತ್ತದೆ. ಇತ್ತೀಚೆಗೆ ಈ ಪಾತ್ರವನ್ನು 'ಹನುಮನಾಯಕ' ಎಂಬ ವಿಶೇಷ ಹೆಸರಿನಲ್ಲಿಯೂ ಸಂಬೋಧಿಸಲಾಗುತ್ತಿದೆ. ಈ ಹೆಸರು ಕರಾವಳಿ, ಅಥವಾ ಉತ್ತರ ಕರ್ನಾಟಕದ ಭಾಗದ, ಬಯಲಾಟದ ಸ್ವರೂಪವಾದ, ದೊಡ್ಡಾಟದ ಪ್ರಭಾವದಿಂದ, ಹನುಮನಾಯಕ ಎಂದು ಕರೆಯುತ್ತಾರೆ. ಆದರೆ ಬಯಲುಸೀಮೆಯ

ಚಿತ್ರದುರ್ಗ, ತುಮಕೂರು, ಬೆಂಗಳೂರು ಗ್ರಾಮಾಂತರ ಪ್ರದೇಶಗಳಲ್ಲಿ, ಪ್ರದರ್ಶನವಾಗುವ ಬಯಲಾಟದ ಹಸ್ತಪ್ರತಿಗಳಲ್ಲಿ 'ಹನುಮನಾಯಕ' ಎಂದು ಕರೆದಿಲ್ಲ. ಅಲ್ಲೆಲ್ಲಾ ಸಾರಥಿ ಅಥವಾ 'ಚಾರ' ಎಂದೇ ಪಾತ್ರಕ್ಕೆ ಸಂಭೋಧಿಸಿದ್ದಾರೆ. ಬಯಲಾಟದ ವಿಶೇಷ ಇರುವುದೇ ಚಾರನ ಪಾತ್ರದಲ್ಲಿ. ರಂಗದ ಮೇಲೆ ಬರುವ ಪ್ರತಿಯೊಂದು ಪಾತ್ರಗಳ ಪರಿಚಯ, ಅವರ ಸಭೆಗೆ ಬಂದ ಕಾರ್ಯ ಕಾರಣ; ಅವರ ತಂದೆ, ತಾಯಿ, ಸೋದರ ಪರಿಚಯವನ್ನು, ಸಭಿಕರಿಗೆ ಸ್ಪಷ್ಟವಾಗಿ, ಅರ್ಥವತ್ತಾಗಿ, ಪರಿಚಯಿಸುವ, ಸಂಭಾಷಣೆಗಳು ತೀವ್ರ ಕುತೂಹಲಕಾರಿ. ಈತನ ಅಭಿನಯ, ಉಡುಗೆ, ಒಂದು ಬಗೆಯ ಕೋಡಂಗಿಯ ಸ್ವರೂಪದಲ್ಲಿದ್ದರೂ, ಪುರಾಣ, ಚರಿತ್ರೆ, ವರ್ತಮಾನದೊಂದಿಗೆ ಪ್ರತಿ ಪಾತ್ರ, ಅದರ ಸ್ವಭಾವ, ಕಾರ್ಯ ಕಾರಣವನ್ನು, ಸಮರ್ಥವಾಗಿ ಸಭೆಗೆ ಪರಿಚಯಿಸುವುದು ಇದೇ ದೂತನ ಪಾತ್ರಧಾರಿ. ಹಾಗಾಗಿ ಈ ದೂತ ಪ್ರತಿಭಾವಂತ ಕಲಾವಿದನಾಗಿದ್ದು, ಪಳಗಿದ ಹಾಸ್ಯ ಸ್ವಭಾವದವನಾಗಿದ್ದು, ಸಮಕಾಲೀನ ಸಮಾಜದ ಸದ್ಯದ ಆಗು ಹೋಗುಗಳ ಬಗೆಗೆ ತಿಳುವಳಿಕೆ ಉಳ್ಳವನಾಗಿರಬೇಕಾಗುತ್ತದೆ. ಸಾಂದರ್ಭಿಕ ಅಣಕ, ಹಾಸ್ಯ, ಜಿಪುಣತನ, ಸಭ್ಯತೆ, ಊರ ಸ್ವಭಾವಗಳೆಲ್ಲವೂ ಒಂದಲ್ಲಾ ಒಂದು ರೀತಿಯಲ್ಲಿ, ಈ ಹನುಮನಾಯಕನ ಮೂಲಕ, ಪ್ರಕಟವಾಗುತ್ತಾ, ಪ್ರೇಕ್ಷಕರನ್ನು ನಗೆಗಡಲಿನಲ್ಲಿ ಕೊಂಡೊಯ್ಯುವುದು ಹನುಮನಾಯಕ ಸ್ವಭಾವವಾಗಿರುತ್ತದೆ. ಕಾಲದ ತುಡಿತ, ಸಮಯದ ಕೊರತೆ, 10 ಗಂಟೆಯ ಕಾಲಾವಕಾಶ ತೆಗೆದುಕೊಳ್ಳುತ್ತಿದ್ದ ಬಯಲಾಟವನ್ನು ಒಂದು ಅಥವಾ ಒಂದೂವರೆ ಗಂಟೆಗೆ, ಇಳಿಸಿ, ಸಾಂದರ್ಭಿಕ ಒತ್ತಡ, ಹೊಸ ಊರು, ಸ್ಥಳ, ಅಲ್ಲಿನ ಸ್ವಭಾವಗಳ ತಿಳುವಳಿಕೆಯ ಕೊರತೆಗಳಿಂದಾಗಿ, ಹನುಮನಾಯಕನ ಪಾತ್ರವನ್ನು ಹೊರತುಪಡಿಸಿ, ಬಯಲಾಟ ಪ್ರದರ್ಶಿಸುವ ಅತಿ ಕೆಟ್ಟ ಸಂಪ್ರದಾಯ ಸೃಷ್ಟಿಯಾಗುತ್ತಿದೆ.

ಬಯಲಾಟ ಪ್ರದರ್ಶನದಲ್ಲಿ ಹಿನ್ನೆಲೆ ಸಂಗೀತಕ್ಕೆ ಮಹತ್ವದ ಸ್ಥಾನವಿದೆ. 'ಮೇಳ' ಎಂದೇ ಕರೆಯುವ ಬಯಲಾಟಕ್ಕೆ ಇದು ಅರ್ಥಪೂರ್ಣ ಸಂಯೋಜನೆ. ಮುಮ್ಮೇಳದಲ್ಲಿ ಭಾಗವತ, ಮುಖವೀಣೆ, ತಾಳ, ಮೃದಂಗ, ಶ್ರುತಿ ವಾದ್ಯಗಳೊಂದಿಗೆ ವಿವಿಧ ಮಟ್ಟುಗಳನ್ನು ಹಾಡಿದರೆ, ಹಿಮ್ಮೇಳದವರು ಭಾಗವತನು ಆಡಿದ ಇದೇ ಮಟ್ಟನ್ನು ಪುನರ್ ಹಾಡುತ್ತಾ; ಹಿಮ್ಮೇಳ ಮುಮ್ಮೇಳದಲ್ಲಿ ರಸಾತ್ಮಕತೆ ತರುತ್ತಾರೆ. ಇದು ಪ್ರೇಕ್ಷಕರಿಗೆ ಒಂದು ಬಗೆಯಲ್ಲಿ ಪ್ರಸಂಗದ ಗ್ರಹಿಕೆಗೆ ಸಹಾಯವಾಗುತ್ತದೆ. ಜೊತೆಗೆ ಪಾತ್ರಧಾರಿ ನಿಧಾನ ಗತಿಯಲ್ಲಿ ಹಾವ ಭಾವಗಳ ಪ್ರದರ್ಶನಕ್ಕೆ ಸೂಕ್ತ ಅವಕಾಶವಾಗಿ, ಪ್ರೇಕ್ಷಕರಿಗೆ ಆಟ ಸೊಗಸು ಮೂಡಿಸುತ್ತದೆ. ಇದು ಜನಪದರು ತಾವು ವಿದ್ಯಾವಂತರಲ್ಲದಿದ್ದರೂ, ಪ್ರಸಂಗದ ಗ್ರಹಿಕೆಗೆ ಸುಲಭವಾಗುತ್ತದೆ. ಈ ಕಾರಣ ಗಳಿಂದಾಗಿಯೇ ಅವಿದ್ಯಾವಂತ ಪರಂಪರೆಯ ಹಳ್ಳಿಗಳಲ್ಲಿಯೂ ರಾಮಾಯಣ,

ISSN : 3048-7137

ಮಹಾಭಾರತದ ಕಥಾಪ್ರಸಂಗ ಅರಿವಾಗಿರುವ, ಮತ್ತು ರಾವಣ, ಶೂರ್ಪನಿಕೆ, ಶ್ರೀರಾಮ, ಕೈಕೆ, ಮಂಥರೆ, ಸೀತೆ ಈ ಬಗೆಯ ರಾಮಾಯಣ ಪರಂಪರೆ, ಕೌರವ, ದುಶ್ಯಾಸನ, ಭೀಮ, ಕೀಚಕ, ಧರ್ಮರಾಯ, ನಾರದ, ಬಕಾಸುರ, ಅಭಿಮನ್ಯು, ಸುಧನ್ವ, ಹರಿಶ್ಚಂದ್ರ, ಕರ್ಣ, ಈ ಬಗೆಯ ಮಹಾಭಾರತದ ಪ್ರಸಂಗಗಳಿಗೆ ಸಂಬಂಧಿಸಿದ ಪಾತ್ರಗಳ ಸ್ವಭಾವ, ಪಾತ್ರಗಳ ಗುಣಾವಗುಣಗಳ ಬಗೆಗೆ ಖಚಿತ ತಿಳುವಳಿಕೆ ಮೂಡಲು ಕಾರಣವಾಗಿರುವುದೇ ಬಯಲಾಟದ ಸಂಗೀತ ಮತ್ತು ನಿರೂಪಕನಾದ ಸೂತ್ರಧಾರಿ ಅಥವಾ ಹನುಮನಾಯಕನ ಪಾತ್ರಗಳ ಮೂಲಕ ಎಂಬುದು ವಿಶೇಷವಾದ ಸಂಗತಿಯಾಗಿದೆ. ಮಾತ್ರವಲ್ಲ ತಮ್ಮ ದೈನಂದಿನ ನಡಾವಳಿಯಲ್ಲಿ ಸತ್ಯ–ಅಸತ್ಯಗಳ ಕರ್ಮಫಲದ ರೂಪವಾಗಿಯೂ ಈ ಪುರಾಣ ಘಟನೆಗಳನ್ನು ಮಾದರಿಯಾಗಿ ಅನುಸರಿಸುವುದೂ ಇದೆ.

## ಮಧ್ಯ ಕರ್ನಾಟಕ ಪರಿಸರದ ಬಯಲಾಟದ ನೆಲೆಗಳು

ಬಯಲಾಟ ಅಥವಾ ಕುಣಿಯೋ ಮೇಳ ಎಂದೇ ಜನಜನಿತವಾಗಿರುವ ಈ ಕಲೆ, ಜನಪದರ ಹೃದಯದ ಕಲೆ. ಹೆಂಗಸರು, ಗಂಡಸರು ಪ್ರೀತಿಯಿಂದ ಪರಿಭಾವಿಸುವ, ಅನುಕರಿಸುವ, ಪಾರಂಪರಿಕ ಕಲೆ. ಜನಪದರ ಆಚಾರ, ಹಾವಭಾವ, ನಂಬಿಕೆ, ನಡಾವಳಿಕೆ, ಸಿಟ್ಟು, ಕ್ರೌರ್ಯ, ಒಳಿತು ಕೆಡಕುಗಳ, ಪ್ರತಿಬಿಂಬವಾಗಿ, ಅದಕ್ಕೊಂದಿಷ್ಟು ಹಾಸ್ಯ, ಗೇಲಿ, ಕೂಡಿಸಿಕೊಂಡು, ತಮ್ಮ ತಮ್ಮ ಕೃಷಿ ಕಾಯಕಗಳ ನಡುವೆ, ಮನರಂಜನೆಯಾಗಿಸುತ್ತಾ; ಒಳಿತು ಕೆಡಕನ್ನು ವಿಮರ್ಶಿಸುತ್ತಾ, ಅದಕ್ಕೊಂದು ಸಮಷ್ಟಿ ರೂಪ ನೀಡುವಲ್ಲಿ, ಈ ಬಯಲು ಕಥೆ ಪರಿಣಾಮಕಾರಿಯಾದ ಪಾತ್ರ ವಹಿಸುತ್ತದೆ. ಗ್ರಾಮದ ಒಳಿತು ಕೆಡಕುಗಳ ಮೊತ್ತವಾಗಿ, ಸಮುದಾಯದ ಹಿತ, ಪ್ರಾಣಿಗಳ ಸಮೃದ್ಧಿಗಾಗಿ ಬಯಲಾಟವನ್ನು ಪ್ರದರ್ಶಿಸುವ ಇಂಗಿತವನ್ನು ಗ್ರಾಮಸ್ಥರು ರೂಪಿಸುತ್ತಾ ಬಂದಿದ್ದಾರೆ. ಉದಾಹರಣೆಗೆ ಶಿರಾ ತಾಲ್ಲೂಕಿನ ದೊಡ್ಡಗುಳ ಬಹುತೇಕ ಬುಡಕಟ್ಟು ಸಮುದಾಯ ವಾಸಿಸುವ ಗ್ರಾಮ. ಈ ಗ್ರಾಮದಲ್ಲಿ ಪ್ರದರ್ಶಿಸುತ್ತಿದ್ದ ಐರಾವತ ಬಯಲಾಟಕ್ಕೆ ತಗುಲುವ ಖರ್ಚು ವೆಚ್ಚವನ್ನು, ಈ ಗ್ರಾಮದ ಹೆಂಗಸರು ತಮ್ಮ ಕೂಲಿ ಕಾಸನ್ನು ಸಂಗ್ರಹಿಸಿ, ಭಾಗವತರಿಗೆ ಕೊಟ್ಟು, ಐರಾವತ ಬಯಲಾಟ ಪ್ರದರ್ಶನ ಏರ್ಪಡಿಸುತ್ತಿದ್ದ ಸಂದರ್ಭಗಳನ್ನು ಈ ಗ್ರಾಮದ ಕೆ. ಬೋಮ್ಮಲಿಂಗಯ್ಯ ನವರು ಹೇಳಿಕೊಂಡಿದ್ದಾರೆ (ಗಡಿನಾಡ ಜಾನಪದ ಸಂಸ್ಕೃತಿ– ಸಂ. ಡಾ. ಚಿಕ್ಕಣ್ಣ ಯಣ್ಣೆಕಟ್ಟೆ, ಲೇ. ಕೆ. ಬೊಮ್ಮಲಿಂಗಯ್ಯ– ಮೂಡಲಪಾಯ ಯಕ್ಷಗಾನ ಒಂದು ಅನುಭವ–ಪುಟ 329).

ತುಮಕೂರು ಜಿಲ್ಲೆಯ ಹತ್ತು ತಾಲೂಕುಗಳಲ್ಲಿಯೂ ಇಂದಿಗೂ ಬಯಲಾಟ ಪ್ರಚಲಿತದಲ್ಲಿದೆ. ಶಿರಾ, ಮಧುಗಿರಿ, ಗುಬ್ಬಿ, ತಿಪಟೂರು ಹಾಗೂ ತುರುವೇಕೆರೆ, ಚಿಕ್ಕನಾಯಕನಹಳ್ಳಿ, ಈ ತಾಲೂಕುಗಳ ಹಲವು ಹಳ್ಳಿಗಳಲ್ಲಿ ಬಯಲಾಟಕ್ಕೆ ಪರ್ಯಾಯವಾಗಿ ಮೂಡಲಪಾಯ ಯಕ್ಷಗಾನ ಎಂಬ ಹೆಸರಿನಲ್ಲಿಯೇ ಆಟ ಕಟ್ಟುವುದಿದೆ. ಗುಬ್ಬಿ ತಾಲೂಕಿನ ಚೇಳೂರು ಹೋಬಳಿಯ, ಇರಕಸಂದ್ರ, ಚೇಳೂರು, ತೊಣಚನಹಳ್ಳಿ, ಬಿದರೆ ಹಾಗೂ ಹರಿವೇಸಂದ್ರ, ಗುಬ್ಬಿ ಕಸಬಾ ಹೋಬಳಿಯ ಕಿಟ್ಟದ ಕುಪ್ಪೆ, ಕುನ್ನಾಲ, ನಿಟ್ಟೂರು ಹೋಬಳಿಯ ತ್ಯಾಗಟೂರು, ಮೂಗನಾಯಕನ ಕೋಟೆ, ಅಳಿಲಘಟ್ಟ, ಕಡಬಾ ಹೋಬಳಿಯ ಬಿಟಕಾನಹಳ್ಳಿ, ಮಂಚೀಹಳ್ಳಿ, ಹಾಗಲವಾಡಿ ಹೋಬಳಿಯ ಹೊಸಕೆರೆ, ಬರ ಸಿಡ್ಲಳ್ಳಿ, ಬರಕನಾಹಾಳ್ ಬಳಿಯ ವನದೇವತಾ ದೇವಾಲಯದ ಬಳಿ, ಇಲ್ಲಿ ಯಕ್ಷಗಾನ ಪ್ರದರ್ಶನ ಇಂದಿಗೂ ಪ್ರಚಲಿತದಲ್ಲಿದೆ. ಇವುಗಳಲ್ಲಿ ಚೇಳೂರು ಹೋಬಳಿಯ ಇರಕಸಂದ್ರ 1800 ರಿಂದ ಇತ್ತೀಚಿನವರೆಗೆ ಪಾರಂಪರಿಕವಾಗಿ 'ಯಕ್ಷಗಾನ' ಎಂಬ ಹೆಸರಿನಲ್ಲಿ ಆದಿಶಕ್ತಿ, ಗಂಗೆ ಗೌರಿ, ಐರಾವತ, ಸತ್ಯಹರಿಶ್ಚಂದ್ರ, ಶತಕಂಠ ರಾಮಾಯಣ, ಸುಂದರಕಾಂಡ ರಾಮಾಯಣ–ಈ ಪ್ರಸಂಗಗಳನ್ನು ಪ್ರದರ್ಶಿಸುತ್ತಾ ಬಂದರು. ಭಾಗವತ ಚಂದಪ್ಪನವರ ಶಂಭುಲಿಂಗಪ್ಪ, ಬಸವಣ್ಣನವರ ಲಿಂಗಪ್ಪ, ಕಗ್ಗೆರೆ ಚಂದ್ರಪ್ಪ ಇವರು ಈ ಗ್ರಾಮದ ಬಯಲಾಟ ಪ್ರಸಂಗಗಳ ಭಾಗವತರು. ಎರಡನೇ ಮತ್ತು ಮೂರನೇ ತಲೆಮಾರಿಗೂ ಶತಕಂಠ ರಾಮಾಯಣ, ಐರಾವತ ಮತ್ತು ಸತ್ಯಹರಿಶ್ಚಂದ್ರ ಬಯಲಾಟ ಪ್ರಸಂಗಗಳು ಮುಂದುವರೆದಿದ್ದು; ಪ್ರಸ್ತುತ ಭಾಗವತ ರಮಾನಂದ, ಕಡವೀಗೆರೆ ಮೂಡಲಗಿರಿಯಪ್ಪ, ಚಂದಪ್ಪ, ರಾಮಚಂದ್ರಪ್ಪ, ಲಿಂಗಣ್ಣ ಹಾಗೂ ಐ.ಎಲ್. ರಂಗಸ್ವಾಮಯ್ಯ ಇವರ ಭಾಗವಂತಿಕೆಯಲ್ಲಿ ಬಯಲಾಟ ಪ್ರಸಂಗಗಳು ಮುಂದುವರೆದಿವೆ. 'ಶ್ರೀ ಬಸವೇಶ್ವರ ಕೃಪಾಪೋಷಿತ ಯಕ್ಷಗಾನ ಮಂಡಳಿ' ಎಂಬ ಹೆಸರಿನ, ಇಲ್ಲಿನ ಸಂಘಟನೆಯಲ್ಲಿ ಹವ್ಯಾಸಿ ಕಲಾವಿದರಾಗಿ ಶ್ರೀದೇವಿ ಗಂಗಣ್ಣ, ಶತಕಂಠ ಮಲ್ಲೇಶ್, ದೇವೇಂದ್ರ ಬಸವೇಗೌಡ, ರಾಕ್ಷಸರ ಪಾತ್ರದಲ್ಲಿ ಶತಕಂಠ ವೀರಣ್ಣ, ಶಂಕರಪ್ಪ, ತಿಮ್ಮಣ್ಣ, ಮಂಜಣ್ಣ, ರಮೇಶ್, ಪಾಳ್ಯದ ರಾಜಣ್ಣ, ಆದಿಶಕ್ತಿ ಪಾತ್ರದ ಪುಟ್ಟ ಶ್ಯಾಮಣ್ಣ, ಆಂಜನೇಯ ಪಾತ್ರದ ಪರಂಪರೆಯಲ್ಲಿ ಲಿಂಗಣ್ಣ, ಕಂಟ್ರಪ್ಪ; ಕೆಂಪಣ್ಣ, ಚಂದ್ರಯ್ಯ, ಲಕ್ಷ್ಮಣನ ವೇಷದ ಗೊರವಯ್ಯ, ಗಣಾಚಾರಿ, ಸಣ್ಣಲಿಂಗಪ್ಪ, ಶ್ರೀರಾಮನಾಗಿ ಮೈಲಾರಯ್ಯ, ಪರ್ವತಾಕ್ಷನ ವೇಷದ ಐ.ಬಿ. ಬಸವರಾಜು, ಇಂದಿಗೂ ಸಮರ್ಥವಾದ ಅಭಿನಯ ನೀಡುತ್ತಿರುವ ಬಯಲಾಟ ಕಲಾವಿದರು. ದೊಡ್ಡಯ್ಯ, ಪಾಳ್ಯದ ಗುರುಲಿಂಗಯ್ಯ, ಮಾರುತಿ ನಗರದ ರಮಾನಂದ, ಮಂಜುನಾಥ್, ಕಿರಣ ಕುಮಾರ, ಬಿ.ಸಿ. ಬಸವರಾಜು, ಧರ್ಮೇಶ, ಇವರುಗಳು ಬಯಲಾಟ ಕಲೆಯ 5ನೇ

ತಲೆಮಾರಿನ ಕಲಾವಿದರು. ಇಂದಿಗೂ ಶತಕಂಠ ರಾಮಾಯಣ, ಐರಾವತ ಪ್ರಸಂಗಗಳನ್ನು ತಪ್ಪದೇ ವಾರ್ಷಿಕವಾಗಿ ಪ್ರದರ್ಶನ ಮಾಡುತ್ತಾ ಬರುತ್ತಿದ್ದಾರೆ.

ಇರಕಸಂದ್ರ ಗ್ರಾಮದ ಅಂಬೇಡ್ಕರ್ ಯಕ್ಷಗಾನ ಮಂಡಳಿ, ಎಂಬ ಹೆಸರಿನಲ್ಲಿ ವಿಭಾಗವಾಗಿ ಐ.ಎಲ್. ರಂಗಸ್ವಾಮಯ್ಯನವರ ಭಾಗವಂತಿಕೆಯಲ್ಲಿ ಗಂಗೆ ಗೌರಿ, ಐರಾವತ, ದುಶ್ಯಾಸನ ಕಾಳಗ ಪ್ರಸಂಗಗಳನ್ನು ಪ್ರದರ್ಶಿಸುತ್ತಿದ್ದಾರೆ. ಇವರಲ್ಲಿ ಪಾತ್ರದಾರರು ಒಂದೇ ಸಮುದಾಯಕ್ಕೆ ಸೇರಿದವರಾದರೂ, ಸಂಘಟನೆ, ಸಹಾಯ, ಹಿಮ್ಮೇಳ ತಂಡದಲ್ಲಿ, ಪ್ರಮುಖವಾಗಿ ಕುರುಬ ಸಮುದಾಯದವರಿದ್ದಾರೆ. ಈ ತಂಡದಲ್ಲಿ ಮೂಡಲಗಿರಿಯಪ್ಪ, ಬೆಂಗಳೂರು ಚಿಕ್ಕಣ್ಣ, ಕಂಬದ ನರಸಿಂಹಯ್ಯ (ಕೌರವ), ನಾರದ ರಂಗಸ್ವಾಮಯ್ಯ, ಯಜಮಾನ ರಂಗಸ್ವಾಮಯ್ಯ, ರಂಗದಾಸಯ್ಯ, ನರಸಯ್ಯ, ಸಿ.ಟಿ. ಗಂಗಣ್ಣ, ದೊಡ್ಡ ನರಸಯ್ಯ, ಕುಂತಿಗಂಗಣ್ಣ, ಇವರಗಳ ಅಭಿನಯ ರೋಚಕವಾಗಿದೆ. ಈ ತಂಡದಲ್ಲಿ 80 ವರ್ಷ ವಯಸ್ಸಿನವರಿಂದ 25ನೆಯ ವಯೋಮಾನದವರಿದ್ದಾರೆ. ಹಾಡು, ಕುಣಿತ, ಮಾತುಗಾರಿಕೆ, ಮೋಹಕವಾಗಿದೆ. ಗೌರಿ ಪಾತ್ರದ ಗಂಗಣ್ಣ, ಗಂಗೆ ಪಾತ್ರ ಚಿಕ್ಕರಂಗಯ್ಯ, ಗಿರಿರಾಜ ಈರಣ್ಣ ಮತ್ತು ಬಸವರಾಜನ ಪಾತ್ರದ ಸೋಬಾನೆ ರಂಗಯ್ಯ ಇವರು; ತಮ್ಮ ವಿಶಿಷ್ಟ ಅಭಿನಯದಿಂದ ಬಯಲಾಟದ ವಿಶೇಷ ಮನ್ನಣೆಗೆ ಪಾತ್ರರಾದ ಪ್ರತಿಭಾವಂತ ಕಲಾವಿದರು. ಯಕ್ಷಗಾನವನ್ನು 70 ವರ್ಷಗಳಿಂದ ನಿರಂತರವಾಗಿ ಮುಂದುವರಿಸಿಕೊಂಡು ಬರುತ್ತಿರುವುದು ಇರಕಸಂದ್ರ ಗ್ರಾಮದ ಬಯಲಾಟ ಕಲೆಯ ವಿಶೇಷವಾಗಿದೆ.

ಈ ಗ್ರಾಮದ ಬಯಲಾಟ ಭಾಗವಂತಿಕೆಯ ಪರಂಪರೆಯಲ್ಲಿ ಕಗ್ಗೆರೆ ಈರಣ್ಣ, ಷಣ್ಮುಖಪ್ಪ, ಇರಕಸಂದ್ರದ ಕಾಳಯ್ಯನವರ ಗಂಗಣ್ಣ, ಚಂದೇಲಿಂಗಯ್ಯ, ಪ್ರಸ್ತುತ ಐ.ಎಲ್. ರಂಗಸ್ವಾಮಯ್ಯ ಸಮರ್ಥವಾಗಿ ಬಯಲಾಟ ಕಲೆಯನ್ನು, ತಮ್ಮ ಪ್ರತಿಭಾ ಪೂರ್ಣ ಭಾಗವಂತಿಕೆಯಿಂದಾಗಿ, ಮುಂದುವರೆಸಿಕೊಂಡು ಬರುತ್ತಿದ್ದಾರೆ.

ಇದೇ ಚೇಳೂರು ಹೋಬಳಿಯ ತೋಣಚನಹಳ್ಳಿ, ಸಾತೇನಹಳ್ಳಿ ಈ ಬುಡಕಟ್ಟು ಗ್ರಾಮಗಳಲ್ಲಿ ಇಂದಿಗೂ ಶತಕಂಠ ರಾಮಾಯಣ, ಸಾತೇನಹಳ್ಳಿಯ ಲವಕುಶರ ಕಾಳಗ ಪ್ರಸಂಗ ಮುಂದುವರೆದಿದೆ. ತೋಣಚನಹಳ್ಳಿಯ ಶತಕಂಠ ರಾಮಾಯಣ ಬಯಲಾಟಕ್ಕೆ ಸಂಘಟಕ, ಭಾಗವಂತಿಕೆ, ಹಾಗೂ ಶತಕಂಠನ ಪಾತ್ರದಲ್ಲಿ ಐವತ್ತು ಪ್ರದರ್ಶನ ನೀಡಿರುವ ಶತಕಂಠ ಮಲ್ಲೇಶ್ ಎಂಬ ಅನ್ವರ್ಥನಾಮದಿಂದಲೇ ಕರೆಯುತ್ತಿರುವ ಮಲ್ಲೇಶ್; ಅವರಿಗೆ ಬಾಗಲಕೋಟೆಯ ಬಯಲಾಟ ಅಕಾಡೆಮಿ 2023ರಲ್ಲಿ ಗೌರವ ಪ್ರಶಸ್ತಿ ನೀಡಿ ಗೌರವಿಸಿದೆ.

ಹರಿವೇಸಂದ್ರ ಚೇಳೂರು ಹೋಬಳಿಯ ಮತ್ತೊಂದು ಬಯಲಾಟದ ಪ್ರಮುಖ ನೆಲೆ. ಇಂದಿಗೂ ಈ ಕಲೆ ಮುಂದುವರೆದಿರುವ ಕಲಾಗ್ರಾಮ. ನಿರಂತರವಾಗಿ 80 ವರ್ಷಗಳ ಕಾಲ ಬಯಲಾಟದ ಭಾಗವತರಾಗಿ, ಸಂಘಟಕರಾಗಿ, ಕೆಲಸ ಮಾಡಿದ ಭಾಗವತ ಚೆನ್ನವೀರಯ್ಯ, ಭಾಗವತ ದೊಡ್ಡಮಲ್ಲಯ್ಯ, ಭಾಗವತ ನಂಜಪ್ಪ, ಇವರು ಪ್ರದರ್ಶನ ನೀಡುತ್ತಿದ್ದ ರಾಜ ವಿಕ್ರಮರಾಯ, ಕನಕಾಂಗಿ ಕಲ್ಯಾಣ, ಸತ್ಯವ್ರತ, ಈ ಪರಂಪರೆ ಮೂರನೇ ತಲೆಮಾರಿನ ಭಾಗವತರಾದ ಚನ್ನಬಸವಯ್ಯ, ಕಂಬಣ್ಣ, ಬಳೆ ಶೆಟ್ರು, ಸಿದ್ದರಾಮಣ್ಣ ಮುಂದುವರಿಸಿರುವ ಅಪರೂಪದ ಬಯಲಾಟ ಭಾಗವತರು ಮತ್ತು ಸಂಘಟಕರು.

ಹೋಬಳಿ ಕೇಂದ್ರವಾದ ಚೇಳೂರು, ಬಯಲಾಟದ ಕೇಂದ್ರ. ಭಾಗವತರಾದ ಸಾರಂಗಿ ಬೆಟ್ಟಪ್ಪ, ಮಡಿವಾಳರ ಚಿಕ್ಕಣ್ಣ, ನಲ್ಲೂರು ಬೆಟ್ಟಪ್ಪ, ಪ್ರಸ್ತುತ ಈಡಿಗರ ದಾಸರಹಳ್ಳಿ ರಮಾನಂದ–ಇವರುಗಳು ಬಯಲಾಟ ಪರಂಪರೆಯನ್ನು ಸಮರ್ಥವಾಗಿ ಮುಂದುವರೆಸಿದ್ದಾರೆ. ಇಲ್ಲಿನ 'ಶ್ರೀ ದೃಷ್ಯೇಶ್ವರ ಕೃಪಾಪೋಷಿತ ಬಯಲಾಟ ಮಂಡಳಿ'ಯ ಹೆಸರಿನಲ್ಲಿ ಸಮರ್ಥವಾದ ಕಲಾತಂಡವಿದೆ.

ಶ್ರೀದೇವಿ ಚಂದ್ರಪ್ಪ, ರಕ್ತಬೀಜಾಸುರ ಸಿ.ಎಸ್. ಬಸವರಾಜು, ಹನುಮನಾಯಕ ಪಾತ್ರದ ಖ್ಯಾತಿಯ ಕಚ್ಚೇನಹಳ್ಳಿ ನರಸೇಗೌಡ ಈ ಭಾಗದ ಹೆಸರಾಂತ ಬಯಲಾಟದ ಕಲಾವಿದರು. ಇವರು ಏಳು ದಶಕಗಳಿಂದ ದೇವಿ ಮಹಾತ್ಮೆ ಪ್ರಸಂಗವನ್ನು ಅದೇ ಪಾತ್ರಗಳ ಮೂಲಕ ಮುಂದುವರಿಸುತ್ತಿರುವ ಹಿರಿಯ ಕಲಾವಿದರು. ಈಶ್ವರಪ್ಪ, ರಂಗಪ್ಪ, ನಂಜುಂಡಪ್ಪ, ಕರೆ ಗೌಡ, ನಾರಾಯಣಪ್ಪ, ಚಿಕ್ಕೇಗೌಡ, ಪುನೀತ್, ಸಿ.ಬಿ. ಮಧು, ಮಲ್ಲೇಶ್, ಸಿ.ಆರ್. ಮಂಜುನಾಥ್, ಕೆಂಪಲಿಂಗಯ್ಯ, ರಾಜಣ್ಣ, ಬಿ.ಕೆ. ಶಿವಕುಮಾರ್, ಕರಿಬಸವಯ್ಯ ಒಳ್ಳೆಯ ಕಲಾವಿದರಾಗಿ ರೂಪಗೊಂಡಿದ್ದಾರೆ. ಇಲ್ಲಿನ ದೇವಿ ಮಹಾತ್ಮೆ ಬಯಲಾಟದಲ್ಲಿ ಶ್ರೀದೇವಿ ಪಾತ್ರವನ್ನು ಚೇಳೂರಿನ ಲಕ್ಷ್ಮೀದೇವಮ್ಮ ನಿರ್ವಹಿಸುತ್ತಿರುವುದು–ಈ ಭಾಗದ ಬಯಲಾಟದ ಅಪರೂಪದ ತನವಾಗಿದೆ. ಪ್ರತಿ ವರ್ಷ ಶಿವರಾತ್ರಿಯಂದು ಹಾಗೂ ಚೇಳೂರಿನ ದೃಷ್ಯೇಶ್ವರನ ತೇರಿನ ದಿನ ಬಯಲಾಟ ಪ್ರದರ್ಶನ ನಿಖರವಾಗಿ ನಡೆಯುತ್ತಿರುವುದು ಇಲ್ಲಿನ ವಿಶೇಷವಾಗಿದೆ.

ಬಿದರೆ ಇಂದು ಒಂದು ಗ್ರಾಮ ಪಂಚಾಯಿತಿ ಕೇಂದ್ರವಾಗಿಯಷ್ಟೇ ಸೀಮಿತ ವಾದರೂ; ವಿಜಯನಗರ ಅರಸರ ಮಾಂಡಲೀಕತ್ವದ ಪ್ರಮುಖ ಪಾಳೆಯಪಟ್ಟಾಗಿದ್ದ ಗ್ರಾಮ. ಆ ನಂತರವೂ ಹಾಗಲವಾಡಿ ಪಾಳೇಗಾರ ನೆಲೆಯೂ ಆಗಿತ್ತು. ಈ ಗ್ರಾಮದ ಸಕಲ ಸಮುದಾಯವನ್ನು ಒಗ್ಗೂಡಿಸಿಕೊಂಡು, ಪಾತ್ರಧಾರಿಗಳಾಗಿ ನಡೆಸುತ್ತಿದ್ದ ದೇವಿ ಮಹಾತ್ಮೆ ಇತ್ತೀಚಿನ ದಿನಗಳವರೆಗೂ ಪ್ರಭಾವಶಾಲಿ ಬಯಲಾಟವಾಗಿತ್ತು. ಊರ

ಗೌರವದ, ಭಕ್ತಿಯ ನೆಲೆಯಲ್ಲಿಯೇ ಪ್ರದರ್ಶನವಾಗುತ್ತಿದ್ದ, ಈ ಆಟದ ಪಾತ್ರಧಾರಿಗಳು ಬ್ರಾಹ್ಮಣರು, ಕುರುಬರು, ದೇವಾಂಗ, ಗಾಣಿಗರಂತೆ, ಬಟ್ ಹನುಮಂತಪ್ಪ; ಎಂಬ ಹನುಮಂತನ ಪಾತ್ರದ ಆದಿ ಕರ್ನಾಟಕ ವರ್ಗದ ಕಲಾವಿದನ ನೆನಪು, ಅಭಿನಯ ಎಂದಿಗೂ ಮಾಸುವುದಿಲ್ಲ. ಶ್ರೀದೇವಿಯಾಗಿ ಬ್ರಾಹ್ಮಣರ ಮಣಿಯಪ್ಪ, ರಕ್ತಬೀಜಾಸುರನಾಗಿ ಕುರುಬರ ವೀರಭದ್ರಯ್ಯ, ದೇವೇಂದ್ರನಾಗಿ ಗಾಣಿಗರ ಕರಾಳಯ್ಯ, ಇವರ ವಿರೋಚಿತ ಪಾತ್ರ ಅಭಿನಯ ಮನೋಜ್ಞವಾದದ್ದು. ಈ ಪರಂಪರೆ ಇಂದಿಗೂ ಯುವಕಲಾವಿದರು ಮುಂದುವರಿಸಿ, ಊರ ಹಬ್ಬದ ಸಂದರ್ಭದಲ್ಲಿ ಅಭಿನಯಿಸುತ್ತಿದ್ದಾರೆ.

ನಲ್ಲೂರು ಒಂದು ಪುಟ್ಟ ಗ್ರಾಮವಾದರೂ, ಇಲ್ಲಿನ ಕಲಾವಂತಿಕೆ ಹಿರಿದಾದುದು. ಆಂಜನಯ್ಯ, ಶ್ರೀರಂಗಯ್ಯ, ಈ ದೇವಾಲಯದ ಅರ್ಚಕರು, ಊರಿನ ಪಟೇಲ್ ಕೆಂಪೇಗೌಡ ಇವರ ಸಹಕಾರದೊಂದಿಗೆ ಸ್ವಾತಂತ್ರ್ಯಪೂರ್ವ ಕಾಲದಿಂದಲೂ ಬಯಲಾಟ ಕಲೆಯನ್ನು ನಿರಂತರವಾಗಿಸುತ್ತಾ ಬರುತ್ತಿರುವ ಗ್ರಾಮ. ಭಾಗವತ ಬೆಟ್ಟಪ್ಪನವರ ಮಾರ್ಗದರ್ಶನದಲ್ಲಿ, ಬಯಲಾಟ ಪ್ರಸಂಗಗಳಾದ ದಕ್ಷಯಾಗ, ಲವಕುಶ, ಐರಾವತ, ಶ್ರೀ ರಾಮಾಂಜನೇಯ ಯುದ್ಧ, ಗಿರಿಜಾ ಕಲ್ಯಾಣ, ದೇವಿ ಮಹಾತ್ಮೆ ಪ್ರಸಂಗಗಳನ್ನು ಮುಂದುವರಿಸಿಕೊಂಡು ಬರುತ್ತಿದ್ದಾರೆ. ಗಾಳಿ ಸಿದ್ದಪ್ಪ, ಬೆಟ್ಟಪ್ಪ, ಪಟೇಲ್ ಕೆಂಪೇಗೌಡ, ಸಿದ್ದಯ್ಯ ಮೊದಲಾದ ಕಲಾವಿದರು ಬಯಲಾಟದ ಪರಂಪರೆಯನ್ನು ಮುಂದುವರಿಸುತ್ತಿರುವ ಅಪೂರ್ವ ಕಲಾವಿದರು. ಈ ಗ್ರಾಮದ ಭಾಗವತ ಬೆಟ್ಟಪ್ಪ ನವರಿಗೆ ಕರ್ನಾಟಕ ಜಾನಪದ ಅಕಾಡೆಮಿ 2008ರಲ್ಲಿ ಯಕ್ಷಗಾನ ತಜ್ಞಪ್ರಶಸ್ತಿ ನೀಡಿ ಗೌರವಿಸಿದೆ.

ಯಣ್ಣೆಕಟ್ಟೆ ಗ್ರಾಮದ ಅಭಿಮನ್ಯುವಿನ ಕಾಳಗ, ಬೇಡನ ಕಟ್ಟೆಯ ಕುಮಾರರಾಮನ ಕಥೆ, ಚೇಳೂರು ಹೋಬಳಿಯ ಉಲ್ಲೇಖನೀಯ ಬಯಲಾಟದ ಸ್ಥಳಗಳು. ಹಿರಿಯ ಬಯಲಾಟದ ಕಲಾವಿದರಾಗಿ, ಹುಯ್ಲಣ್ಣ, ಮಾಸ್ತಮ್ಮನವರ ಸಿದ್ದಪ್ಪ, ಕಿವುಡಲಿಂಗಣ್ಣ, ಬುಕ್ಕಯ್ಯ, ಯಣ್ಣೆ ಕಟ್ಟೆ ಕರಿಯಪ್ಪ, ಗೌಡ ಸಿದ್ದಣ್ಣ, ಮರಿಯಪ್ಪ, ಸಣ್ಣ ಗೌರವಯ್ಯ, ಮರೆಯಬಾರದ ಕಲಾವಿದರು. ಸಾರಂಗಿ ಬೆಟ್ಟಯ್ಯ ವೀರಶೈವ ಸಮುದಾಯಕ್ಕೆ ಸೇರಿದ ಊರಿನ ಹಿರಿಯ ಭಾಗವತರು. ಆದರೂ ಮಡಿ ಮೈಲಿಗೆ ತೋರದೆ ಕುರುಬರಹಟ್ಟಿ, ಶೂದ್ರರ ಕೇರಿ, ತಿಗಳರ ಪಾಳಯಗಳಲ್ಲೂ ವಸತಿ ಮಾಡಿಕೊಂಡು, ಬಯಲಾಟ ಕಲೆಯನ್ನು ಬೆಳೆಸಿದ ಹಿರಿಯರು. ಇವರ ಭಾಗವಂತಿಕೆಯಲ್ಲಿ ಬಯಲಾಟದ ಹತ್ತಾರು ಪ್ರಸಂಗಗಳು, ನೂರಾರು ಕಲಾವಿದರು, ಹಲವಾರು ಭಾಗವತರು ತಯಾರಾಗಿದ್ದಾರೆ. ಕೋಡಿಯಾಲದ ಭಾಗವತ ಚಂದ್ರಪ್ಪ, ಇರಕಸಂದ್ರದ ಗಂಗಣ್ಣ, ಶೂಲಯ್ಯನ ಪಾಳ್ಯದ

ಬೋರೇಗೌಡ, ಹರಿವೇಸಂದ್ರದ ಚನ್ನಬಸವಣ್ಣ, ಕಂಬಣ್ಣ, ಈ ಮುಂತಾದ ಭಾಗವತರು ಇಂದಿಗೂ ಚೇಳೂರು ಸೀಮೆಯಲ್ಲಿ ಬಯಲಾಟ ಕಲೆಯನ್ನು ಬೆಳೆಸುವಲ್ಲಿ ಸಕ್ರಿಯರಾಗಿರುವ ಭಾಗವತರು.

ಬಯಲಾಟಗಳಿಗೆ ತನ್ನದೇ ಆದ ಭುಜಕೀರ್ತಿ, ಎದೆ ಹಾರ, ಕಂಠಿ ಸರ, ತೋಳ ಬಂದಿ, ಎದೆ ಬಿಲ್ಲೆ, ಸೊಂಟಪಟ್ಟಿ, ಕಿವಿಗೆ ಉದ್ದನೆಯ ಕುಂಡಲಿ, ದೇವಿ ಕಿರೀಟ, ಶತಕಂಠ ರಾವಣರ ಕಿರೀಟ, 10 ತಲೆ, 16 ಭುಜ ಕೈ ಹೊಂದಿರುವ ಕಿರೀಟದ ಮಾದರಿಯ ಭುಜಕೀರ್ತಿ, ಇವುಗಳ ಜೊತೆಗೆ, ಸೀನರಿ, ಪರದೆ, ಆಯುಧಗಳನ್ನು ನಿರಂತರವಾಗಿ ಪೂರೈಸುತ್ತಾ ಬಂದ, ಬಯಲಾಟದ ರಂಗಸೀನರಿಗೆ ಹೆಸರುವಾಸಿಯಾಗಿದ್ದ, ಗುಬ್ಬಿ ಸಮೀಪದ ಕಿಟ್ಟದ ಕುಪ್ಪೆ, ತ್ಯಾಗಟೂರು, ಅಳಿಲಘಟ್ಟ, ಸಿರಾ ತಾಲೂಕಿನ ಚನ್ನನ ಕುಂಟೆ, ರತ್ನಸಂದ್ರ, ಎಲೆಯೂರು, ಶಿರಾ ಗಡಿ ಪ್ರದೇಶವಾದ ಅಗಳಿ, ರತ್ನಗಿರಿ, ರೊಳ್ಳೆ(ಮಡಕಸಿರಾ ತಾಲ್ಲೂಕು), ಶಿರಾ ತರೂರು, ಈ ಗ್ರಾಮಗಳಲ್ಲಿ 10–15 ರೂಪಾಯಿಗಳಿಗೆ ರಂಗ ಸೀನರಿ ಒದಗಿಸುತ್ತಾ, ಇಂದು 40 ಸಾವಿರ ತಲುಪಿರುವ ಇವರ ಕಥೆಯು ದೊಡ್ಡದಿದೆ. ಹಾಗೆಯೇ ಇವರ ಕಲಾ ಕೊಡುಗೆಯನ್ನೂ ಮರೆಯುವಂತಿಲ್ಲ.

ಸಿರಾ ಕರ್ನಾಟಕ–ಆಂಧ್ರ ಗಡಿ ನೆಲದ ಭಾಷಾ ಪ್ರದೇಶ. ಸಿರಾ, ಮಧುಗಿರಿ, ಪಾವಗಡದ ಗಡಿನೆಲದಲ್ಲಿ ಕನ್ನಡ ಭಾಷಿಕರು ತೆಲುಗು ಭಾಷೆಯನ್ನೂ ಮಾತನಾಡುತ್ತಾರೆ. ಈ ಭಾಗದಲ್ಲಿ ಇಂದಿಗೂ ಬಯಲಾಟ ಕಲೆ ಸಶಕ್ತವಾಗಿದೆ. ಸಿರಾ ತಾಲ್ಲೂಕಿನ ಶಾಗದಡು, ಬರಗೂರು, ಕಡವೀಗೆರೆ, ಎಲೆಯೂರು, ಈಡಿಗರ ದಾಸರಹಳ್ಳಿ, ಮೇಲುಕುಂಟೆ, ಮೇಕೆರಹಳ್ಳಿ, ಕರಿ ರಾಮನಹಳ್ಳಿ, ಸಿಗಲಹಳ್ಳಿ, ಕರೆಯಾಗಲಹಳ್ಳಿ, ಬಂಡೇನಹಳ್ಳಿ, ಬಂಡ ಕುಂಟೆ, ಇಂದಿಗೂ ಬಯಲಾಟ ಕಲೆಯ ಪ್ರಮುಖ ನೆಲೆಗಳು. ಸಿರಾದ ಈಡಿಗರ ದಾಸರಹಳ್ಳಿಯಲ್ಲಿ ಇಂದು ಬಯಲಾಟದ ಒಂದು ಕುಟುಂಬವಿದ್ದು, ವೃತ್ತಿ ಕಲೆಯನ್ನಾಗಿ ಮಾಡಿಕೊಂಡು ಜೀವಿಸುತ್ತಿರುವುದು ವಿಶೇಷ. ಭಾಗವತ ರಮಾನಂದ, ಭಾಗವತ ರಾಮಚಂದ್ರ, ಭಾಗವತ ಹನುಮಂತರಾಯಪ್ಪ, ಭಾಗವತ ಸುರೇಶ್, ಭಾಗವತ ಪರಸಪ್ಪ ಹೀಗೆ ಒಂದೇ ಕುಟುಂಬದ ಏಳು ಜನ ಭಾಗವತರು, ಮೂವತ್ತು ಜನ ಬಯಲಾಟದ ಕಲಾವಿದರಿದ್ದಾರೆ. ಈ ಕುಟುಂಬದ ಹೆಣ್ಣು ಮಕ್ಕಳೂ ವೇಷ ಹಾಕುವ, ಹಿಮ್ಮೇಳದಲ್ಲಿ ಭಾಗವಹಿಸುವುದು ಇಲ್ಲಿನ ವಿಶೇಷ. ಈ ತಂಡದ ರಮಾನಂದ ಕರ್ನಾಟಕ ಜಾನಪದ ಲೋಕದಲ್ಲಿ ಮೂಡಲಪಾಯದ ಹೆಸರಿನಲ್ಲಿ ಕರಿ ಬಂಟನ ಕಥೆಯನ್ನು, ಇಲ್ಲಿನ ವಿದ್ಯಾರ್ಥಿಗಳಿಗೆ ಕಲಿಸಿ, ಬೆಂಗಳೂರು, ಮೈಸೂರು, ಕಾಗಿನೆಲೆ ಇಲ್ಲೆಲ್ಲಾ

ಪ್ರದರ್ಶಿಸಿದ್ದಾರೆ. ಮೃದಂಗ, ಶ್ರುತಿ ಪೆಟ್ಟಿಗೆಯ ಕಲಾವಿದರು ಇದೇ ಕುಟುಂಬದವರಾಗಿದ್ದಾರೆ.

1920ರ ಸುಮಾರಿಗೆ ಬಯಲಾಟ ಭಾಗವತರ ತರಬೇತಿ ಕೇಂದ್ರವಾಗಿ, ಮಠವಾಗಿದ್ದ ಶ್ಯಾಗದಡು, ಇಲ್ಲಿನ ವೈಷ್ಣವರ ಕಾಲುವೆ ರಂಗಪ್ಪ, ಭಾಗವತಿಕೆಯ ಗುರು ಪರಂಪರೆಯಲ್ಲಿ ಬಂದವರು. ಇವರ ಶಿಷ್ಯರಾಗಿ ಬರಗೂರಿನ ಭೀಮಣ್ಣ, ಬಂದುಕುಂಟೆ ಗೋಪಾಲಯ್ಯ, ಜುಂಜ ರಾಮನಹಳ್ಳಿ ರಾಮಾಂಜನೇಯ, ಬಂಗಾರಹಟ್ಟಿ ದೊಡ್ಡಯ್ಯ, ಸಿಗಲಹಳ್ಳಿ ಕರಿಯಣ್ಣ, ಕರಿ ರಾಮನಹಳ್ಳಿ ಕಣುಮಣ್ಣ, ಕಡವೀಗೆರೆ ತಮ್ಮಯ್ಯ, ಶಾಗದಡು ಲಕ್ಷ್ಮಿ ರಾಮೇಗೌಡ, ರಂಗಾಪುರದ ತಾಳದ ರಾಮಣ್ಣ; ಗೌಡನಹಳ್ಳಿ ಲಕ್ಕಣ್ಣ, ಕರಿ ರಾಮನಹಳ್ಳಿ ಹನುಮಂತರಾಯಪ್ಪ; ಇವರುಗಳು ತಮ್ಮ ತಮ್ಮ ನೆಲೆಯಲ್ಲಿ ಇಂದಿಗೂ ಬಯಲಾಟ ಕಲೆಯನ್ನು ಮುಂದುವರಿಸುತ್ತಾ, ಭಾಗವತರಾಗಿ ಹೆಸರು ಮಾಡಿರುವ ಹಿರಿಯರು.

ಕಾಲುವೆ ರಂಗಪ್ಪನವರು ಬಯಲಾಟದ ಪ್ರಸಂಗ ಸಾಹಿತ್ಯ ರಚಿಸುತ್ತಿದ್ದು; ವಿರಾಟ ಪರ್ವ, ಕರಿಬಂಟ, ಲವಕುಶ, ಅಭಿಮನ್ಯುನ ಕಾಳಗ, ಇಂದ್ರಜಿತ್ ಕಾಳಗ, ದುಶ್ಯಾಸನ ವಧೆ, ಅಹಿ ರಾವಣ–ಮಹಿರಾವಣ, ಗಯ ಚರಿತ್ರೆ, ರತಿಕಲ್ಯಾಣ, ಉಷಾ ಕಲ್ಯಾಣ, ದ್ರೌಪತಿ ಪರಿಣಯ, ಶಶಿರೇಖಾ ಪರಿಣಯ, ವಾಲಿ ವಧೆ– ಈ ಮುಂತಾದ ಪ್ರಸಂಗ ಸಾಹಿತ್ಯ ರಚಿಸಿದ ಸಿರಾಭಾಗದ ಪ್ರಮುಖ ಬಯಲಾಟ ಕವಿ, ಪ್ರಸಂಗ ಕರ್ತೃ ಹಾಗೂ ಭಾಗವತ, ಹಾಗೂ ಕೂಲಿ ಮಠದ ಭಾಗವಂತಿಕೆಯ ಮೇಷ್ಟ್ರು 1970ರಲ್ಲಿ ತೀರಿಕೊಂಡ ಇವರ ಶಿಷ್ಯ ಪರಂಪರೆ ಹಾಗೂ ಇವರ ಮೂರನೇ ತಲೆಮಾರಿನ ಮರಿಮಗ ಮಧುಸೂದನ– ಉತ್ತಮ ಭಾಗವತ ಹಾಗೂ ಮೃದಂಗ ಕಲಾವಿದರಾಗಿದ್ದರು. ಇವರು ಇತ್ತೀಚಿಗೆ ಅಪಘಾತದಲ್ಲಿ ತೀರಿಕೊಂಡರು. ಈ ಕುಟುಂಬ ಬಯಲಾಟದ ಕೊಂಡಿ ಕಳಚಿದೆ.

ಕಾಲುವೆ ರಂಗಪ್ಪನವರಿಂದ ಭಾಗವಂತಿಕೆ ಕಲಿತ ಶಿಷ್ಯ ಪರಂಪರೆಯಲ್ಲಿ ಬಂಧುಕುಂಟೆ ಗೋಪಾಲಯ್ಯ ಅವಿದ್ಯಾವಂತರಾದರೂ ಗಿರಿಜಾ ಕಲ್ಯಾಣ, ದೇವಿ ಮಹಾತ್ಮೆ, ವಿರಾಟ ಪರ್ವ ಹಾಗೂ ಇಂದ್ರಜಿತ್ ಕಾಳಗ ಪ್ರಸಂಗ ಹಾಗೂ ಅದಕ್ಕೆ ಬೇಕಾದ ಪೂರಕ ಸಂಗೀತ ಮತ್ತು ಸಂಭಾಷಣೆಯನ್ನು ಕಂಠಪಾಠದ ಮಾದರಿಯಲ್ಲಿ ಕಲಿಸುತ್ತಿದ್ದ, ಪ್ರದರ್ಶನ ಮಾಡಿಸುತ್ತಿದ್ದ ಅಪೂರ್ವ ಭಾಗವತರು. ಇದೇ ಪರಂಪರೆಯ ಕರಿ ರಾಮನಹಳ್ಳಿ ಹನುಮಂತರಾಯಪ್ಪ ತಮ್ಮ 92ನೇ ವಯಸ್ಸಿನಲ್ಲಿಯೂ ಇಂದಿಗೂ ರಾಮಾಂಜನೇಯ ಯುದ್ಧ, ಇಂದ್ರಜಿತ್ ಕಾಳಗ, ಐರಾವತ ಪ್ರಸಂಗಗಳನ್ನು ಕರ್ನಾಟಕ ಮಾತ್ರವಲ್ಲದೆ, ಆಂಧ್ರಪ್ರದೇಶದ ಅಗಳಿ, ರಾಮನಹಳ್ಳಿ, ನೀಲಕಂಠಾಪುರ,

ಅಮರಾಪುರ, ಹೇಮಾವತಿ, ಇಟಗೇಹಳ್ಳಿ ಇಲ್ಲಿ ಇಂದಿಗೂ ಪ್ರಯೋಗಿಸುತ್ತ ಮುಂದುವರೆದಿದ್ದಾರೆ. ಇವರಿಗೆ ಕರ್ನಾಟಕ ಯಕ್ಷಗಾನ ಅಕಾಡೆಮಿ 2021ನೇ ಸಾಲಿನ ಯಕ್ಷ ಸಿರಿ ಪ್ರಶಸ್ತಿ ನೀಡಿ ಗೌರವಿಸಿದೆ. 82ರ ವಯೋಮಾನದ ಬರಗೂರಿನ ಬಯಲಾಟದ ಭೀಮಣ್ಣ ಇಂದಿಗೂ ಬಯಲಾಟ ಕಲೆಯನ್ನು ನಂಬಿಯೇ ಜೀವಿಸುತ್ತಿರುವ ಅಪರೂಪದ ಕಲಾವಿದ. ಪ್ರೊ.ಬರಗೂರು ರಾಮಚಂದ್ರಪ್ಪನವರು ಇವರನ್ನ ಕೇಂದ್ರೀಕರಿಸಿ 'ಬಯಲಾಟದ ಭೀಮಣ್ಣ' ಎಂಬ ಚಲನಚಿತ್ರ ನಿರ್ಮಿಸಿರುವುದು ವಿಶೇಷ. ದೇವಿ ಮಹಾತ್ಮೆ, ಲವಕುಶ, ಗಿರಿಜಾ ಕಲ್ಯಾಣ, ಐರಾವತ– ಇವರ ಭಾಗವಂತಿಕೆಯ ಪ್ರಮುಖ ಬಯಲಾಟ ಪ್ರಸಂಗಗಳು. ಹಿಂದೂಪುರ, ಪರಶುರಾಮಪುರ, ಮಡಕಶಿರ, ಅಮರಾಪುರ– ಈ ಹೊರ ಗಡಿ ಗ್ರಾಮಗಳ ತೆಲುಗು ನೆಲದಲ್ಲಿಯೂ ಕನ್ನಡದ ಬಯಲಾಟ ಪ್ರದರ್ಶಿಸುತ್ತಿರುವುದು ಬರಗೂರಿನ ಬಯಲಾಟದ ಭೀಮಣ್ಣನವರ ವಿಶೇಷವಾಗಿದೆ.

ದೊಡ್ಡಗುಳ, ರತ್ನಸಂದ್ರ ಎಲೆಯೂರು, ಕಳ್ಳಂಬೆಳ್ಳ, ಹಾಲೆನಹಳ್ಳಿ, ಮೇಕೆರಹಳ್ಳಿ, ಕಾಳಾಪುರ ಹಾಗೂ ಈಡಿಗರ ದಾಸರಹಳ್ಳಿ – ಈ ಸಾಲು ಹಳ್ಳಿಗಳು ಇಂದಿಗೂ ಬಯಲಾಟದ ಸಚಿತ್ರ ಗ್ರಾಮಗಳು. ಇವುಗಳಿಗೆ ಕೇಂದ್ರ ನೆಲೆ ದೊಡ್ಡಗುಳ. ಇದಕ್ಕೆ ಕಾರಣ ಹೆಚ್ಚು ಭಾಗವತರು ಹಾಗೂ ಬಯಲಾಟದ ರಂಗ ಸೀನರಿ ಹೊಂದಿದ್ದ ಗ್ರಾಮ. ಈ ಭಾಗದ ಮದಲೂರು ನಾಯಕ, ಮೂಡಲಗಿರಿಯಪ್ಪ, ಚೆನ್ನವೀರಯ್ಯ, ಜುಂಜರಾಮನಹಳ್ಳಿ ರಾಮಾಂಜಿನಪ್ಪ, ಹೊನ್ನಗಾನಹಳ್ಳಿ ವೀರ ಬೊಮ್ಮಾಚಾರಿ, ಗೂಳ್ಯದ ಬಯಲಾಟದ ರಂಗ ಸೀನರಿಯೂ ಸಕಾರಣವಾಗಿದ್ದವು. ಹಾಗಾಗಿ ದೊಡ್ಡಗುಳದಲ್ಲಿ ದೇವಿ ಮಹಾತ್ಮೆ, ಶನಿ ಮಹಾತ್ಮೆ, ಬಬ್ರುವಾಹನ ಕಾಳಗ, ತ್ರಿಪುರ ಸಂಹಾರ, ಐರಾವತ, ದಕ್ಷಯಾಗ–ಈ ಪ್ರಸಂಗಗಳ ಪ್ರದರ್ಶನ ಇತ್ತೀಚಿನವರೆಗೂ ಅದ್ಧೂರಿಯಾಗಿ ನಡೆಯುತ್ತಿದ್ದು, ಇಂದಿಗೂ ವಾರ್ಷಿಕವಾಗಿ ರತ್ನಸಂದ್ರದ ದಶಾವತಾರ, ಮೇಕೆರಹಳ್ಳಿಯ ಸೂರ್ಯ ವಿವಾಹ, ಕಾಳಾಪುರದ ದೇವಿ ಕಥೆ, ಹೊನ್ನಗಾನಹಳ್ಳಿ ದೇವಿ ಮಹಾತ್ಮೆ ಮತ್ತು ದಶಾವತಾರ, ಕಡವೀಗೆರೆಯ ಐರಾವತ, ಕಳ್ಳಂಬೆಳ್ಳದ ರಾಮಾಂಜನೇಯ ಯುದ್ಧ, ಈಡಿಗರ ದಾಸರಹಳ್ಳಿಯ ರಾಮಾಂಜನೇಯ ಯುದ್ಧ ಹಾಗೂ ಇಂದ್ರಜಿತ್ ಕಾಳಗ, ಬರಗೂರು ಶ್ರೀದೇವಿ ಮಹಾತ್ಮೆ, ಕರೇ ರಾಮನಹಳ್ಳಿ, ಕೆರೆಯಾಗಲಹಳ್ಳಿ ಇಲ್ಲಿನ ರಾಮಾಂಜನೇಯ ಯುದ್ಧ ಹಾಗೂ ಬಡೇನಹಳ್ಳಿಯ ಐರಾವತ ಯಕ್ಷಗಾನ ಬಯಲಾಟ ವಾರ್ಷಿಕವಾಗಿ ಊರ ಹಬ್ಬಕ್ಕೆ ತಪ್ಪದೇ ಪ್ರಯೋಗವಾಗುತ್ತಿದೆ. ಈ ಮೂಲಕ ಶಿರಾ ಭಾಗದಲ್ಲಿ ಬಯಲಾಟ ಕಲೆ ನಾಟಕದೊಂದಿಗೆ ತೀವ್ರವಾದ ಸ್ಪರ್ಧೆವೊಡ್ಡುತ್ತಿರುವ ರಂಗಭೂಮಿಯ ಪಲ್ಲಟಕ್ಕೂ ಜಗ್ಗದೆ ಯಥಾಸ್ಥಿತಿ ಕಾಯ್ದುಕೊಂಡು ಬರುತ್ತಿದೆ.

ISSN : 3048-7137

ಮೂಡಲಪಾಯ ಯಕ್ಷಗಾನ ಎಂಬ ಹೆಸರಿನೊಂದಿಗೆ ಕರೆದುಕೊಳ್ಳುತ್ತಾ, ನಿರಂತರವಾಗಿ ಬಯಲಾಟ ಕಲೆಯನ್ನು, ಜೀವಂತವಾಗಿ ಇಟ್ಟಿರುವ ತಿಪಟೂರು ಪರಿಸರದಲ್ಲಿ ಎರಡು ಹಳ್ಳಿಗಳಿವೆ, ಇದರಲ್ಲಿ ಅರಳಗುಪ್ಪೆ ಗ್ರಾಮ ಒಂದರಲ್ಲಿಯೇ ಸುಮಾರು 9 ಜನ ಬಯಲಾಟದ ಭಾಗವತರಿದ್ದಾರೆ. ಇಡೀ ಗ್ರಾಮವೇ ಯಕ್ಷಗಾನದ ಕಲಾವಿದರ ಗ್ರಾಮವಾಗಿದೆ. ಈ ಗ್ರಾಮದ ಹಿರಿಯರಾದ ದರ್ಜಿರಾಮಣ್ಣ, ಅರಳಗುಪ್ಪೆ ಮಲ್ಲಿಕಾರ್ಜುನಪ್ಪ, 1990ರ ದಶಕದಲ್ಲಿ ಈ ಭಾಗದಲ್ಲಿ ಪ್ರಸಿದ್ಧರಾಗಿದ್ದ ಭಾಗವತರು. ಸಿದ್ದಲಿಂಗಪ್ಪ, ಗುಡ್ಡಯ್ಯ, ನಂಜಪ್ಪ, ಚನ್ನಬಸವಯ್ಯ, ಈ ಮೊದಲಾದ ಮೂರನೇ ತಲೆಮಾರಿನ ಭಾಗವತದೊಂದಿಗೆ ಎ.ಆರ್. ಪುಟ್ಟಸ್ವಾಮಿ, ಶಂಕರಪ್ಪ, ತಿಮ್ಮೇಗೌಡ, ನಾಗರಾಜು, ಈ ನಾಲ್ಕನೆಯ ತಲೆಮಾರಿನ ಯಕ್ಷಗಾನ ಭಾಗವತರು ತಯಾರಾಗಿ, ಬಯಲಾಟವನ್ನು ಒಂದು ವೃತ್ತಿ ಕಲೆಯನ್ನಾಗಿ ಎ.ಆರ್. ಪುಟ್ಟಸ್ವಾಮಿ ಸ್ವೀಕರಿಸಿದ್ದಾರೆ. ದಕ್ಷಯಾಗ, ಗಿರಿಜಾ ಕಲ್ಯಾಣ, ದೇವಿ ಮಹಾತ್ಮೆ, ಕರ್ಣಾವಸಾನ, ಚೋರ ಕಥೆ–ಈ ಮೊದಲಾದ ಪ್ರಸಂಗಗಳನ್ನು ಇವರು ಕಲಿಸುತ್ತಿದ್ದಾರೆ. ಅರಳುಗುಪ್ಪೆಯ ಎ.ಆರ್. ಪುಟ್ಟಸ್ವಾಮಿ ಅವರ ತಂಡ ಬಯಲಾಟವನ್ನು ಒಂದೂವರೆ ಗಂಟೆಗೆ ಇಳಿಸಿ ಪ್ರದರ್ಶಿಸುವುದೂ ಸೇರಿದಂತೆ, ಮುಖವೀಣಾ ರಹಿತ ಭಾಗವತ ಹಾಗೂ ಮದ್ದಲೆ ಕಲಾವಿದರು ಮಾತ್ರ ಕೂಡಿಕೊಂಡು ಕರಾವಳಿ ಯಕ್ಷಗಾನದ ಮಾದರಿಯಲ್ಲಿಯೇ ರಂಗಮಂಟಪದ ಮಧ್ಯಭಾಗದಲ್ಲಿ ಕುಳಿತುಕೊಂಡು ಭಾಗವಂತಿಕೆ ನಡೆಸಿಕೊಡುವ ಸಂಪ್ರದಾಯವನ್ನು ರೂಡಿಸಿಕೊಂಡಿದ್ದಾರೆ.

ತಿಪಟೂರು ತಾಲ್ಲೂಕಿನ ಬಿದರೆಗುಡಿ ಸಮೀಪದ ಮತ್ತೆಹಳ್ಳಿಯು ಪರಂಪರಾಗತವಾಗಿ ಒಂದು ಪ್ರಮುಖ ಬಯಲಾಟ ಕೇಂದ್ರೀಕೃತ ಗ್ರಾಮ. 'ಶ್ರೀ ಬಿದರಾಂಬಿಕ ಕೃಪಾಪೋಷಿತ ಯಕ್ಷಗಾನ ಮಂಡಳಿ' ಎಂಬ ಹೆಸರಿನ ರಂಗಸಂಸ್ಥೆ, ಸ್ವಾತಂತ್ರ್ಯ ಪೂರ್ವದಲ್ಲಿಯೇ ಸ್ಥಾಪನೆಯಾಗಿದೆ. ಈ ಗ್ರಾಮದ ಭಾಗವತ ಸಣ್ಣ ದೊಡ್ಡಯ್ಯ, ಯಕ್ಷಗಾನ ಪ್ರಸಂಗ ಕರ್ತೃ ಆಗಿದ್ದು, ಇವರು ಗಯ ಚರಿತ್ರೆ, ತ್ರಿಪುರ ಸಂಹಾರ, ದೇವಿ ಮಹಾತ್ಮೆ, ಪಂಚವಟಿ, ಚೋರ ಕಥೆ, ಲವಕುಶರ ಕಾಳಗ, ದುಶ್ಯಾಸನ ವಧೆ, ಈ ಮೊದಲಾದ ಪ್ರಸಂಗ ಸಾಹಿತ್ಯವನ್ನು ರಚಿಸಿರುವ ಈ ಭಾಗದ ಅಪರೂಪದ ಬಯಲಾಟದ ಭಾಗವತ. ಇವರ ಮಗ ಮುದ್ದಪ್ಪ, ಮೊಮ್ಮಗ ಎಂ.ಎಂ. ಮಂಜುನಾಥ್, ಇಂದಿಗೂ ಭಾಗವಂತಿಕೆಯಲ್ಲಿ ಸಕ್ರಿಯರಾಗಿದ್ದು ಬಿದರೆಗುಡಿಯನ್ನು ಕೇಂದ್ರವಾಗಿರಿಸಿಕೊಂಡು, ಸುಮಾರು 500ಕ್ಕೂ ಹೆಚ್ಚು ಬಯಲಾಟಗಳನ್ನು ಪ್ರದರ್ಶಿಸಿದ್ದಾರೆ. ಇವರ ಭಾಗವಂತಿಕೆಯ ತಂಡ ದೆಹಲಿಯ ಶಾಸ್ತ್ರೀಯ ನಾಟಕ ಶಾಲೆ 2013ರಲ್ಲಿ ದೆಹಲಿಯಲ್ಲಿ ಸಂಘಟಿಸಿದ್ದ ರಾಷ್ಟ್ರೀಯ ನಾಟಕೋತ್ಸವದಲ್ಲಿ ಮೂಡಲಪಾಯ ಯಕ್ಷಗಾನವನ್ನು ಪ್ರತಿನಿಧಿಸಿದ್ದು, ಗಯ ಚರಿತ್ರೆ ಬಯಲಾಟ

ರಾಷ್ಟ್ರೀಯ ಮಟ್ಟದಲ್ಲಿ ಪ್ರಶಂಸೆಗೂ ಪಾತ್ರವಾಗಿದೆ. ಶಾಲಾ ಶಿಕ್ಷಕರಾಗಿರುವ ಮಂಜುನಾಥ್, ಶಾಲಾ ಮಟ್ಟದಲ್ಲಿ, ಶಾಲಾ ಮಕ್ಕಳಿಗೆ ಬಯಲಾಟ ತರಬೇತಿ, ಪ್ರದರ್ಶನದ ಮೂಲಕ ತುಮಕೂರು ಪರಿಸರದಲ್ಲಿ ಹೆಚ್ಚು ಕ್ರಿಯಾಶೀಲರಾಗಿರುವ ಭಾಗವತರು. ಹರಕೆಯ ಆಟದ ಮಾದರಿಯ ಬಯಲು ಕಥೆಯನ್ನು ಪ್ರತಿವಾರ ಪ್ರದರ್ಶಿಸುತ್ತಿರುವುದು ಇವರ ಮತ್ತೊಂದು ವಿಶೇಷವಾಗಿದೆ.

ಮಡೇನೂರು, ನೊಣವಿನಕೆರೆ, ಕೆರೆಗೋಡು ರಂಗಾಪುರ, ಹೊಸಹಳ್ಳಿ, ಹೊನ್ನವಳ್ಳಿ, ಕೊನೆಹಳ್ಳಿ, ಬಿದರೆಗುಡಿ, ಗೌಡನಕಟ್ಟೆ, ಕಿಬ್ಬನಹಳ್ಳಿ ಇಲ್ಲೆಲ್ಲ ಬಯಲಾಟದ ತಂಡಗಳಿವೆ ಕಲಾವಿದರಿದ್ದಾರೆ.

ತುರುವೇಕೆರೆ ತಾಲ್ಲೂಕಿನ ಬಾಣಸಂದ್ರ, ದಂಡಿನಶಿವರ, ಮುನಿಯೂರು, ಸಂಪಿಗೆ ಹೊಸಹಳ್ಳಿ ಬಯಲಾಟದ ಪ್ರಮುಖ ನೆಲೆಗಳು. ದಂಡಿನಶಿವರದ ಮುತ್ತಿನಮ್ಮ ಯಕ್ಷಗಾನ ಮಂಡಳಿ, ದೊಡ್ಡೇನಹಳ್ಳಿ ಕೆಂಪಮ್ಮ ಬಯಲಾಟ ಸಂಘ, ಪ್ರಮುಖ ಬಯಲಾಟದ ಸಂಘಟನಾತ್ಮಕ ನೆಲೆಗಳು. ಮುನಿಯೂರು ದಾಸಾಚಾರ್, ಬಸವರಾಜ್, ನಾರಾಯಣಚಾರ್ ದೇವಿ ಮಹಾತ್ಮೆ, ಸುಧನ್ವ ಕಾಳಗ, ಗಿರಿಜಾ ಕಲ್ಯಾಣ, ಲವಕುಶ, ವಾಲಿ ಸುಗ್ರೀವರ ಕಾಳಗ, ಮೊದಲಾದ ಪ್ರಸಂಗವನ್ನು ಇಂದಿಗೂ ಪ್ರದರ್ಶಿಸುತ್ತಾ ಬರುತ್ತಿದ್ದಾರೆ. ಮುನಿಯೂರು ಬಯಲಾಟ ರಂಗಸೀನರಿಯ ಕೇಂದ್ರವಾಗಿದ್ದು, ಈ ಸುತ್ತಲ ಹಲವು ಹಳ್ಳಿಗಳಲ್ಲಿ ಬಯಲಾಟ ಪ್ರದರ್ಶನಕ್ಕೆ ಸಹಾಯಕವಾಗಿದೆ. ದೇವಿ ಮಹಾತ್ಮೆ ಊರ ಉತ್ಸವವಾಗಿ, ಪ್ರತಿ ವರ್ಷ ವಿಶೇಷವಾಗಿ ಪ್ರದರ್ಶನವಾಗುತ್ತಿದೆ. ಧರ್ಮೇಗೌಡನ ಪಾಳ್ಯದ ಭಾಗವತ ಭೀಮಣ್ಣ, ನುರಿತ ಬಯಲಾಟದ ಭಾಗವತರಾಗಿದ್ದು, ಯಕ್ಷಗಾನ ಅಕಾಡೆಮಿಯ 2022ರ ಸಾಲಿನ ಪ್ರಶಸ್ತಿ ಪುರಸ್ಕೃತರಾಗಿದ್ದಾರೆ. ಈ ಸುತ್ತಲ ಹಲವು ಹಳ್ಳಿಗಳಲ್ಲಿ ಬಯಲಾಟ ಕಲಿಸುತ್ತಿರುವ ಪ್ರತಿಭಾವಂತ ಕಲಾವಿದರು. ಇವರ ಶಿಷ್ಯ ಶಿವಣ್ಣ ಬಯಲಾಟದ ಉತ್ತಮ ಕಲಾವಿದ. ಹವ್ಯಾಸಿ ಭಾಗವತರಾಗಿಯೂ ಕೆಲಸ ಮಾಡಿದ್ದಾರೆ. ನೀರಗುಂದದ ಶಿವಪ್ಪ ಮತ್ತೊಬ್ಬ ಪ್ರತಿಭಾವಂತ ಭಾಗವತರಾಗಿದ್ದು, ಬಯಲಾಟಕ್ಕೆ ಭಾಗವಂತಿಕೆ ನೀಡುತ್ತಿದ್ದಾರೆ. ಹೊಸಹಳ್ಳಿ ಚೆನ್ನಬಸವಯ್ಯ, ಮಡೇನೂರು ಬೋರಪ್ಪ, ಹಾಲ್ಕುರ್ಕೆ ರಾಘವೇಂದ್ರರಾವ್, ಕೊನೆಹಳ್ಳಿ ಭಾಗವತ ನಾರಸಪ್ಪ, ಗೌಡನಕಟ್ಟೆ ಬಸವರಾಜು, ಸಂಘಟಕ ನಂಜುಂಡಪ್ಪ, ಅಶ್ವತಪ್ಪ ಇವರು ಬಯಲಾಟ ಕಲೆಗೆ ಮಾಡಿರುವ ಕೆಲಸ ಸಂಘಟನೆ ದೊಡ್ಡದು. ಇದಕ್ಕೆ ಪೂರಕವಾಗಿ ಕೊನೆಹಳ್ಳಿಯಲ್ಲಿ 1982 ರಲ್ಲಿ ಸ್ಥಾಪನೆಯಾಗಿರುವ ಮೂಡಲಪಾಯ ಯಕ್ಷಗಾನ ಟ್ರಸ್ಟ್, ಬಿದಿರಾಂಭ ಕೃಪಾಪೋಷಿತ ಯಕ್ಷಗಾನ ಮಂಡಳಿ ಇವುಗಳ ಸಹಯೋಗದಲ್ಲಿ 'ಮೂಡಲಪಾಯ ಯಕ್ಷಗಾನ

ISSN : 3048-7137

ಥಿಯೇಟರ್' ಕರ್ನಾಟಕಕ್ಕೆ ಮಾದರಿ ಬಯಲಾಟದ ಮೊದಲ ಸುರಕ್ಷಿತ ರಂಗಮಂದಿರವೂ ಹೌದು. ಇದನ್ನು ಯುವ ರಂಗಭೂಮಿ ನಿರ್ದೇಶಕರಾದ ತಿಪಟೂರು ಸುರೇಶ್ ಸಮರ್ಪಕವಾಗಿ ಬಳಸಿಕೊಂಡು, ಆ ಭಾಗದ ಕಾಲೇಜು ವಿದ್ಯಾರ್ಥಿಗಳಿಗೆ, ರಂಗ ಶಿಕ್ಷಣ ಕಾರ್ಯಗಾರ, ನಾಟಕೋತ್ಸವಗಳನ್ನು ಸಂಘಟಿಸುತ್ತಾ, ಆಧುನಿಕ ರಂಗದಲ್ಲಿ ಬಯಲಾಟದ ಮಟ್ಟು, ಹೆಜ್ಜೆಗಳನ್ನು ಸಮರ್ಪಕವಾಗಿ ಅಳವಡಿಸಿ ಕೊಂಡಿರುವ ಕ್ರಿಯಾಶೀಲ ನಿರ್ದೇಶಕರಾಗಿ ಹೊರಹೊಮ್ಮಿದ್ದಾರೆ. ಪ್ರಸ್ತುತ ಮೈಸೂರು ರಂಗಾಯಣದ ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸುತ್ತಿರುವುದು ಇಲ್ಲಿನ ವಿಶೇಷ.

ತುಮಕೂರು ಜಿಲ್ಲೆಯ ಮಧುಗಿರಿ ಕರ್ನಾಟಕ ಆಂಧ್ರಗಳ ಗಡಿ ನೆಲ. ಇಲ್ಲಿ ತೆಲುಗು ಹಾಗೂ ಕನ್ನಡ ಸಂಸ್ಕೃತಿ ಇದೆ. ಆದರೂ ಈ ನೆಲ ಬಯಲಾಟ ಕಲೆಗೆ ಹೆಸರಾಗಿದೆ. ಈ ಭಾಗದ ಗಡಿ ಗ್ರಾಮಗಳಾದ ರೆಡ್ಡಿಹಳ್ಳಿ, ನೀರಕಲ್ಲು, ಹನುಮಂತಪುರ, ಕಸಾಪುರ, ಬ್ರಹ್ಮದೇವರಹಳ್ಳಿ, ಹೊಸಕೋಟೆ, ಬೇಡತ್ತೂರು, ಹರೇಸಮುದ್ರ, ಸಾತೇನಹಳ್ಳಿ, ಸಿದ್ದಾಪುರ, ತೊಣಚನಹಳ್ಳಿ, ಬೆನಕನಹಳ್ಳಿ ಮತ್ತು ರೆಡ್ಡಿಹಳ್ಳಿ ಗೊಲ್ಲರಹಟ್ಟಿ, ಗೋಪಗೊಂಡನಹಳ್ಳಿ, ಎಮ್ಮೆ ತಿಮ್ಮನಹಳ್ಳಿ ಇವು ಇಂದಿಗೂ ಬಯಲಾಟ ಕಲೆಗೆ ಪ್ರಸಿದ್ಧವಾಗಿರುವ ಗ್ರಾಮಗಳು.

ನೀರಕಲ್ಲು ಭಾಗವತ ಹನುಮಂತ ರಾಯಪ್ಪ, ಬ್ರಹ್ಮದೇವನ ಹಳ್ಳಿಯ ಭಾಗವತ ರಂಗನಾಥ್, ರೆಡ್ಡಿಹಳ್ಳಿ ಗೊಲ್ಲರಹಟ್ಟಿಯ ಗಂಟೆ ಈರಣ್ಣ, ಮಾಳಿಗೆ ಈರಣ್ಣ, ಚಿತ್ತಯ್ಯ, ರೆಡ್ಡಿಹಳ್ಳಿಯ ಭಾಗವತ ರಾಮಚಂದ್ರಪ್ಪ, ಸಿದ್ದಾಪುರದ ಚನ್ನಕೃಷ್ಣಪ್ಪ– ಈ ಭಾಗದ ಪ್ರಸಿದ್ಧ ಬಯಲಾಟದ ಭಾಗವತರು. ಹನುಮಂತಪುರದ ಶಿಕ್ಷಕ ನರಸೇಗೌಡರು ಪ್ರಾಥಮಿಕ ಶಾಲಾ ಶಿಕ್ಷಕರಾಗಿದ್ದು, ಮಧುಗಿರಿ ತಾಲ್ಲೂಕನ್ನು ಕೇಂದ್ರೀಕರಿಸಿ, ಮೂಡಲಪಾಯ ಯಕ್ಷಗಾನ ಬಯಲಾಟ ಎಂಬ ಅಧ್ಯಯನ ನಡೆಸಿದ್ದಾರೆ. ಕಲಾವಿದರು, ಭಾಗವಂತಿಕೆಯನ್ನು ಮಾಡುತ್ತಿದ್ದಾರೆ.

ನೀರಕಲ್ಲು ಹನುಮಂತ ರಾಯಪ್ಪ ಹಾಗೂ ಸಿದ್ದಾಪುರದ ಚನ್ನಕೃಷ್ಣಪ್ಪ ಮತ್ತು ಬ್ರಹ್ಮದೇವರಹಳ್ಳಿ ರಂಗನಾಥ್ ಮೊದಲಾದವರು ಬಯಲಾಟದ ಜನಪ್ರಿಯ ಭಾಗವತ ರಾಗಿಯೂ ಗುರುತಿಸಿಕೊಂಡಿದ್ದಾರೆ. ನೀರಕಲ್ಲು ಹನುಮಂತರಾಯಪ್ಪನವರು ದೇವಿ ಮಹಾತ್ಮೆ ಬಯಲಾಟದ ಪ್ರಮುಖ ಕಲಾವಿದ ಹಾಗೂ ಭಾಗವತರು. ಇಲ್ಲಿ ಪ್ರಯೋಗವಾಗುತ್ತಿರುವ ದೇವಿ ಮಹಾತ್ಮೆ ಬಯಲಾಟದಲ್ಲಿ ಶ್ರೀದೇವಿಯಾಗಿ ಈರಣ್ಣ ಮತ್ತು ಹನುಮಂತರಾಯಪ್ಪ; ರಕ್ತಬೀಜಾಸುರನಾಗಿ ಹರೀಶ್ ಇವರು ಹೆಸರು ಮಾಡಿರುವ ಹಿರಿಯ ಕಲಾವಿದರು.

ರೆಡ್ಡಿಹಳ್ಳಿ ಬಯಲಾಟ ಕಲೆಗೆ ಸ್ವಾತಂತ್ರ್ಯ ಪೂರ್ವದಿಂದಲೂ ಹೆಸರುವಾಸಿಯಾದ ಗ್ರಾಮ. ಈ ಗ್ರಾಮದಲ್ಲಿ ಒಂದು ನೂರು ವರ್ಷಗಳಿಂದಲೂ ವರ್ಷಪ್ರತಿ ಪ್ರದರ್ಶನವಾಗುತ್ತಿರುವ ಸಹಸ್ರ ಕಂಠ ರಾಮಾಯಣ ಇಂದಿಗೂ ಮುಂದುವರೆದಿದೆ. ಈ ಬಯಲಾಟದ ಹಿರಿಯ ಕಲಾವಿದರಲ್ಲಿ 98 ವರ್ಷದ ಸಿದ್ದಜ್ಜನ ಆಂಜನೇಯನ ವೇಷ ಈ ಗ್ರಾಮದ ವಿಶೇಷ. ಇವರ ವೇಷ ವೀಕ್ಷಿಸಲೆಂದೇ ದೂರದ ಆಂಧ್ರಪ್ರದೇಶದ ರೊಳ್ಳೆ, ಅಗಳಿ, ಮಡಕಸಿರಾ, ನೀಲಕಂಠಪುರಗಳಿಂದ ಪ್ರೇಕ್ಷಕರು ಇಲ್ಲಿಗೆ ಆಗಮಿಸುವುದು ವಿಶೇಷ. ಮೊದಲಿಗೆ' ಕೊಲ್ಲಾಪುರದಮ್ಮ ಬಯಲಾಟ ಮಂಡಳಿ' ಎಂದು ಇದ್ದದ್ದು, ಇತ್ತೀಚೆಗೆ ಅಂಬೇಡ್ಕರ್ ಕಲಾ ಬಳಗ ಎಂದಾಗಿದೆ. ಇಲ್ಲಿನ ವೇಷಧಾರಿಗಳೆಂದರೆ; ನಾಗರಾಜು, ಓಬಳೇಶಪ್ಪ ಇವರ ಅಭಿನಯದ ಸಹಸ್ರ ಕಂಠ, ಭೀಮಣ್ಣನ ಆಂಜನೇಯ, ದೇವಿ ಪಾತ್ರದ ಹನುಮಂತಪ್ಪ, ಶ್ರೀರಾಮನಾಗಿ ಪೂಜಯ್ಯ, ರಾವಣನ ವೇಷದ ರುದ್ರೇಶ್, ಓಬಳಯ್ಯ(ದಾಳಿ) ವಿಶೇಷ ಗಮನ ಸೆಳೆದಿರುವ ಅಪರೂಪದ ಕಲಾವಿದರು.

ರೆಡ್ಡಿಹಳ್ಳಿಯ ಬಯಲಾಟ ಪ್ರದರ್ಶನದ ಮತ್ತೂ ವಿಶೇಷವೆಂದರೆ ಚಾರಿತ್ರಿಕ ವ್ಯಕ್ತಿಯಾದ ಬಸವಣ್ಣನನ್ನು ಕುರಿತು ಜಗಜ್ಯೋತಿ ಬಸವೇಶ್ವರ ಹೆಸರಿನ ಬಯಲಾಟ. ನಾಯಕನಹಟ್ಟಿಯ ತಿಪ್ಪೇಸ್ವಾಮಿ, ಲುಂಕಿಮಲೆ ಸಿದ್ದೇಶ್ವರ ಮಹಾತ್ಮೆ, ಕರಿಬಂಟ, ಕುಮಾರರಾಮ, ಈ ಬಗೆಯ ಚಾರಿತ್ರಿಕ ನಾಯಕರನ್ನು ಸಾಂಸ್ಕೃತಿಕ ನಾಯಕರನ್ನಾಗಿ ಸ್ವೀಕರಿಸಿ, ಈ ಬಗೆಯ ಪಾತ್ರಗಳಿಗೆ ಪುರಾಣ, ಚಾರಿತ್ರಿಕ, ನೆಲೆಗಳನ್ನು ಸೃಷ್ಟಿಸಿದ್ದಾರೆ. ಇಲ್ಲೆಲ್ಲಾ ಕಾಲಮಾನದ ಹಲವಾರು ಘಟನೆಗಳು, ಗುಣಗಳು, ಭಾವುಕ ನೆಲೆಯಲ್ಲಿ ಕೂಡಿಕೊಂಡಿವೆ. ಇಲ್ಲೆಲ್ಲಾ ಕುಲಮೂಲ, ವರ್ಗ ಸಂಘರ್ಷ, ಮೇಲು ಕೀಳಿನ ಅಪಮೌಲಿಕರಣದ ಹಲವಾರು ಅಂಶಗಳನ್ನು ನಿರಾಕರಣೆಯ ನೆಲೆಯಲ್ಲಿ, ಈ ಚಾರಿತ್ರಿಕ ಬಯಲಾಟಗಳು ರೂಪಗೊಂಡಿರುವುದು ವಿಶೇಷ. ಜಗಜ್ಯೋತಿ ಬಸವೇಶ್ವರ ಈ ಬಗೆಯ ಹಲವು ರಚನಾತ್ಮಕ, ಸಾಮಾಜಿಕ ವಿವೇಚನೆಗೆ ಒಳಗಾಗಿರುವ, ಬಯಲಾಟ ಸ್ವರೂಪದ, ಆಟವಾಗಿದೆ. ಭಾಗವತ ರಾಮಚಂದ್ರಪ್ಪ ಅವರ ನಿರ್ದೇಶನದ ಈ ಆಟ ಸತತವಾಗಿ 15 ಪ್ರದರ್ಶನ ಕಂಡಿದೆ. ಈ ಜಗಜ್ಯೋತಿ ಬಸವೇಶ್ವರ ಬಯಲಾಟದಲ್ಲಿ ಬಿಜ್ಜಳ ರಾಜನಾಗಿ ರೆಡ್ಡಿಹಳ್ಳಿ ಪ್ರಹಲ್ಲಾದಪ್ಪ, ಬಸವಣ್ಣನಾಗಿ ಹೆಚ್. ಶಿವಲಿಂಗಯ್ಯ, ಕೊಂಡಿ ಮಂಚಣ್ಣನ ಪಾತ್ರದ ಆರ್. ರಂಗನಾಥ, ಹರಳಯ್ಯನಾಗಿ ರಂಗಪ್ಪ, ಮಧುವರಸನಾಗಿ ಚಂದ್ರಶೇಖರಯ್ಯ, ಶೀಲಾವತಿ ಪಾತ್ರದ ಟಿ. ತಿಪ್ಪೇಸ್ವಾಮಿ ಮನೋಜ್ಞ ಅಭಿನಯ ನೀಡಿರುವ ಅಪರೂಪದ ಕಲಾವಿದರು. ಕೈಬರಹದ ಈ ಪ್ರಸಂಗ ಸಾಹಿತ್ಯದಲ್ಲಿ ಬಯಲಾಟ ಸ್ವರೂಪದ ಕಂದ, ಭಾಮಿನಿ, ತ್ರಿಪುಡೆ, ಪದ್ಯಗಳಿದ್ದು, ಕಲ್ಯಾಣಿ, ಕಾಂಬೋಜ, ಮುಖಾರಿ, ಭೈರವಿ, ಬೇಗಡೆ, ಆನಂದಭೈರವಿ, ಸಾವೇರಿ,

ISSN : 3048-7137

ರೆಗುಪ್ತಿ, ತೋಡಿ, ಶಿವರಂಜನಿ ಈ ಮೊದಲಾದ ರಾಗಗಳಲ್ಲಿ ಹಾಡುತ್ತಾರೆ. ಮೃದಂಗ, ತಾಳ, ಶ್ರುತಿಪಟ್ಟಿಗೆಯನ್ನು ಬಳಸಿಕೊಳ್ಳುತ್ತಾ ಮುಮ್ಮೇಳ ಹಿಮ್ಮೇಳದಲ್ಲಿ ಯಕ್ಷಗಾನದ ಸಂಗೀತವಿರುತ್ತದೆ. ಮುಖವೀಣೆ ಕಲಾವಿದರಾಗಿ ಸಾತೇನಹಳ್ಳಿಯ ಹನುಮಂತಪ್ಪ, ಮೃದಂಗ ಕಲಾವಿದರಾಗಿ ಬೆನಕನಹಳ್ಳಿಯ ಹನುಮಂತರಾಯಪ್ಪ ಈ ಪ್ರದರ್ಶನದಲ್ಲಿ ಒಳ್ಳೆಯ ಸಾತ್ ನೀಡುತ್ತಿದ್ದರು.

ರೆಡ್ಡಿಹಳ್ಳಿ ಗೊಲ್ಲರಟ್ಟಿಯನ್ನೇ ಕೇಂದ್ರವಾಗಿರಿಸಿಕೊಂಡು ಪೂರ್ವದಿಂದಲೂ ಬಯಲಾಟ ಪ್ರಸಂಗವನ್ನು ಪ್ರದರ್ಶನವನ್ನು ಏರ್ಪಡಿಸುತ್ತಾ ಬರುತ್ತಿದ್ದಾರೆ. ಈ ಗ್ರಾಮದ ಪ್ರಸಿದ್ಧವಾದ ಬಯಲಾಟ ಪ್ರಸಂಗ 'ಕೊಂಡ್ಲಿಕನ ವಧೆ'. ಈ ಪ್ರಸಂಗವನ್ನು 150ಕ್ಕೂ ಹೆಚ್ಚು ಸಲ ಪ್ರದರ್ಶಿಸುವುದಾಗಿ ಪ್ರಹ್ಲಾದಪ್ಪ ಹೇಳುತ್ತಾರೆ. ಇದೇ ಗ್ರಾಮದಲ್ಲಿ ಭಾಗವತರಾದ ಚಿತ್ತಯ್ಯ, ಗೌಡ ದಾಸಪ್ಪ, ಪೊಲೀಸ್ ಈರಮುದ್ದಯ್ಯ, ಇವರು ಕೊಡ್ಲಿಕನ ವೇಷದ ಪರಂಪರಾಗತ ಕಲಾವಿದರು. ಪ್ರಸ್ತುತ ಇವರೆಲ್ಲರೂ ಭಾಗವಂತಿಕೆಯನ್ನು ಮಾಡುತ್ತಾರೆ. ಸಂಘಟಕರಾಗಿ ಚಂದ್ರಶೇಖರಯ್ಯ, ಬಡಯ್ಯ ಮುಖ್ಯ ಪಾತ್ರ ವಹಿಸುತ್ತಿದ್ದಾರೆ. ಇದೇ ಗ್ರಾಮದಲ್ಲಿ ಶನಿ ಮಹಾತ್ಮೆ, ರಾಮಾಯಣ ಪ್ರಸಂಗಗಳನ್ನೂ ಪ್ರದರ್ಶಿಸುತ್ತಿದ್ದಾರೆ. ಈ ಭಾಗದ ಭಾಗವಂತಿಕೆಯಲ್ಲಿ ಮಡಿವಾಳರ ಹನುಮಂತಯ್ಯ, ಗೌಡರ ರಾಮಚಂದ್ರಪ್ಪ ಇವರಿಗೆ ಭಾಗವಂತಿಕೆಯ ಗುರುಗಳಾಗಿ ವೈಷ್ಣವರ ರಂಗಪ್ಪನವರು ಹಲವು ಬಯಲಾಟ ಪ್ರಸಂಗ ಪ್ರದರ್ಶನದ ಜೊತೆಗೆ, ಭಾಗವತರನ್ನು ರೂಪಿಸಿದ್ದಾರೆ. ರೆಡ್ಡಿಹಳ್ಳಿ, ನೀಲಕಂಠಾಪುರ, ಮಿಡಿಗೇಶಿ, ಕಸಾಪುರ ಇಲ್ಲೆಲ್ಲ ಬಯಲಾಟದ ಮೇಷ್ಟ್ರಾಗಿ ರಂಗಪ್ಪನವರ ಶಿಷ್ಯ ಪರಂಪರೆ ಇದೆ. ಈ ಭಾಗದ ಮುಖವೀಣೆ ಕಲಾವಿದರಾಗಿ ಚಿಕ್ಕಕುರ್ಕೆಯ ನರಸಿಂಹಯ್ಯ, ಬೇಡತ್ತೂರು ರಂಗಪ್ಪ, ಹರೇಸಂದ್ರದ ರಂಗನಾಥ, ತೊಣಚನಹಳ್ಳಿಯ ಸಿಬಿ ರಂಗಯ್ಯ, ಬಯಲಾಟದ ಬೆಳವಣಿಗೆಯ ಉತ್ತೇಜಕರಾಗಿ ಕಾರ್ಯ ನಿರ್ವಹಿಸುತ್ತಿರುವುದು ವಿಶೇಷವಾಗಿದೆ.

ಕರ್ನಾಟಕಾಂಧ್ರ ಗಡಿ ನೆಲವಾದ ಪುರವರ ಹೋಬಳಿಯ ಕೋಡ್ಲಾಪುರ ಬಯಲಾಟ ಕಲೆಗೆ ಪ್ರಸಿದ್ಧವಾಗಿದ್ದ ಗ್ರಾಮ. ಈ ಗ್ರಾಮದಲ್ಲಿ ಪಾರಂಪರಿಕವಾಗಿ ಪ್ರದರ್ಶಿಸುತ್ತಾ ಬರುತ್ತಿದ್ದ ದೇವಿ ಮಹಾತ್ಮೆ, ಕರ್ಣಾರ್ಜುನರ ಕಾಳಗ, ಕೃಷ್ಣ ಗಾರುಡಿ, ವಿರಾಟಪರ್ವ, ಸಂಪೂರ್ಣ ರಾಮಾಯಣ– ಈ ಪ್ರಸಂಗಗಳು ಈ ಭಾಗದ ಜನಪ್ರಿಯ ಬಯಲಾಟದ ಪ್ರಸಂಗಗಳು. ಭಾಗವತ ರಂಗಶ್ಯಾಮಣ್ಣ, ವೆಂಕಟಸ್ವಾಮಣ್ಣ ಇವರುಗಳ ನೇತೃತ್ವದಲ್ಲಿ ಪ್ರತೀ ವರ್ಷ ಆಷಾಡ ಮಾಸದ ಊರಹಬ್ಬದ ಸಂದರ್ಭದಲ್ಲಿನ ದೇವಿ ಮಹಾತ್ಮೆ ಮತ್ತು ಕಾರ್ತೀಕ ಸೋಮವಾರದಂದು ಪ್ರದರ್ಶಿಸುತ್ತಾ ಬರುತ್ತಿದ್ದ ಸಂಪೂರ್ಣ ರಾಮಾಯಣ ಪ್ರಸಂಗಗಳು ಇಂದಿಗೂ

ವಾರ್ಷಿಕವಾಗಿ ಪ್ರದರ್ಶನಗೊಳ್ಳುತ್ತಾ ಬರುತ್ತಿರುವುದು ವಿಶೇಷ. ಹಿರಿಯ ಕಲಾವಿದರಾಗಿ ದೇವರಾಜ ಚಿಕ್ಕಣ್ಣ, ಪಿಳ್ಳೆ ರಾಮಣ್ಣ, ಪ್ರಹ್ಲಾದಪ್ಪ, ಮಿಲ್ ರಾಮಣ್ಣ, ಛೇರ್ಮನ್ ಹನುಮಂತರಾಯಪ್ಪ, ಲಕ್ಷ್ಮಣಪ್ಪ, ಗಂಗಾಧರಯ್ಯ ಇವರುಗಳು ನಿರಂತರ ಪಾತ್ರಧದಾರಿಗಳು. ಈ ಸೀಮೆಯ ವಿಶೇಷ ರಾಮಯಾಣ ಬಯಲಾಟದ ಗೌಸ್ ಬೇಗ್‌ನ ಆಂಜನೇಯನ ಪಾತ್ರದಲ್ಲಿ ವಿಶೇಷ ಪಾತ್ರಾಭಿನಯ ಮಾಡುವುದರ ಮೂಲಕ ಜನಮನ ಸೆಳೆದ ಹಿರಿಯ ಕಲಾವಿದ. ಈ ಬಗೆಯ ಬಯಲಾಟಗಳಿಗೆ ಪ್ರಾಕ್ಟೀಸ್ ಸಂಘಟಕರಾಗಿ ಪತ್ರಕರ್ತ ಶಂಕರಾನಂದ ಅವರ ಕೊಡುಗೆಯೂ ಗಮನಾರ್ಹವಾದುದು.

ಗೋಪಗೊಂಡನಹಳ್ಳಿಯ ಭಾಗವತ ಜಿ.ಆರ್. ಚಿಕ್ಕಮುದ್ದಯ್ಯ, ಎಮ್ಮೆ ತಿಮ್ಮನಹಳ್ಳಿ ದೊಡ್ಡ ಪಾಲಯ್ಯ, ಈರಮಾಳಪ್ಪ, ಸಣ್ಣ ತಿಮ್ಮಯ್ಯ ಈ ಮೊದಲಾದ ಹಿರಿಯ ಭಾಗವತರು, ಕರ್ನಾಟಕ ಯಕ್ಷಗಾನ ಅಕಾಡೆಮಿಯಿಂದಲೂ ಗೌರವಕ್ಕೆ ಪಾತ್ರರಾಗಿರುವುದು ಈ ಗಡಿ ನೆಲದ ಸಾಂಸ್ಕೃತಿಕ ಅನನ್ಯತೆಯಲ್ಲಿ ತೋರಿರುವ ಸಾಧನೆಯ ಪ್ರತೀಕವಾಗಿದೆ.

ತುಮಕೂರು ಜಿಲ್ಲೆಯ ಸಿದ್ದರಬೆಟ್ಟದ ಪರಿಸರದ ಹಲವು ಹಳ್ಳಿಗಳಲ್ಲಿ ಬಯಲಾಟ ಒಂದು ಪಾರಂಪರಿಕ ಕಲೆಯಾಗಿ ರೂಢಿಯಲ್ಲಿದೆ. ದಾಸಾಲಕುಂಟೆಯ ಭಾಗವತ ನಂಜಪ್ಪ ಅವರ ಕುಟುಂಬದ ಶಿವರುದ್ರಯ್ಯ. ಥರಟಿಯ ಶ್ರೀರಂಗಯ್ಯ. ಹನುಮಂತರಾಯಪ್ಪ. ಭಕ್ತರಹಳ್ಳಿಯ ಷಣ್ಮುಖಪ್ಪ. ಪಾಂಡುರಂಗಯ್ಯ. ವೀರಕ್ಯಾತರಾಯ. ನಂದೀಶಪ್ಪ. ಭೀಮನಕುಂಟೆ ಭಾಗವತ ಕಾಮಣ್ಣ. ದೊಡ್ಡೇರಿ ರಾಮಣ್ಣ. ಭಕ್ತರಳ್ಳಿ ಶಿವಣ್ಣ, ಈ ಭಾಗದಲ್ಲಿ ತಮ್ಮ-ತಮ್ಮ ಸೀಮಿತ ಪರಿಸರ ಸಂದರ್ಭದಲ್ಲಿ, ಬಯಲಾಟ ಕಲೆಯ ಪ್ರದರ್ಶನದಲ್ಲಿ ತೊಡಗಿಸಿಕೊಂಡಿದ್ದಾರೆ. ಲವಕುಶ, ರಾಮಾಂಜನೇಯ ಯುದ್ಧ, ಈ ಭಾಗದ ಪ್ರಮುಖ ಬಯಲಾಟ ಪ್ರಸಂಗಗಳು. ಹರಕೆಯ ಆಟವಾಗಿ ದೇವಿ ಮಹಾತ್ಮೆ ಬಯಲಾಟವನ್ನು ಕ್ಯಾಮೇನಹಳ್ಳಿ, ಅಂಚೆಹಳ್ಳಿ ಕಾಣದಾಳು ಈ ಗ್ರಾಮಗಳಲ್ಲಿ ಇಂದಿಗೂ ಧಾರ್ಮಿಕ ಸಾಂದರ್ಭಿಕ ಆಟವಾಗಿ ಮುಂದುವರಿಸಿದ್ದಾರೆ. ಭಾಗವತ ಚಿಕ್ಕೀರಪ್ಪ ಬೈಚಾಪುರ, ಗುರುಗದೊಡ್ಡಿ ತಿಮ್ಮಯ್ಯ, ಮೋಟಗಾನಹಳ್ಳಿ ತಿಮ್ಮಯ್ಯ, ಮಾರಗನಹಳ್ಳಿ ಗೋವಿಂದಪ್ಪ, ಕೆರೆಯಾಗಲಹಳ್ಳಿ ಭೀಮಯ್ಯ, ಕೊರಟಗೆರೆಯ ಚೌಡಪ್ಪ, ದೇವಪ್ಪ ಜೋಡಿ ಭಾಗವತರು, ಈ ಭಾಗದ ಮುಖ್ಯ ಭಾಗವತರಾಗಿ ಕೊರಟಗೆರೆ ಪರಿಸರದಲ್ಲಿ ಬಯಲಾಟ ಕಲೆಯನ್ನು ಬೆಳೆಸಿದ ಹಿರಿಯರು.

ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಶೆಟ್ಟಿಕೆರೆ, ಹಂದನಕೆರೆ, ಮತ್ತಿಘಟ್ಟ ಇಂದಿಗೂ

ISSN : 3048-7137

ಬಯಲಾಟದ ಪ್ರಮುಖ ನೆಲೆಗಳು. ಕಂಟಲಗೆರೆ ಚಿಕ್ಕನಾಯಕನಹಳ್ಳಿಯೂ ಬಯಲಾಟವನ್ನು ಧಾರ್ಮಿಕ ಆಚರಣೆಯ ಮಾದರಿಯಲ್ಲಿ, ಗ್ರಾಮೀಣ ಅಭಿವೃದ್ಧಿಯ ಭಾಗವಾಗಿ ಪ್ರದರ್ಶಿಸುತ್ತಿದ್ದರು.

ಶೆಟ್ಟಿಕೆರೆಯ ಮಾರಣ್ಣ, ಕೆಂಪರಾಮಯ್ಯ, ಕೊಕ್ಕಟ್ಟೆ ಮರಳ ಸಿದ್ದಪ್ಪ, ಹಂದನಕೆರೆ ಕರಿಯಣ್ಣ ಶೆಟ್ಟಿ, ಚಿಕ್ಕನಾಯಕನಹಳ್ಳಿ ಬಯಲಾಟದ ಭೀಮಣ್ಣ; ಕುರುಬರಹಳ್ಳಿ ತಿಮ್ಮಣ್ಣ, ಶೆಟ್ಟಿಕೆರೆ ಚಂದ್ರಶೇಖರ್, ಭೈರಾಪುರ ಬಸವರಾಜು, ಕೆಂಚಯ್ಯ ಕಂಟಲಗೆರೆ, ಕಂಟಲಗೆರೆ ತಿಮ್ಮಯ್ಯ, ಅಂದನಕೆರೆ ಚೆನ್ನಪ್ಪ, ಲಕ್ಷ್ಮಿಪುರದ ಗಂಗಣ್ಣ, ಕಲ್ಲೇನಹಳ್ಳಿ ದೊಡ್ಡ ರಂಗಪ್ಪ, ಕೆಂಗಲಾಪುರದ ಮುನಿಯಪ್ಪ, ಕಮಲಾಪುರದ ಗುಡ್ಡಯ್ಯ, ಅಗಸರಹಳ್ಳಿ ಶಂಕರಲಿಂಗಯ್ಯ, ಕಲ್ಲೇನಹಳ್ಳಿ ತಿಮ್ಮಯ್ಯ, ಕಂಟಲಗೆರೆ ತಿಮ್ಮಯ್ಯ, ದುಗುಡಿ ಹಳ್ಳಿ ರಾಮಯ್ಯ, ಹುಳಿಯಾರು ಪಾಳ್ಯದ ನಾಗೋಜಿ ರಾವ್ ಮತ್ತು ಶಿವಾಜಿ ರಾವ್, ಹಂದನಕೆರೆ ರಂಗಪ್ಪ– ಈ ಭಾಗವತ ಪರಂಪರೆ ದೊಡ್ಡದು. ಇವರುಗಳು ಚಿಕ್ಕನಾಯಕನಹಳ್ಳಿ, ಹೊಸದುರ್ಗ, ತಿಪಟೂರು, ಈ ಭಾಗಗಳಲ್ಲಿ ಸಂಚಾರಿ ಭಾಗವತರುಗಳಾಗಿ, ವಿರಾಟಪರ್ವ, ದಕ್ಷ ಯಾಗ, ಐರಾವತ, ಕರಿಬಂಟ, ದುಶ್ಯಾಸನ ಕಾಳಗ, ಪಾಂಡು ವಿಜಯ, ಲವಕುಶ, ಇಂದ್ರಜಿತ್ ಕಾಳಗ, ಟಗರು ಪವಾಡ– ಈ ಮೊದಲಾದ ಬಯಲಾಟಗಳನ್ನು ಗ್ರಾಮೀಣರಿಗೆ ಹೆಚ್ಚು ಕ್ರಿಯಾಶೀಲರಾಗಿ ಕಲಿಸಿದ ಭಾಗವತರು. ಇವರಿಗೆ ಮುಖವೀಣೆ ಸಾತ್ ನೀಡಿದ ಅಪ್ರತಿಮ ಮುಖ ವೀಣೆ ಕಲಾವಿದರೂ ಈ ಭಾಗದ ವಿಶೇಷ.

ಹಂದನಕೆರೆ ರಂಗಪ್ಪ, ಹೆಸರಳ್ಳಿ ಮೂರ್ತಣ್ಣ, ದಬ್ಬೇಗಟ್ಟದ ಶಂಕರಪ್ಪ, ಬೇವಿನಹಳ್ಳಿ ರಂಗಪ್ಪ, ಬಸವರಾಜು, ಮತ್ತಿಘಟ್ಟದ ಗಂಗಪ್ಪ, ಮಲ್ಲಿಗೆರೆ ತಿಮ್ಮಯ್ಯ, ದಬ್ಬೇಗಟ್ಟದ ರಂಗಸ್ವಾಮಯ್ಯ, ಇವರುಗಳು ಬಯಲಾಟ ಕಲೆಗೆ ಮೆರಗು ತಂದ ಮಹನೀಯರು. ಬೇವಿನಹಳ್ಳಿ ರಂಗನಾಥ್, ಬಸವರಾಜ್ ಇಂದಿಗೂ ಚಿಕ್ಕನಾಯಕನಹಳ್ಳಿ ಪರಂಪರೆಯ ಪರಿಸರದ ಬಯಲಾಟ ಕಲೆಯ ಜೀವಂತಿಕೆಗೆ ಕಾರಣವಾಗುತ್ತಿರುವ ಅಪರೂಪದ ಜೋಡಿಗಳು. ತಂದೆ ಮತ್ತು ಮಗ ಇಬ್ಬರೂ ಸಮಾನ ಪಾಂಡಿತ್ಯ ಹೊಂದಿರುವ ಮುಖ ವೀಣೆ ಕಲಾವಿದರು.

ಸ್ವಾತಂತ್ರ್ಯ ಪೂರ್ವದಿಂದ ಬಯಲಾಟದ ಭಾಗವಂತಿಕೆಗೆ ಹೆಸರಾಗಿದ್ದ ಶೆಟ್ಟಿಕೆರೆ ಕೆಂಪರಾಮಯ್ಯ, ಹಂದನಕೆರೆ ಕರಿಯಣ್ಣ ಶೆಟ್ಟಿ– ಇವರು ಜೀಶಂಪ ಅವರೊಂದಿಗೆ ಸಂಪರ್ಕ ಹೊಂದಿ, ಮೈಸೂರು ವಿಶ್ವವಿದ್ಯಾಲಯದ ಜನಪದ ವಿದ್ಯಾರ್ಥಿಗಳಿಗೆ ಯಕ್ಷಗಾನ ತರಬೇತಿ, ಇದರ ಬಗೆಗೆ ಪ್ರಾತ್ಯಕ್ಷಿಕೆ ನೀಡಿದ ಅಪೂರ್ವರು. ಮೈಸೂರು ದಸರಾ ವಸ್ತು ಪ್ರದರ್ಶನ, ಬಾಂಬೆ, ದೆಹಲಿ, ನಾಗಪುರ, ಇಲ್ಲೆಲ್ಲ ಪ್ರದರ್ಶನ ನೀಡಿದ

ಹಿರಿಮೆಯು ಇವರದು. ವಿಶೇಷವಾಗಿ ಕೆಂಪರಾಮಯ್ಯ ಅವರು ತಮ್ಮ ಭಾಗವಂತಿಕೆಯ ಜೊತೆಗೆ ಬಯಲಾಟದ ಸಾರಥಿ ಪಾತ್ರವನ್ನು ಹಾಕುತ್ತಿದ್ದ ಕಲಾವಿದರು. ಇವರ ಈ ಪಾತ್ರ ನಿರ್ವಹಣೆ, ಹಳೆಯ ತಲೆಮಾರಿನ ಹಲವು ವಿದ್ವಾಂಸರು ಮೆಚ್ಚಿಕೊಂಡಿದ್ದಾರೆ. ಶೆಟ್ಟಿಕೆರೆ ಕೆಂಪರಾಮಯ್ಯ ಅವರಿಗೆ 1992ರಲ್ಲಿ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಗೌರವ ಪ್ರಶಸ್ತಿ ಲಭಿಸಿದರೆ, ಹಂದನಕೆರೆ ಕರಿಯಣ್ಣ ಶೆಟ್ಟರಿಗೆ 2000ನೇ ಸಾಲಿನಲ್ಲಿ ಅಕಾಡೆಮಿ ಗೌರವ ಪ್ರಾಪ್ತವಾಗಿದೆ. ಚಿಕ್ಕನಾಯಕನಹಳ್ಳಿಯಲ್ಲಿ 'ಟಗರು ಪವಾಡ' ಎಂಬ ಚಾರಿತ್ರಿಕ ವಸ್ತುವನ್ನು ಯಕ್ಷಗಾನ ಸ್ವರೂಪಕ್ಕೆ ತಂದು, ಬಹಳ ವರ್ಷಗಳ ಕಾಲ ನಿರಂತರವಾಗಿ ಪ್ರದರ್ಶನ ಮಾಡುತ್ತಾ ಬಂದರು. ಕಣ್ಣಯ್ಯ, ಸಿದ್ದರಾಮಣ್ಣ, ಮೈಲಾರಯ್ಯ ಗೊರಪ್ಪನವರ ಲಿಂಗಣ್ಣ, ಸಿದ್ದೇಶ್, ಸಿದ್ದು ಈ ತಂಡದ ಪ್ರಮುಖ ಹಾಗೂ ನಿರಂತರವಾಗಿ ಪ್ರದರ್ಶನ ನೀಡುತ್ತಿದ್ದ ಕಲಾವಿದರು. 'ಬಯಲಾಟದ ಭೀಮಣ್ಣ' ಇದರ ಭಾಗವತರಾಗಿ 50ಕ್ಕೂ ಹೆಚ್ಚು ಪ್ರದರ್ಶನ ನೀಡಿದ್ದಾರೆ. ಭೀಮಣ್ಣನವರು ಲವಕುಶ, ದೇವಿ ಮಹಾತ್ಮೆ, ವಿರಾಟ ಪರ್ವ, ಇಂದ್ರಜಿತ್ ಕಾಳಗ, ಗಿರಿಜಾ ಕಲ್ಯಾಣ ಮೊದಲಾದ ಬಯಲಾಟವನ್ನು ಚಿಕ್ಕನಾಯಕನಳ್ಳಿಯಲ್ಲಿ ಕುರುಬರ ಹೊಸ ಬೀದಿಯ ಕಲಾವಿದರಿಗೆ ಹಾಗೂ ಕಾಲೋನಿಯ ಕಲಾವಿದರಿಗೆ ಪ್ರತ್ಯೇಕವಾಗಿಯೇ ನಿರಂತರವಾಗಿ ಕಲಿಸುತ್ತಾ ಬಂದ ಅಪೂರ್ವ ಭಾಗವತರು. ಕೆ.ಬಿ. ಕ್ರಾಸ್ ಗೋವಿಂದಪ್ಪ, ಚಿಕ್ಕನಾಯಕನಹಳ್ಳಿ ದೇವರಾಜ್, ಬೈರಾಪುರದ ಬಸವರಾಜು ಇವರು ಇಂದಿಗೂ ಚಿಕ್ಕನಾಯಕನಹಳ್ಳಿ ಪರಿಸರದಲ್ಲಿ ಹೆಚ್ಚು ದೇವಿ ಮಹಾತ್ಮೆ, ರಾಜಾ ವಿಕ್ರಮ, ಸತ್ಯವ್ರತ, ತ್ರಿಪುರ ಸಂಹಾರ, ಗಯ ಚರಿತ್ರೆ ಹಾಗೂ ಲವಕುಶ ಬಯಲಾಟ ಪ್ರಸಂಗಗಳನ್ನು ಕಲಿಸುತ್ತಾ ಪ್ರದರ್ಶನ ನೀಡುತ್ತಿರುವ ಬಯಲಾಟದ ಭಾಗವತರು ಮತ್ತು ಸಂಘಟಕರು ಆಗಿರುವುದು ವಿಶೇಷ.

ತುಮಕೂರು ಜಿಲ್ಲಾ ಕೇಂದ್ರದ ಕುರಿಪಾಳ್ಯ, ಹೊರಾಂಗಣದ ಅರಳಿ ಮರದ ಪಾಳ್ಯ, ಶ್ರೀರಾಮನಗರ ಇಲ್ಲೆಲ್ಲಾ ಬಯಲಾಟ ಪ್ರಸಂಗಗಳು 2000ನೇ ಇಸವಿಯ ತನಕ ಪ್ರದರ್ಶನವಾಗುತ್ತಿದ್ದು, ಕುರಿ ಪಾಳ್ಯದಲ್ಲಿ ಪ್ರದರ್ಶನವಾಗುತ್ತಿದ್ದ ದುಶ್ಯಾಸನ ವಧೆ ಪ್ರಸಂಗದ ಗಂಗಣ್ಣ ಎಂಬ ಭೀಮನ ಪಾತ್ರದ ಕಲಾವಿದರು, ಇವರು ಆವೇಶದಲ್ಲಿ ದುಶ್ಯಾಸನವನ್ನು ಹಿಡಿದು ಜೀವಂತವಾಗಿ ಕರುಳು ಬಗೆದು ಜೇಲು ಪಾಲಾದ ಕಥೆ ರೋಚಕ. ಆತನನ್ನು ಪಾಂಚಾಲಿ ಗಂಗಣ್ಣ ಅಂತಲೇ ಕರೆಯುತ್ತಿದ್ದರು. ಅತ್ಯುತ್ತಮ ಬಯಲಾಟ ಕಲಾವಿದ, ನೃತ್ಯ ಕಲಾವಿದರಾಗಿಯೂ ಜನಮನ ಗೆದ್ದಿದ್ದ ಕಲಾವಿದ.

ತುಮಕೂರಿನ ಟಿ. ವೆಂಕಟರಾಮಯ್ಯ ಈ ಭಾಗದ ಪ್ರಸಿದ್ಧವಾಗಿದ್ದ ಬಯಲಾಟ ಕಲಾವಿದ, ಭಾಗವತರಾಗಿ, ದುಶ್ಯಾಸನ ಕಥೆ, ವಾಲಿ ವಧೆ, ಲವಕುಶರ ಕಾಳಗ,

ಕರ್ಣಾರ್ಜುನರ ಕಾಳಗ, ಈ ಬಗೆಯ ಬಯಲಾಟಗಳನ್ನು ತುಮಕೂರು ನಗರ, ಕುರಿಪಾಳ್ಯ, ಶೆಟ್ಟಿಹಳ್ಳಿ, ಅರಳಿ ಮರದಪಾಳ್ಯ, ನಾಗವಲ್ಲಿ, ಹೆಬ್ಬೂರು, ಸಿರಿವಾರ, ಊರ್ಡಿಗೆರೆ ಈ ಗ್ರಾಮಾಂತರ ಪ್ರದೇಶಗಳಲ್ಲಿಯೂ ಬಯಲಾಟ ಕಲೆಯನ್ನು ವಿಸ್ತರಿಸಿದ ಹಿರಿಯ ಭಾಗವತರು. ಇವರಿಗೆ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯು 1998ನೇ ಸಾಲಿನಲ್ಲಿ ಜಿಶಂಪ ನೇತೃತ್ವದಲ್ಲಿ ಪ್ರಶಸ್ತಿ ನೀಡಿ ಗೌರವಿಸಿದೆ. ಉಳಿದಂತೆ ಬಯಲಾಟ ಭಾಗವತರಾಗಿ ಸಿರಿವಾರದ ಕೆಂಪಯ್ಯ, ಮೆಳೆಹಳ್ಳಿಯ ಡಿ. ಅಡವೀಶಯ್ಯ, ಸೀತಕಲ್ಲು ತಿಮ್ಮಪ್ಪ ಶೆಟ್ಟಿ, ಭೀಮಸಂದ್ರದ ಚನ್ನರಾಯಪ್ಪ, ಲಿಂಗದೇವರು, ಉಪ್ಪಾರಹಳ್ಳಿ ಹನುಮಂತಯ್ಯ, ನರಸಿಂಹಯ್ಯ, ಈ ಬಗೆಯ ಭಾಗವತರು ತುಮಕೂರು ಗ್ರಾಮೀಣ ಪರಿಸರದಲ್ಲಿ ಬಯಲಾಟ ಪ್ರಸಂಗಗಳನ್ನು ನಿರ್ವಹಿಸುತ್ತಿದ್ದ ಹಿರಿಯರು. ತುಮಕೂರು ತಾಲ್ಲೂಕು ರಂಗನಪಾಳ್ಯ ಭಾಗವತ ರಂಗಪ್ಪ, ಬೆಳ್ಳಾವಿ ಹಟ್ಟಿ ಚಿಕ್ಕಣ್ಣ, ದೊಡ್ಡವೀರನಹಳ್ಳಿ ರಂಗಸ್ವಾಮಯ್ಯ ಇವರು ದೇವಿ ಮಹಾತ್ಮೆ, ಶತಕಂಠ ರಾಮಾಯಣ, ಭಕ್ತ ಸಿರಿಯಾಳ, ಗಯ ಚರಿತೆ, ಪ್ರಸಂಗಗಳನ್ನು ಇತ್ತೀಚಿನ ತನಕ ಪ್ರದರ್ಶಿಸುತ್ತಾ ಬರುತ್ತಿದ್ದರು. ಶ್ರಾವಣದ ಸಂದರ್ಭದಲ್ಲಿ ದೇವಿ ಮಹಾತ್ಮೆ ಬಯಲಾಟ ಈ ಭಾಗಗಳಲ್ಲಿ ಇಂದಿಗೂ ಪ್ರದರ್ಶನವಾಗುತ್ತಿದ್ದು, ಯುವಕರು ಕಲಿತು, ಹಾಡುವುದರ ಜೊತೆಗೆ ಹೊರಗಡೆಯಿಂದ ಕಲಾವಿದರನ್ನು ಆಹ್ವಾನಿಸಿ, ಪ್ರದರ್ಶನ ನೀಡುವುದು ರೂಢಿಯಾಗಿದೆ. ಸಾಮಗಾನ (ಪೌರಾಣಿಕ ನಾಟಕ); ಆಧುನಿಕ ರಂಗಭೂಮಿಯ ವಿವಿಧ ಐತಿಹಾಸಿಕ, ಸಾಮಾಜಿಕ ನಾಟಕಗಳು ಒಂದೆಡೆಯಾಗಿ ರಂಗಭೂಮಿ ಕ್ಷೇತ್ರದ ಸ್ಥಿತ್ಯಂತರವಾಗುತ್ತಿರುವ ಹಾಗೂ ಸಿನಿಮಾ, ಟಿವಿ ಧಾರವಾಹಿಗಳ ಸೆಳೆತಗಳಿಂದ ಆಕರ್ಷಿತರಾಗಿ, ಸಾಂಪ್ರದಾಯಿಕ ಜನಪದ ರಂಗಭೂಮಿಯ ಒಲವು ತೀವ್ರವಾಗಿ ಕುಸಿತವಾಗುತ್ತಿರುವುದರ ನಡುವೆಯೂ, ತುಮಕೂರು ಜಿಲ್ಲೆಯ ಗ್ರಾಮೀಣ ಪ್ರದೇಶಗಳಲ್ಲಿ ಬಯಲಾಟ ಕಲೆ ತನ್ನ ಮೂಲ ಆಕರ್ಷಣೆಯನ್ನು ಬಿಟ್ಟುಕೊಟ್ಟಿಲ್ಲ ಎಂಬುದು ಮತ್ತೂ ವಿಶೇಷವಾಗಿದೆ.

ಚಿತ್ರದುರ್ಗ ಜಿಲ್ಲೆ, ಕರ್ನಾಟಕ ಆಂಧ್ರದ ಹಲವು ಹಳ್ಳಿಗಳನ್ನು ಒಳಗೊಂಡ ಭೌಗೋಳಿಕ ಸ್ವರೂಪದ ಜಿಲ್ಲೆ. ಈ ಜಿಲ್ಲೆಯ ಚಳ್ಳಕೆರೆ, ಮೊಳಕಾಲ್ಮೂರು, ಹಿರಿಯೂರು, ಹೊಳಲ್ಕೆರೆ, ಈ ಭಾಗಗಳಲ್ಲಿ ಬಯಲಾಟ ಕಲೆ ಇಂದಿಗೂ ವ್ಯಾಪಕವಾಗಿದೆ. ಪಕ್ಕದ ದಾವಣಗೆರೆ ಜಿಲ್ಲೆಯ ವ್ಯಾಪ್ತಿಯಲ್ಲಿ ಸೇರಿಕೊಂಡು ಬಯಲಾಟ ಕಲೆಯನ್ನು ವಿಸ್ತರಿಸಿದೆ. ಚಿತ್ರದುರ್ಗ ಜಿಲ್ಲೆಯ ಹಿರಿಯೂರು, ಗೌಡನಹಳ್ಳಿ, ತುರುವನೂರು, ತಾಳಿಕಟ್ಟೆ, ಧರ್ಮಪುರ, ಹೊಸಹಳ್ಳಿ, ಆಯತೋಡು, ಹರಿಯಬ್ಬೆ, ಚಳ್ಳಕೆರೆ, ಓಬಯ್ಯನ ಹಟ್ಟಿ, ಎರೇಹಳ್ಳಿ, ಕಾಲುವೆಹಳ್ಳಿ, ಹೊಸ ಯಳನಾಡು, ಗೂಳ್ಯ, ಚಿಲ್ಲಹಳ್ಳಿ, ಹೂ ತೊಟ್ಲು; ಸಿರಿಗೆರೆ, ಬಿ.ಜಿ.ಕೆರೆ, ನಾಯಕನಹಟ್ಟಿ, ಹೊಸದುರ್ಗ, ಶಿವನಿ, ರಾಮಗಿರಿ, ಚೆನ್ನಗಿರಿ,

ಹೊನ್ನಾಳಿ, ಯರಬಳ್ಳಿ, ಗೌರಸಂದ್ರ, ಬಿಳಿಗೆರೆ, ದೇವಿ ಹೊಸಳ್ಳಿ, ಚಿತ್ರದುರ್ಗದ ಕೆಳಕೋಟೆ, ಪಗಲ ಬಂಡೆ, ಪರಶುರಾಮಪುರ, ಚೌಳ ಹಿರಿಯೂರು, ಮಹದೇವಪುರ ಬಯಲಾಟ ಕಲೆಯ ಪ್ರಮುಖ ನೆಲೆಗಳು. 1990ರ ದಶಕಗಳ ತನಕ ಬಯಲಾಟ ಕಲೆಗೆ ಹೆಸರುವಾಸಿಯಾಗಿದ್ದ ತುರುವನೂರು ಸುತ್ತಲಿನ 16 ಹಳ್ಳಿಗಳಿಗೂ ಬಯಲಾಟ ಕಲೆಯನ್ನು ಪ್ರಸಾರ ಮಾಡಿದ ನೆಲ. ತುರುವನೂರಿನ ಹಿರಿಯ ಭಾಗವತರಾದ ಸಣ್ಣನರಸಪ್ಪನವರು ನಿರಂತರವಾಗಿ 50 ವರ್ಷಗಳತನಕ 'ಕರಿ ಭಂಟನ ಕಥೆ'ಯನ್ನು ಪ್ರದರ್ಶನ ಮಾಡುತ್ತಾ ಬಂದರು. ಇದರ ಜೊತೆಗೆ ವಿರಾಟ ಪರ್ವ, ದುಶ್ಯಾಸನ ಕಥೆ, ಸುಭದ್ರ ಪರಿಣಯ, ಅಹಿರಾವಣ–ಮಹಿರಾವಣ ಪ್ರಸಂಗಗಳನ್ನು ಕಲಿಸಿ, ಪ್ರದರ್ಶನ ಮಾಡಿದ ಹಿರಿಮೆ ಇವರದು. ಸಿಡುಬು ರೋಗಕ್ಕೆ ತುತ್ತಾಗಿ ತನ್ನ ಎರಡು ಕಣ್ಣುಗಳನ್ನು ಕಳೆದುಕೊಂಡರೂ, ಬಾಲ್ಯದಲ್ಲಿ ಬಯಲಾಟದ ಪಾತ್ರಗಳಲ್ಲಿ ಅಭಿನಯ ನೀಡುತ್ತಾ, ಅದೇ ಮಾದರಿಯಲ್ಲಿ ಬಯಲಾಟದ ಹಿಮ್ಮೇಳ ಭಾಗವಂತಿಕೆಯಲ್ಲಿಯೂ ತೊಡಗಿಸಿಕೊಂಡಿದ್ದರು. ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ 1992ರಲ್ಲಿ ಗೌರವ ಕಲಾವಿದ ಪ್ರಶಸ್ತಿ ನೀಡಿ ಪುರಸ್ಕರಿಸಿದೆ. ಇದೇ ಮಾದರಿಯಲ್ಲಿ ಶಹನಾಯಿ ವಾದಕರಾಗಿ, ಬಯಲಾಟ ಕಲಾವಿದ ಭಾಗವತರಾಗಿ, ಗುರುತಿಸಿಕೊಂಡಿದ್ದ ಚಳ್ಳಕೆರೆ ತಾಲ್ಲೂಕು ಮುತ್ಸಂದ್ರದ ಚನ್ನಬಸಪ್ಪ ಪ್ರತಿಭಾವಂತ ಬಯಲಾಟದ ಕಲಾವಿದ, ಭಾಗವತ. ಇವರಿಗೂ 1989ನೇ ಸಾಲಿನ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಪ್ರಶಸ್ತಿ ದೊರಕಿದೆ. ಇವರು ತೆಲುಗು ನೆಲವಾದ ಕಲ್ಯಾಣದುರ್ಗ, ರಾಂಪುರ, ಬಳ್ಳಾರಿ, ಅನಂತಪುರ, ಇಲ್ಲೆಲ್ಲ ಬಯಲಾಟ ಕಲಿಸಿದವರು. ಕೆಳಕೋಟೆ ಭೋವಿ ತಮ್ಮಣ್ಣನವರು ಚಿತ್ರದುರ್ಗ, ಹಿರಿಯೂರು, ಚೆನ್ನಗಿರಿ, ಸಿರಿಗೆರೆ, ಈ ಭಾಗದಲ್ಲಿ ಗಿರಿಜಾ ಕಲ್ಯಾಣ, ದಕ್ಷಯಾಗ, ಕರಿಬಂಟ, ಲವಕುಶರ ಕಾಳಗ ಮೊದಲಾದ ಪ್ರಸಂಗಗಳನ್ನು ನಿರಂತರವಾಗಿ ಪ್ರದರ್ಶಿಸುತ್ತಾ ಬಂದ ವೃತ್ತಿ ಭಾಗವತರಾಗಿದ್ದವರು. ಇವರಿಗೆ ಇದೇ ಸ್ಥಳದ ಮೂಡಲಪ್ಪ ಎಂಬುವವರು ಬಯಲಾಟ ಕಲಿಸಿದ ಗುರುಗಳು. ಇವರು ಗಯ ಚರಿತ್ರೆ. ಕರಿಬಂಟ ಪ್ರಸಂಗಗಳನ್ನು ಮಾಳಪ್ಪನಹಳ್ಳಿಯಲ್ಲಿ ನಿರಂತರವಾಗಿ ಬೈಲಾಟ ಕಲಿಸಿ, ಪ್ರದರ್ಶಿಸಿದ, ಹಿರಿಯರು. ದೇವಿ ಮಹಾತ್ಮೆ ಮತ್ತು ಶಿವ ಜಲಂಧರ ಪ್ರಸಂಗ ಇವರಿಗೆ ಹೆಚ್ಚು ಹೆಸರು ತಂದುಕೊಟ್ಟ ಪ್ರಸಂಗಗಳು.

ಮೊಳಕಾಲ್ಮೂರು ತಾಲ್ಲೂಕು ಕೇಂದ್ರವು ಸೇರಿದಂತೆ ಈ ಪ್ರದೇಶ ಬುಡಕಟ್ಟು ಸಂಸ್ಕೃತಿಯ ನೆಲ. ಇಲ್ಲಿ ಜನಪದ ನಾಯಕರನ್ನು ಕುರಿತ ಕಥನಗಳಂತೆ ಬಯಲಾಟವೂ ವಿಶೇಷವಾಗಿದೆ. ಹಾಗೆಯೇ ಬಯಲಾಟದ ಭಾಗವಂತಿಕೆಯ ಪರಂಪರೆಯು ವಿಸ್ತಾರವಾಗಿದೆ. ಎರೇಹಳ್ಳಿಯ ಭಾಗವತ ದೊಡ್ಡಬೊಮ್ಮಣ್ಣ, ಭಾಗವತ ಡಿ.ಬಿ. ಅಜ್ಜಿಮುನಿ ಮಾಸ್ತರು, ಕೋನ ಸಾಗರದ ದಾಸಯ್ಯ ಭಾಗವತ, ನಂತರ ಇದರ

ಸಮರ್ಥ ಮುಂದುವರಿಕೆಯಾಗಿ, ಭಾಗವತ ಮಾರನಾಯಕ, ಬಯಲಾಟ ಕಲೆಯನ್ನು ಹೆಚ್ಚು ವಿಸ್ತಾರಗೊಳಿಸಿದ ಹಿರಿಯರು. ದಾಸರಯ್ಯನವರು, ಅವರ ಮಗ ಪೆನ್ನಪ್ಪನವರು, ಸುಮಾರು 50 ವರ್ಷಗಳ ಕಾಲ ನಿರಂತರವಾಗಿ ಬಯಲಾಟದ ಭಾಗವತರಾಗಿ ಕೆಲಸ ಮಾಡಿದ್ದಾರೆ. 1986ರಲ್ಲಿ ಇವರು ಮೈಸೂರಿನ ದಸರಾ ಉತ್ಸವದಲ್ಲಿ ಪ್ರದರ್ಶಿಸಿದ್ದ ಲವಕುಶರ ಕಾಳಗ ವಿಶೇಷ ಮೆಚ್ಚುಗೆ ಪಡೆದಿದೆ. ಇವರಿಗೆ 1996ರಲ್ಲಿ ಕರ್ನಾಟಕ ಜನಪದ ಮತ್ತು ಯಕ್ಷಗಾನ ಅಕಾಡೆಮಿ ಪ್ರಶಸ್ತಿಯು ದೊರಕಿರುವುದು ಈ ಭಾಗದ ಬಯಲಾಟದ ಶ್ರೀಮಂತಿಕೆಯನ್ನು ತೋರುತ್ತದೆ. ಬೆಂಗಳೂರು, ಭದ್ರಾವತಿ, ಮೈಸೂರು ಆಕಾಶವಾಣಿಗಳ ಮೂಲಕ ಬೈಲಾಟವನ್ನು ಪ್ರಸಾರ ಮಾಡಿದ ಹಿರಿಮೆಯೂ ಕೋನಸಾಗರದ ಪೊನ್ನಪ್ಪ, ಇವರ ತಂದೆ ಭಾಗವತ ದಾಸರಯ್ಯನವರಿಗೆ ಸಲ್ಲುತ್ತದೆ. ಮೊಳಕಾಲ್ಮೂರು ಪರಿಸರದಲ್ಲಿ ಇಂದಿಗೂ ಬೈಲಾಟ ಕಲೆಯನ್ನು ಹೆಚ್ಚು ಸಶಕ್ತವಾಗಿ ಹಿಡಿದಿಟ್ಟಿರುವ ಭಾಗವತ ಎರೆಹಳ್ಳಿ ಮಾರನಾಯಕ, ಬಯಲಾಟದ ಹಲವು ಪ್ರಸಂಗಗಳನ್ನು; ಗ್ರಾಮಾಂತರ ಭಾಗಗಳಲ್ಲಿ ವಿಸ್ತರಿಸಿದ ಹಿರಿಮೆಗೆ ಪಾತ್ರರಾಗಿದ್ದಾರೆ. ಇವರಿಗೆ ವಿಶೇಷ ಖ್ಯಾತಿ ತಂದುಕೊಟ್ಟ ಪ್ರಸಂಗ 'ಲುಂಕಿ ಮಲೆ ಸಿದ್ದೇಶ್ವರ ಮಹಾತ್ಮೆ' ಬಯಲಾಟ. ಇದೊಂದು ಸ್ಥಳೀಯ ಸಾಂಸ್ಕೃತಿಕ ನಾಯಕನನ್ನು ಪುರಾಣದೊಂದಿಗೆ ಮುಖಾಮುಖಿ ಮಾಡಿರುವ ಜಾನಪದ ಕಥನ. ಐತಿಹ್ಯ, ಪುರಾಣ, ವರ್ತಮಾನಗಳನ್ನು ಸಮಾನವಾಗಿ ಬೆಸೆದಿರುವ, ಚಾರಿತ್ರಿಕ ವಸ್ತುವನ್ನಾಗಿಸಿದ ಈ ಕಥೆಯಲ್ಲಿ ವಚನ ಚಳುವಳಿಯ ಹರಳಯ್ಯನ ಭಕ್ತಿಯ ಅನನ್ಯತೆಯು ವಿಶೇಷವಾಗಿ ಪ್ರಕಟವಾಗುತ್ತದೆ. ಇಂತಹ ಚಾರಿತ್ರಿಕ ಕಥನಕ್ಕೆ ಯಕ್ಷಗಾನ ರೂಪ ನೀಡಿ ಪಠ್ಯವನ್ನಾಗಿಸಿದವರು ಭಾಗವತ ಡಿ.ಬಿ. ಅಜ್ಜಿಮುನಿ ಮಾಸ್ಟರು. ಇದರಲ್ಲಿ ಭಾಮಿನಿ, ಕಂದ, ಜಂಪೆ, ದರುವು, ವಿವಿಧ ರಾಗ ಮತ್ತು ತಾಳಗಳಲ್ಲಿ ಆಕರ್ಷಕವಾಗಿ ಮೂಡಿಬಂದಿದೆ. ಈ ಬಗೆಯ ಪುರಾಣ ಸ್ವರೂಪದ ಚಾರಿತ್ರಿಕ ಕಥನವನ್ನು ತಮ್ಮ ವಿಶೇಷ ಭಾಗವಂತಿಕೆ, ಹಾಡು, ನೆಲದ ಕಂದ. ಸಂಭಾಷಣೆ ಹಾಗೂ ಮೋಹಕ ನೃತ್ಯ ಭಂಗಿಗಳಿಂದ ಹೆಚ್ಚು ವಿಸ್ತರಿಸಿದ, ಜನಮಾನಸ ತಟ್ಟಿದ ಅಪೂರ್ವತೆ ಎರೇಹಳ್ಳಿ ಮಾರನಾಯಕರಿಗೆ ಸಲ್ಲುತ್ತದೆ.

ಕರ್ನಾಟಕ ಆಂಧ್ರ ಈ ಗಡಿನೆಲದಲ್ಲಿ ಸಾಂಸ್ಕೃತಿಕ ಬೆಸುಗೆಯಾಗಿ ಮುಂಚೂಣಿ–ಯಲ್ಲಿರುವ ಬಯಲಾಟ 'ಕರಿ ಭಂಟ'ನ ಪ್ರಸಂಗ. ಚಳ್ಳಕೆರೆ ಸಮೀಪದ ಓಬಯ್ಯನ ಹಟ್ಟಿಯ, ಭಾಗವತ ರಘು ಪಾಲಯ್ಯ, ಈ ಭಾಗದ ಒಳ್ಳೆಯ ಕಲಾವಿದರು. ಚಳ್ಳಕೆರೆಯನ್ನು ಕೇಂದ್ರವಾಗಿರಿಸಿಕೊಂಡು ಆ ಸುತ್ತಲಿನ ಗೌರಿಪುರ, ದೊಡ್ಡ ಉಳ್ಳಾರ್ತಿ, ಚೆನ್ನಬಸವನ ಹಟ್ಟಿ, ಓಬಯ್ಯನಹಳ್ಳಿ, ತುರುವನೂರು, ಮುಂತಾದ ಕಡೆಗಳಲ್ಲಿ ಬಯಲಾಟ ಪ್ರಸಂಗಗಳಾದ ಕರಿಬಂಟ, ಶಶಿರೇಖೆ ಪರಿಣಯ, ರತಿ ಕಲ್ಯಾಣ,

ಕರ್ಣಾರ್ಜುನರ ಕಾಳಗ, ಶಿವ ಜಲಂಧರ, ಮೊದಲಾದ ಬಯಲಾಟಗಳನ್ನು ಯಶಸ್ವಿಯಾಗಿ ಕಲಿಸಿ, ಪ್ರದರ್ಶಿಸುತ್ತಿರುವ ಭಾಗವತರು. ಇವರಿಗೆ ಗುರುಗಳಾಗಿದ್ದ ಓಬಯ್ಯನಹಳ್ಳಿ ಬೋಪಯ್ಯನವರು ಈ ಭಾಗದಲ್ಲಿ ಬಯಲಾಟ ಕಲೆಯನ್ನು ಪ್ರತಿಭಾವಂತಿಕೆಯಿಂದ ಕಲಿಸುತ್ತಿದ್ದವರು. ಇವರು ರೂಪಿಸಿದ ಹಿರಿಯ ಕಲಾವಿದರಲ್ಲಿ ಕರಿಬಂಟನಾಗಿ ಓಬಯ್ಯನ ಹಟ್ಟಿಯ ರಾಜಣ್ಣ, ಸಿದ್ದಾಪುರದ ಶ್ರೀನಿವಾಸ, ಬೋರಯ್ಯ, ಚಳ್ಳಕೆರೆಯ ಗಾಡಿ ಓಬಣ್ಣ– ಈ ಭಾಗದ ಖ್ಯಾತಿವಂತ ಕಲಾವಿದರಾಗಿ ರೂಪಿತರಾಗಿದ್ದಾರೆ. ಪುಂಡರೀಕ್ಷ ಪಾತ್ರದ ಬೋರಯ್ಯ, ಪಾಲಯ್ಯ, ಕಾಲುವೆಹಳ್ಳಿ ಭೂತಯ್ಯ ಮುಖ್ಯರಾದವರು. ಇವರಲ್ಲಿ ಕಾಲುವೆಹಳ್ಳಿ ಭೂತಯ್ಯನವರಿಗೆ 2022ನೇ ಸಾಲಿನ ಕರ್ನಾಟಕ ಬಯಲಾಟ ಅಕಾಡೆಮಿಯ ಕಲಾವಿದ ಪ್ರಶಸ್ತಿಯೂ ಲಭಿಸಿದ್ದು, ತಮ್ಮ ಎಂಬತ್ತರ ಈ ಇಳಿವಯಸ್ಸಿನಲ್ಲಿಯೂ, ಕರಿ ಬಂಟ ಬಯಲಾಟದ ಪುಂಡರೀಕಾಕ್ಷಿ ಪಾತ್ರದ ವಿಶೇಷ ಅಭಿನಯ ಇವರಿಗೆ ಗೌರವ ತಂದು ಕೊಟ್ಟಿದೆ.

ತುಮಕೂರು ಹಳ್ಳಿಯ ಗುಗ್ ಮಲ್ಲಯ್ಯ; ದಾವಣಗೆರೆ ಜಿಲ್ಲೆಯ ಡಿ.ಬಿ. ಶಿವಣ್ಣ, ಸಿದ್ದಮ್ಮನಹಳ್ಳಿ, ತೋರಣಗಟ್ಟಿಯ ನಿಂಗಪ್ಪ, ಈ ಭಾಗದ ಪ್ರಮುಖ ಬಯಲಾಟಗಳ ಭಾಗವತರಾಗಿದ್ದು, ತೋರಣಗಟ್ಟಿ ನಿಂಗಪ್ಪನವರು ಲಕ್ಷ್ಮೀ ಸ್ವಯಂವರ, ವಿರಾಟ ಪರ್ವ, ದುಶ್ಯಾಸನ ವಧೆ, ಶಶಿರೇಖೆ ಪರಿಣಯ, ಭಕ್ತ ಮಾರ್ಕಂಡೇಯ, ಲವಕುಶ, ಕರಿಬಂಟ ಮೊದಲಾದ ಬಯಲಾಟ ಪ್ರಸಂಗಗಳನ್ನು ವ್ಯಾಪಕವಾಗಿ ಕಲಿಸುತ್ತಿರುವ ಕ್ರಿಯಾಶೀಲ ಭಾಗವತರೆಂಬ ಹಿರಿಮೆಗೂ ಪಾತ್ರರಾಗಿದ್ದಾರೆ. ಕರ್ನಾಟಕ ಬಯಲಾಟ ಅಕಾಡೆಮಿಯ ಸದಸ್ಯರೂ ಆಗಿದ್ದು; ಬಯಲಾಟ ಸಂಘಟನೆಯಲ್ಲಿ ಮತ್ತೊಬ್ಬರು ಹಿರಿಯ ಸದಸ್ಯರಾದ ಮೊಳಕಾಲ್ಮೂರು ತಾಲ್ಲೂಕಿನ ಎರೇಹಳ್ಳಿಯ ಭಾಗವತ ಮಾರನಾಯಕರ ಜೊತೆಗೂಡಿ, ಚಳ್ಳಕೆರೆ, ಹಿರಿಯೂರು, ಮೊಳಕಾಲ್ಮೂರು, ಚಿತ್ರದುರ್ಗ, ಹರಿಹರ, ದಾವಣಗೆರೆ–ಈ ಭಾಗಗಳಲ್ಲಿ ವ್ಯಾಪಕವಾಗಿ ಬಯಲಾಟದ ಸಂಘಟನೆಯಲ್ಲಿ ತೊಡಗಿಸಿಕೊಂಡಿದ್ದಾರೆ. ಬಯಲಾಟ ಕಲಾವಿದರಾಗಿ ದಾವಣಗೆರೆಯ ದೊಣ್ಣೆಹಳ್ಳಿ ಎಸ್. ಚಂದ್ರಪ್ಪ, ಕಣಿವೆಹಳ್ಳಿಯ ಜಿ. ರಾಮಪ್ರಭು ಇವರುಗಳು ಈ ಪರಿಸರದಲ್ಲಿ ಬಯಲಾಟ ಕಲೆಯನ್ನು ಉಳಿಸಿ ಬೆಳೆಸುವಲ್ಲಿ ನಿಷ್ಠಾವಂತಿಕೆಯಿಂದ ತೊಡಗಿಸಿಕೊಂಡಿರುವ ಕಲಾವಿದರು.

ಹಿರಿಯೂರು ಪರಿಸರದ ಗೌಡನಹಳ್ಳಿ ಒಂದು ಬುಡಕಟ್ಟು ಗ್ರಾಮ. ಇಲ್ಲಿನ ವಾಲ್ಮೀಕಿ ಬಳಗ, ಬಸವೇಶ್ವರ ಕಲಾ ಸಂಘ ಕೂಡಿಕೊಂಡು, ನಿರಂತರವಾಗಿ 60 ವರ್ಷಗಳಿಂದಲೂ ಬಯಲಾಟ ಕಲೆಯನ್ನು ಬೆಳೆಸುತ್ತಾ, ಪ್ರದರ್ಶಿಸುತ್ತಾ, ಬರುತ್ತಿದ್ದಾರೆ. ಇಲ್ಲಿನ ಭಾಗವತರಾದ ದೊಡ್ಡ ಕರಿಯಪ್ಪ, ಲಕ್ಕಣ್ಣ, ರಾಮಚಂದ್ರಪ್ಪ,

ISSN : 3048-7137

ಇವರು ಹಸ್ತಪ್ರತಿ ನೋಡದೆ, ಕರಿಬಂಟ, ರಾಮಾಂಜನೇಯ ಯುದ್ಧ, ಲವಕುಶ, ವಿರಾಟ ಪರ್ವ– ಈ ಪ್ರಸಂಗಗಳನ್ನು ವರ್ಷವಾರು, ಶ್ರಾವಣ ಮಾಸದ ಕೊನೆಯ ಶನಿವಾರ ಅಥವಾ ಸೋಮವಾರದಂದು ತಪ್ಪದೇ ಒಂದು ಪ್ರಸಂಗವನ್ನು ಪ್ರದರ್ಶಿಸುತ್ತಾ ಬರುತ್ತಿದ್ದಾರೆ. ಹೊಳಲ್ಕೆರೆ ತಾಲ್ಲೂಕು ತಾಳಿಕಟ್ಟೆಯೂ ಒಂದು ಕಲಾಗ್ರಾಮ. ಪಾರಂಪರಿಕವಾಗಿ ಬಯಲಾಟ ಕಲೆಯನ್ನು ಪ್ರದರ್ಶಿಸುತ್ತಾ ಬರುತ್ತಿದ್ದಾರೆ. ಭಾಗವತ, ಶಿಕ್ಷಕ ಗುರುವಯ್ಯ ಒಡೆಯರ್ ಬಯಲಾಟದ ವಾದ್ಯಗಳ ತಯಾರಿಕರೂ ಆಗಿದ್ದು, ಶನಿ ಮಹಾತ್ಮೆ, ಗಯ ಚರಿತ್ರೆ, ವಿರಾಟ ಪರ್ವ, ವಿಕ್ರಮಾಂಕನ ಕಥೆ– ಈ ಪ್ರಸಂಗಗಳನ್ನು ನಿರಂತರವಾಗಿ ಕಲಿಸಿ, ಪ್ರದರ್ಶಿಸುತ್ತಿದ್ದ ಹಿರಿಯ ಭಾಗವತರು. ಇಂದಿಗೂ ಶ್ರೀ ರಾಮನವಮಿ ಮತ್ತು ಶ್ರಾವಣ ಸೋಮವಾರಗಳಂದು ದೇವಿ ಮಹಾತ್ಮೆ ಬಯಲಾಟ ಪ್ರದರ್ಶಿಸುವುದು ಈ ಗ್ರಾಮದ ವಿಶೇಷವಾಗಿದೆ. ಹೊಳಲ್ಕೆರೆಯ ರುದ್ರಪ್ಪ, ದುರ್ಗದ ಕೆಳಕೋಟೆಯ ಭಾಗವತ ತಮ್ಮಣ್ಣ, ಗುರುವಯ್ಯ ಒಡೆಯರ್ ಈ ಮೂವರೂ ಭಾಗವತರು ಕೂಡಿಕೊಂಡು ಹೊಳಲ್ಕೆರೆ, ಶಿವನಿ, ಅಜ್ಜಂಪುರ, ರಾಮಗಿರಿ, ತಾಳಿಕಟ್ಟೆ, ಇಲ್ಲೆಲ್ಲ ಬಯಲಾಟ ಪ್ರದರ್ಶಿಸುತ್ತಿದ್ದ ಹಿರಿಯರು. ಇಂದು ಹಣ್ಣಾಗಿದ್ದಾರೆ. ಇನ್ನು ಗೂಳ್ಯ, ಹರ್ತಿಕೋಟೆ, ಯರಬಳ್ಳಿ, ಹೊಸಹಳ್ಳಿ, ಯಾದಲಕಟ್ಟೆ, ಹರಿಯಬ್ಬೆ, ದೇವಿ ಹೊಸಳ್ಳಿ ಈ ಭಾಗಗಳಲ್ಲಿಯೂ ಬಯಲಾಟ ಕಲೆ ನಿಂತಿಲ್ಲ. ಕಲಮರಹಳ್ಳಿ, ಹೊಸಹಳ್ಳಿಯ ಭಾಗವತ ಈರಣ್ಣ, ಕೆಂಚಲಿಂಗಪ್ಪ, ಯಾದಲಕಟ್ಟೆಯ ಗಾದೀರಯ್ಯ, ಹರೆಯಬ್ಬೆ ಸಣ್ಣ ತಿಮ್ಮಯ್ಯ– ಈ ಭಾಗವತರು, ಈ ಭಾಗದಲ್ಲಿ ಶತಕಂಠ ರಾವಣ, ಇಂದ್ರಜಿತ್ ಕಾಳಗ, ಅಭಿಮನ್ಯು ಕಾಳಗ, ವಿರಾಟ ಪರ್ವ, ಪಾಂಡು ವಿಜಯ, ಕುಶಲವರ ಕಥೆ, ಮೊದಲಾದ ಬಯಲಾಟ ಪ್ರಸಂಗಗಳನ್ನು ಸಮರ್ಥವಾಗಿಯೇ ಪ್ರಯೋಗಿಸುತ್ತಿದ್ದ ಹಿರಿಯರು. ಇಂದಿಗೂ ಹೊಸಹಳ್ಳಿಯ ಈರಣ್ಣ, ತೋಟದ ತಿಮ್ಮಯ್ಯನವರ ಗಿರಿ ತಿಮ್ಮಯ್ಯ ಹರಿಯಬ್ಬೆ, ಇವರುಗಳು ರಕ್ತಬೀಜಾಸುರ ಸಂಹಾರ, ದುಶ್ಯಾಸನವಧೆ, ಇಂದ್ರಜಿತ್ ಕಾಳಗ ಪ್ರಸಂಗಗಳನ್ನು ಹಿರಿಯೂರು ತಾಲ್ಲೂಕು ಹರಿಯಬ್ಬೆ ಪರಿಸರದಲ್ಲಿ ಮುಂದುವರೆಸಿದ್ದಾರೆ.

ಮಧ್ಯ ಕರ್ನಾಟಕದ ಕೇಂದ್ರ ಸ್ಥಳವಾದ ದಾವಣಗೆರೆ ಪರಿಸರವು ಬಯಲಾಟ ಕಲೆಗೆ ವಿಶೇಷ ಒತ್ತು ನೀಡಿದ ಪ್ರದೇಶ. ಅರಸೀಕೆರೆಯ ಹನುಮಂತಪ್ಪ, ಕೆ.ಜಿ. ಷಣ್ಮುಖಪ್ಪ, ಚೆನ್ನಗಿರಿ ತಾಲ್ಲೂಕಿನ ಮೋದಿಕೆರೆಯ ಭಾಗವತ ಈಶ್ವರಪ್ಪ, ಕೊಂಡಜ್ಜಿ ಅಜ್ಜಣ್ಣ ಬಡಿಗೇರ, ಮಹೇಶ್ವರಪ್ಪ, ಚನ್ನಗಿರಿಯಪ್ಪ, ಟಿ. ಗಂಗಾಧರಯ್ಯ. ಮಜಿನೂರು ಸಂಪಣ್ಣ. ರಾಮಚಂದ್ರಪ್ಪ. ಈ ಮೊದಲಾದ ಬಯಲಾಟ ಭಾಗವತರು, ಹರಿಹರ, ಕೊಂಡಜ್ಜಿ, ತೋರಣಗಟ್ಟೆ, ಈ ಮೊದಲಾದ ಗ್ರಾಮಾಂತರ ಪ್ರದೇಶಗಳಲ್ಲಿ ಬಯಲಾಟದ ಕಂಪು ಮೂಡಿಸಿದ ಹಿರಿಯರು. ಇದೇ ಭಾಗದಲ್ಲಿ ಬಯಲಾಟದ ಪ್ರೇರಕರಾಗಿದ್ದ

ಮುದೇನೂರು ಸಂಗಣ್ಣ, ಹುಲಿವಾಗಲು ವೀರಣ್ಣ, ಅವರ ಶಿಷ್ಯ ದೇವೇಂದ್ರಪ್ಪ ಇವರ ಪ್ರೇರಣೆ, ಸಹಕಾರವೂ ಉಲ್ಲೇಖನೀಯ. ಪ್ರಸ್ತುತದಲ್ಲಿಯೂ, ಈ ಭಾಗದ ಬಯಲಾಟ ಕಲೆಗೆ ಜೀವ ತುಂಬುತ್ತಿರುವ ತೋರಣ ಪಟ್ಟಿಯ ನಿಂಗಪ್ಪ, ದೊಣ್ಣೆನಹಳ್ಳಿಯ ಎಸ್. ಚಂದ್ರಪ್ಪ, ಕಣಿವೆಹಳ್ಳಿ ಜಿ. ರಾಮಪ್ರಭು, ಸಿದ್ದಮ್ಮನಹಳ್ಳಿಯ ಡಿ.ಬಿ. ಶಿವಣ್ಣ; ಈ ಮೊದಲಾದ ಕಲಾವಿದರು, ಬಯಲಾಟ ಕಲೆಯ ಸಂಘಟನೆ, ಪ್ರದರ್ಶನ, ಅಭಿನಯ, ಭಾಗವಂತಿಕೆ ಈ ಪ್ರಕಾರಗಳಲ್ಲಿ ತೊಡಗಿಸಿಕೊಂಡಿರುವ ಬಯಲಾಟದ ಸಂಪನ್ಮೂಲರು.

ಹೊಳಲ್ಕೆರೆಯ ನಾರಶೆಟ್ಟಿಹಳ್ಳಿ ಬಿ.ಇ. ತಿಪ್ಪೇಸ್ವಾಮಿ, ಈಶ್ವರಪ್ಪ, ಚನ್ನಗಿರಿ ಹಾಲಪ್ಪ, ಶ್ಯಾಮನೂರಿನ ರೇವಣಸಿದ್ದಪ್ಪ, ಶ್ಯಾಮನೂರಿನ ಸಿದ್ದಪ್ಪ, ಹೊಳಲ್ಕೆರೆ ರುದ್ರಣ್ಣ, ಚಿತ್ರದುರ್ಗದ ಕೆಳಕೋಟೆಯ ಬಾವಿ ತಮ್ಮಣ್ಣ, ಬಿ.ಜಿ.ಕೆರೆಯ ಘನಿಸಾಬ್, ಹಸನ್ ಸಾಬ್, ಖಾಜಿ ಸಾಬ್, ಹರಿಹಬ್ಬೆ ಪಾಳ್ಯದ ದೇವಿ ಗೋವಿಂದಪ್ಪ, ಇವರು ಬಯಲಾಟಕ್ಕೆ ನೀಡಿದ ಕೊಡುಗೆ ಅನನ್ಯ, ನಿತ್ಯ ಸ್ಮರಣೀಯರು. ಚಳ್ಳಕೆರೆ, ಬಿ.ಜಿ.ಕೆರೆ, ಕೊಂಡಜ್ಜಿ, ತಾಳಿಕಟ್ಟೆ, ಹರಿಯಬ್ಬೆ, ಚೆನ್ನಗಿರಿ, ಮೊಳಕಾಲ್ಮೂರು, ಇಲ್ಲಿಂದ ಬಯಲಾಟಕ್ಕೆಂದೇ ಪ್ರತ್ಯೇಕ ರಂಗ ಸೀನರಿ ಒದಗಿಸುತ್ತಿದ್ದ ಪ್ರಮುಖ ನೆಲೆಗಳು. ಇಂದಿಗೂ ಚಳ್ಳಕೆರೆ ಟೌನ್, ಕಾಟಪ್ಪನ ಹಟ್ಟಿ ಬಡಾವಣೆಯ ಕಾಟಲಿಂಗೇಶ್ವರ ಬಯಲಾಟ ಸಂಸ್ಥೆ, ಬಯಲಾಟಕ್ಕೆ ಸಂಬಂಧಿಸಿದ ವಿಶೇಷ ರಂಗ ಸೀನರಿಯನ್ನು ಪೂರೈಸುತ್ತಾ, ಬಯಲಾಟ ಬೆಳವಣಿಗೆಗೆ ಸಹಾಯ ಮಾಡುತ್ತಿದೆ. ಸಿದ್ದನಹಳ್ಳಿ ರಂಗನಾಥ್ ಅವರ ಮದ್ದಳೆ ಕಲೆ, ಹಿರೇಮಲ್ಲನ ಹೊಳೆಯ ಮುಖವೀಣೆ ಕಲಾವಿದರಾದ ಎಚ್.ಆರ್.ರೇವಣ್ಣನವರ ಮುಖವೀಣೆ ಪರಿಣತಿ ಉಲ್ಲೇಖನೀಯವಾದುದು.

ಮಂಡ್ಯ ಜಿಲ್ಲೆಯಲ್ಲಿ ನಾಗಮಂಗಲ ಬಯಲಾಟ ಕಲೆಗೆ ಹೆಚ್ಚು ಪ್ರಸಿದ್ಧ ಪಡೆದ ನೆಲೆ. ಬೆಳ್ಳೂರು, ನೆಲ್ಲಿಗೆರೆಯ ತಿಮ್ಮಪ್ಪಾಚಾರ್, ಬೆಳ್ಳೂರು ಪುಟ್ಟಶಾಮಾಚಾರ್, ಪ್ರಭುದ್ಧ ಬಯಲಾಟದ ಭಾಗವತ ವಿದ್ವಾಂಸರು. 'ಯಕ್ಷಗಾನ' ಎಂಬ ಹೆಸರಿನಲ್ಲಿಯೇ ಕ್ರಮಬದ್ಧವಾಗಿ ಬೈಲಾಟದ ಕರಿಭಂಟ, ಲವಕುಶರ ಕಾಳಗ, ದುಶ್ಯಾಸನ ವಧೆ, ಶನಿಪ್ರಭಾವ, ಚೋರ ಕಥೆ, ವಿರಾಟ ಪರ್ವ– ಈ ಪ್ರಸಂಗಗಳನ್ನು ನಾಗಮಂಗಲದ ಪರಿಸರದಲ್ಲಿ ವ್ಯಾಪಕವಾಗಿ ಪ್ರಚುರಪಡಿಸಿದ ಶ್ರೇಷ್ಠ ಬಯಲಾಟದ ಭಾಗವತರು, ಪ್ರಸಂಗ ಕರ್ತೃ, ವೇಷ ಭೂಷಣ ತಯಾರಕರು. ಆಗಮ ಶಾಸ್ತ್ರದಲ್ಲಿ ವಿಶೇಷ ಪರಿಣತಿ ಹೊಂದಿದ್ದ ಶಾಸ್ತ್ರ ಪಂಡಿತ. ಪುರಾಣ ಕಾವ್ಯಗಳ ಓದು, ವ್ಯಾಖ್ಯಾನ ಇವರ ವಿಶೇಷ. ಈ ಆಧಾರದಿಂದಲೇ ಹಲವಾರು ಬಯಲಾಟ ಪ್ರಸಂಗಗಳ ಹಸ್ತಪ್ರತಿ ರಚಿಸಿದ್ದಾರೆ. ಕರಿಭಂಟ–ಬಯಲಾಟವನ್ನು 'ಬಯಲಾಟ' ಎಂಬ ಹೆಸರಿನಲ್ಲಿಯೇ ಬೆಳ್ಳೂರಿನ ಕಲಾವಿದರಿಂದ ಅಭಿನಯಿಸಿ, ಧ್ವನಿಸುರುಳಿ ತಯಾರಿಸಿದ, ಕರ್ನಾಟಕ ಜಾನಪದ

ISSN : 3048-7137

ಪರಿಷತ್ತಿಗೆ, ವಿಡಿಯೋ ದಾಖಲಿಸಿದ ಮೊದಲ ಶ್ರೇಯಸ್ಸು ಹೆಚ್.ಎಲ್. ನಾಗೇಗೌಡ ಮತ್ತು ಭಾಗವತರಾಗಿ ಬೆಳ್ಳೂರು ಪುಟ್ಟ ಶಾಮಾಚಾರ್ ಅವರಿಗೆ ಸಲ್ಲುತ್ತದೆ. ವರ್ತಮಾನದಲ್ಲಿಯೂ ಮೂರ್ತಾಚಾರ್ ಎಂಬುವವರು ಬಯಲಾಟ ಭಾಗವತರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ.

ನಾಗಮಂಗಲ ತಾಲ್ಲೂಕಿನ ಅಂದೇನಹಳ್ಳಿ ಬಯಲಾಟ ಕಲೆಗೆ ಪ್ರಸಿದ್ಧವಾಗಿದ್ದ ಗ್ರಾಮ. ಇಂದು ಆತನ ಇಲ್ಲವಾಗಿದೆ. ಅಂದೇನಹಳ್ಳಿ ಕೆಂಪಣ್ಣಗೌಡ ಎಂಬುವವರು, ಕರಿರಾಯ, ಶನಿ ಮಹಾತ್ಮೆ, ನಳ ಚರಿತ್ರೆ, ಈ ಕಾವ್ಯಗಳನ್ನು ಭಾಮಿನಿಯಲ್ಲಿ ರಚಿಸಿದ್ದಾನೆ. ಮುಂದೆ ಇದೇ ಹಸ್ತಪ್ರತಿ 'ಕರಿಭಂಟನ ಕಾಳಗ' ಬಯಲಾಟಕ್ಕೆ ರೂಪ ಪಡೆಯಿತು ಎಂದು ಜಿಶಂಪ ಮೊದಲಾದವರು ಉಲ್ಲೇಖಿಸಿದ್ದಾರೆ.

ಬೆಂಗಳೂರು ನಗರ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆಗಳಲ್ಲಿ ಬಯಲಾಟ ವ್ಯಾಪಕವಾಗಿದ್ದು, ಇಂದಿಗೂ ದೊಡ್ಡಬಳ್ಳಾಪುರ, ಹೊಸಕೋಟೆ, ನೆಲಮಂಗಲ ಇಲ್ಲೆಲ್ಲಾ ಬಯಲಾಟ ಪ್ರಸಂಗಗಳು ನಡೆಯುತ್ತಿವೆ. 18ನೇ ಶತಮಾನದ ಆರಂಭದಲ್ಲಿ ದೊಡ್ಡಬಳ್ಳಾಪುರದ ತಿರುವಂಶದ ಜೀಯರ್, ಮುಂದೆ ಇದೇ ವಂಶದ ಎಚ್.ಎಸ್.ಸುಬ್ಬರಾಯಪ್ಪ ಬಯಲಾಟದ ಕರಿಭಂಟ, ಶಿವ ಜಲಂಧರ, ಲವಕುಶ, ವೀರ ಅಭಿಮನ್ಯು– ಮೊದಲಾದ ಹಸ್ತಪ್ರತಿಗಳನ್ನು ರಚಿಸಿದ್ದಾರೆ. ಇಲ್ಲಿನ ದೇವಾಂಗ ಸಂಘದ ಯುವಕರು ಸತತವಾಗಿ ನೂರು ವರ್ಷಗಳಿಂದಲೂ ಪ್ರತಿ ಶಿವರಾತ್ರಿಯಂದು ಬಯಲಾಟದ 'ಕರಿಭಂಟನ ಕಥೆ' ಪ್ರದರ್ಶಿಸುತ್ತಾ ಬರುತ್ತಿದ್ದಾರೆ. ಇದರ ಸಂಚಾಲಕರಾಗಿ ಶ್ರೀಧರ್ ಎಂಬುವವರು, ಬಯಲಾಟ ಕಲೆಯ ಸಮರ್ಥ ಮುಂದುವರಿಕೆಗೆ ಕಟ್ಟಿಬದ್ಧರಾಗಿ ತೊಡಗಿಸಿಕೊಂಡಿದ್ದಾರೆ.

ಬೆಂಗಳೂರು ನಗರದ ಶಿವನಹಳ್ಳಿ, ಅತ್ತಿಕುಪ್ಪೆ, ಇಲ್ಲಿ ಪ್ರತಿ ವರ್ಷ ಶ್ರಾವಣ ಮತ್ತು ಯುಗಾದಿಗೆ ಬಯಲಾಟ ಪ್ರದರ್ಶನ ನಡೆಸುತ್ತಾ ಬರುತ್ತಿದ್ದಾರೆ. ಅತ್ತಿಕುಪ್ಪೆಯ ಭಾಗವತ ಚಂದ್ರಯ್ಯ. ಶಿವನಹಳ್ಳಿಯ ಭಾಗವತ ಕರಿಯಣ್ಣ. ಜೂಗನಹಳ್ಳಿ ಹನುಮಂತಪ್ಪ, ಅಂಚೆಪೇಟೆಯ ನಂಜುಂಡಪ್ಪ, ಇವರುಗಳು ಬೆಂಗಳೂರು ನಗರದ ಬಡಾವಣೆಗಳಲ್ಲಿ, ಬಯಲಾಟದ ಪ್ರಸಂಗಗಳಾದ ರಾಮಾಂಜನೇಯ ಯುದ್ಧ, ಲವಕುಶ, ಇಂದ್ರಜಿತ್ ಕಾಳಗ, ಉಷಾ ಪರಿಣಯ ಚಂದ್ರಹಾಸ, ವಿರಾಟ ಪರ್ವ, ದುಶ್ಯಾಸನ ಕಥೆ, ಲಂಕಾ ದಹನ–ಈ ಪ್ರಸಂಗಗಳನ್ನು ಇಂದಿಗೂ ಪ್ರದರ್ಶನ ನೀಡುತ್ತಿರುವ ಭಾಗವತರು. ಈ ತಂಡದಲ್ಲಿ ಹಿನ್ನೆಲೆ ಭಾಗವತರಾಗಿ ಕಲಾವಿದರಾಗಿ ಜೂಗನಹಳ್ಳಿ ರಾಮು, ಎಂ.ಮಂಜುನಾಥ್, ಮುನಿಬೈರಪ್ಪ, ಯಶಸ್ ಕೃಷ್ಣ, ನಾರಾಯಣಪ್ಪ ಕೆಲಸ ಮಾಡುತ್ತಿರುವ ಬಯಲಾಟದ ಕಲಾವಿದರು.

ಎಲ್.ಶಂಕರಪ್ಪ, ಎಸ್.ಪಿ. ಕೆಂಪ ಮುನಿಯಯ್ಯ, ಕೆ.ಸಿ. ನಾರಾಯಣ, ಇವರುಗಳು ಭಾಗವತರುಗಳಾಗಿ ಬೆಂಗಳೂರು ನಗರ ಹಾಗೂ ಗ್ರಾಮಾಂತರ ಪ್ರದೇಶಗಳಲ್ಲಿ ಗುರುತಿಸಿಕೊಂಡಿದ್ದಾರೆ. ಹೊಸಕೋಟೆಯ ಸೂಲಿಬೆಲೆ, ಮುನಿಯಪ್ಪ ಅರಸನಹಳ್ಳಿ, ಸಿಂಗಪ್ಪ, ದೊಡ್ಡಕುಕ್ಕನಹಳ್ಳಿಯ ಮುನಿಬಸಪ್ಪ, ತ್ಯಾಮಗೊಂಡ್ಲು ಕೋಡಿಹಳ್ಳಿ ಭಾಗವತ ಕರಿಬಸವಯ್ಯ, ಸ್ವಾಂದೇನಹಳ್ಳಿಯ ಭಾಗವತ ನರಸಿಂಹಯ್ಯ, ಕೆಂಪರಾಜು ಬಿಸುವಳ್ಳಿ, ತಿಪ್ಪಸಂದ್ರದ ಭಾಗವತ ಮುದ್ದಪ್ಪ, ಬಾಗಲೂರು ಭಾಗವತ ಚಿಕ್ಕಪ್ಪಯ್ಯ, ಗೀತರಾಮನಹಳ್ಳಿ ಲಿಂಗಪ್ಪ, ಅತ್ತಿಕುಪ್ಪೆ ರಾಯಪ್ಪ–ಇವರುಗಳು ಬೆಂಗಳೂರು ಪರಿಸರದಲ್ಲಿ ದುಶ್ಯಾಸನ ಕಾಳಗ, ದೇವಿ ಮಹಾತ್ಮೆ, ವೀರ ಅಭಿಮನ್ಯು, ವಿರಾಟ ಪರ್ವ, ಲವಕುಶಲರ ಕಾಳಗ, ಕರಿಬಂಟನ ಕಥೆ, ಇಂದ್ರಜಿತ್ ಕಾಳಗ–ಕಲಿಸಿದವರು. ಬೆಳ್ಳಿ ಕಿರೀಟದ ವೆಂಕಟನಾರಾಯಣಪ್ಪ ಎಂಬ ಹಿರಿಯ ಭಾಗವತರು, ಬಯಲಾಟ ಕಲೆಗಾಗಿಯೇ ಬೆಳ್ಳಿ ಕಿರೀಟದ ಗೌರವಕ್ಕೆ ಪಾತ್ರರಾಗಿದ್ದ ಹಿರಿಯರು. ಬೆಂಗಳೂರು ಗ್ರಾಮಾಂತರ ಜಿಲ್ಲೆಯ, ನೆಲಮಂಗಲ ತಾಲ್ಲೂಕಿನ, ಹಸಿರುವಳ್ಳಿ ಗ್ರಾಮದ ಇವರು ಆಂಜನೇಯ ಪಾತ್ರದ ಮೂಲಕ ಬಯಲಾಟಕ್ಕೆ ಶಕ್ತಿ ತುಂಬಿದ ಹಿರಿಯ ಕಲಾವಿದ, ಭಾಗವತ ಹಾಗೂ ಬಯಲಾಟದ ಸಂಪನ್ಮೂಲ ವ್ಯಕ್ತಿಯೂ ಆಗಿದ್ದವರು.

ಬಯಲಾಟದ ಸ್ವರೂಪವನ್ನು ಪಡೆದು, ವೇಷಭೂಷಣ, ಕುಣಿತ, ಹೆಜ್ಜೆ ಹಾಗೂ ವಾದ್ಯ ವಿಶೇಷಗಳಲ್ಲಿ ಬಯಲಾಟಕ್ಕಿಂತ ಭಿನ್ನವಾಗಿರದೆ, ಬಯಲಾಟಕ್ಕೆ ಪರ್ಯಾಯವಾಗಿ ಬಳಸುವ ಪದ 'ಕೇಳಿಕೆ'. ಕೋಲಾರ, ಶಿಡ್ಲಘಟ್ಟ, ಶ್ರೀನಿವಾಸಪುರ, ಗೌರಿಬಿದನೂರು, ಬೆಂಗಳೂರು ಗ್ರಾಮಾಂತರ ಜಿಲ್ಲೆಗೆ ಸೇರಿರುವ ವಿಜಯಪುರ, ಹೊಸಕೋಟೆ, ಆನೇಕಲ್ಲು– ಈ ಭಾಗದಲ್ಲಿ ಕೇಳಿಕೆ ಸಂಪ್ರದಾಯ ಇಂದಿಗೂ ಇದೆ. ವಿಶೇಷವಾಗಿ ಬೆಳಮಾರನಹಳ್ಳಿ, ಸೂಲೂರು, ಹೊರೆಕೆರೆ ಹಾಗೂ ಮುದವತ್ತಿ –ಈ ಮೂರು ಗ್ರಾಮಗಳಲ್ಲಿ ಕೇಳಿಕೆ ಅಥವಾ ಬಯಲಾಟ ಮೇಲಿಂದ ಮೇಲೆ ಪ್ರದರ್ಶನವಾಗುತ್ತಿದೆ. ಈ ಭಾಗದ ಬಯಲಾಟದ ಭಾಗವತರಾಗಿ ಬೆಳಮಾರನಹಳ್ಳಿ ಬಸವರಾಜು, ಸೂಲೂರು ಚಿಕ್ಕ ಗಿರಿಯಪ್ಪ, ಮುದವತ್ತಿಯ ರಾಮಕೃಷ್ಣ ಈ ಭಾಗವತರುಗಳ ಸಂಘಟನೆಯಿಂದಾಗಿ ವಾರ್ಷಿಕ ಕಾರ್ಯಕ್ರಮವಾಗಿ ಬಯಲಾಟ ಪ್ರದರ್ಶನವಿರುತ್ತದೆ. ವಿಸೇಷವಾಗಿ ಈ ಭಾಗದಲ್ಲಿ ಕರಿಭಂಟನ ಕಾಳಗ, ದುಶ್ಯಾಸನ ವಧೆ, ಶ್ರೀ ಕೃಷ್ಣ ಪಾರಿಜಾತ, ಕೀಚಕನ ವಧೆ ಪ್ರಸಂಗಗಳು ನಡೆಯುತ್ತವೆ.

ಬೆಂಗಳೂರು, ಹೊಸಕೋಟೆ, ಆನೇಕಲ್ಲು, ಶಿಡ್ಲಘಟ್ಟ ಈ ಭಾಗದಲ್ಲಿಯೂ ಕೇಳಿಕೆ ಹೆಸರಿನ ಬಯಲಾಟಗಳು ಪ್ರದರ್ಶನ ಕಾಣುತ್ತಿವೆ. ಭಾಗವತರುಗಳಾಗಿ ಹೊಸಕೋಟೆ ತಾಲ್ಲೂಕು ವಾಗಟದ ಮುನಿವೆಂಕಟಪ್ಪ, ಸಮೇತನಹಳ್ಳಿಯ ಮುನಿವೆಂಕಟಪ್ಪ,

ಅರಸನಹಳ್ಳಿಯ ಚಿಕ್ಕಣ್ಣ, ಸಿ.ಲಿಂಗಪ್ಪ ಇವರು, ಭಾಗವತರಾಗಿ, ಸಂಘಟಕರಾಗಿ, ಕಾರ್ಯನಿರ್ವಹಿಸುತ್ತಾ, ಅಭಿಮನ್ಯುವಿನ ಕಾಳಗ, ಲವಕುಶ, ದ್ರೌಪತಿ ವಸ್ತ್ರಾಪಹರಣ, ಈ ಪ್ರಸಂಗಗಳನ್ನು ನಿರ್ದೇಶನ ಮಾಡುತ್ತಿದ್ದಾರೆ. ಬಿ.ಪಿ. ರಾಜಣ್ಣ, ಸಿ. ಬಸವರಾಜು, ಬಿ.ಆರ್. ನಂಜಪ್ಪ, ಬಿ.ಎಂ. ಮುನಿರಾಜು, ಈರೇಗೌಡ, ವಿಜಯಾಚಾರಿ, ವೆಂಕಟರಮಣಪ್ಪ, ಡಿ. ಸೋಮಶೇಖರ, ನಾರಾಯಣ ಆಚಾರಿ–ಇವರುಗಳು ಕೇಳಿಕೆ ಪ್ರಸಂಗದ ಪ್ರಮುಖ ಕಲಾವಿದರು. ಸಿ. ಮುನಿರೆಡ್ಡಿ ಈ ಭಾಗದ ಬಯಲಾಟ ಕೇಳಿಕೆ ಸಂಪ್ರದಾಯದ ಸಂಘಟಕರಾಗಿ, ಬೆಳಮಾರನಹಳ್ಳಿ ಬಸವರಾಜು, ಹೆಚ್ಚು ಕ್ರಿಯಾಶೀಲ ರಾಗಿರುವ ಕೇಳಿಕೆ ಭಾಗವತರು. ಇವರಿಗೆ ಕರ್ನಾಟಕ ಯಕ್ಷಗಾನ ಅಕಾಡೆಮಿಯ ಗೌರವ ಪುರಸ್ಕಾರವು ದೊರೆತಿದೆ. ಕೇಳಿಕೆ ಸಂಪ್ರದಾಯದ ಸಂಘಟಕರಾಗಿಯೂ ಕಾರ್ಯ ನಿರ್ವಹಿಸುತ್ತಿರುವುದು ಬಸವರಾಜು ಅವರ ವಿಶೇಷವಾಗಿದೆ.

ಮೈಸೂರು ಜಿಲ್ಲೆಯ ಟಿ. ನರಸೀಪುರ ತಾಲ್ಲೂಕಿನ ತಲಕಾಡು, ಹೆಮ್ಮಿಗೆ, ನಂಜನಗೂಡು ತಾಲೂಕಿನ ಬಸುರಾಳು, ಬಸವನಹಳ್ಳಿ, ವರುಣ ಈ ಗ್ರಾಮಗಳಲ್ಲಿ ಬಯಲಾಟ ಕಲೆ ಇಂದಿಗೂ ಕ್ರಿಯಾಶೀಲವಾಗಿದೆ. ತಲಕಾಡು ರವೀಂದ್ರ, ಉತ್ತಮ ಬಯಲಾಟದ ಭಾಗವತರಾಗಿದ್ದು, ಲವಕುಶ, ದೇವಿ ಮಹಾತ್ಮೆ, ದುಶಾಸನವಧೆ, ಶಿವ ಜಲಂಧರ, ರುಕ್ಮಿಣಿ ಪರಿಣಿಯ, ಇಂದ್ರಜಿತ್ ಕಾಳಗ– ಈ ಪ್ರಸಂಗಗಳನ್ನು ತಲಕಾಡು, ಬನ್ನೂರು, ಹೆಮ್ಮಿಗೆ, ಮಂಡ್ಯ, ಮಳವಳ್ಳಿ – ಈ ಭಾಗಗಳಲ್ಲಿ ಕಲಿಸಿ, ಪ್ರದರ್ಶನ ನೀಡಿರುವ ಹಿರಿಯ ಭಾಗವತರು. ಕರ್ನಾಟಕ ಯಕ್ಷಗಾನ ಅಕಾಡೆಮಿ ಪ್ರಶಸ್ತಿ ಪುರಸ್ಕೃತರೂ ಆಗಿರುವ ತಲಕಾಡು ರವೀಂದ್ರ, ಪ್ರಸ್ತುತ ಮಂಡ್ಯದ ಕರ್ನಾಟಕ ಸಂಘದ ಅಡಿಯಲ್ಲಿ ನಡೆಯುತ್ತಿರುವ 'ಮೂಡಲಪಾಯ ಯಕ್ಷಗಾನ ಕಲಿಕಾ ಕೇಂದ್ರ'ದ ಸಂಪನ್ಮೂಲ ವ್ಯಕ್ತಿಯಾಗಿಯೂ ಕಾರ್ಯನಿರ್ವಹಿಸುತ್ತಿದ್ದಾರೆ.

ಚಿಕ್ಕ ಚೌಡನಾಯಕ ಹೊಸ ಹೆಮ್ಮಿಗೆಯ ಬಯಲಾಟದ ಭಾಗವತರಾಗಿದ್ದು, ಇವರದು ಬಹುಮುಖ ವ್ಯಕ್ತಿತ್ವ. ಬಯಲಾಟ ಸಂಘಟಕರಾಗಿ, ಭಾಗವತರಾಗಿ, ಕಲಾವಿದರಾಗಿ, ಕಳೆದ 60 ವರ್ಷಗಳಿಂದ ಬಯಲಾಟ ಕ್ಷೇತ್ರದಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿದ್ದಾರೆ. ಪಂಚವಟಿ, ರಾಮಾಯಣ, ಅಂಗದನ ಸಂಧಾನ, ವೀರ ಬಬ್ರುವಾಹನ, ಐರಾವತ, ಕರಿಬಂಟ, ಗಂಗೆ ಗೌರಿ, ವಾಲಿ ಸುಗ್ರೀವರ ಕಾಳಗ, ತ್ರಿಜನ ಮೋಕ್ಷ – ಇವರು ಕಲಿಸಿರುವ ಪ್ರಮುಖ ಬಯಲಾಟ ಪ್ರಸಂಗಗಳು. ಒಂದು ಬಗೆಯ ಸಂಚಾರಿ ಭಾಗವತರೂ ಆಗಿರುವ ಹೆಮ್ಮಿಗೆ ನಾಯಕರು, ಮುಡುಕುತೊರೆ, ಮಲೆಯ ಮಹದೇಶ್ವರ ಬೆಟ್ಟ, ತಲಕಾಡು, ನಂಜನಗೂಡು– ಇಲ್ಲಿನ ಧಾರ್ಮಿಕ ಕ್ಷೇತ್ರಗಳ ಸಹಯೋಗದಲ್ಲಿ, ಬಯಲಾಟ ಕಲಿಸಿ, ಪ್ರದರ್ಶಿಸಿದ, ಹಿರಿಮೆ ಇವರದು. ಪ್ರಸಂಗ

ಕರ್ತೃವೂ ಆಗಿರುವ ನಾಯಕರು ಪಂಚವಟಿ, ವಾಲಿ ವಧೆ, ಅಂಗದನ ಸಂಧಾನ, ಗಂಗೆ ಗೌರಿ ಸಂವಾದ– ಈ ಪ್ರಸಂಗ ಸಾಹಿತ್ಯ ರಚಿಸಿದ್ದಾರೆ. ಇವರ ಪ್ರಸಂಗ ಸಾಹಿತ್ಯ ಕೃತಿಗಳನ್ನು ಕರ್ನಾಟಕ ಯಕ್ಷಗಾನ ಅಕಾಡೆಮಿ ಪ್ರಕಟಿಸಿದೆ. ತಲಕಾಡು, ಹೆಮ್ಮಿಗೆ ಭಾಗದಲ್ಲಿ ಅರ್ಚಕ ಈಶ್ವರಾಚಾರ್, ವೀರಭದ್ರಾಚಾರ್, ತೆಲುಗು ನಾಯಕರು, ರಾಜಾ ನಾಯಕರು, ಗಂಗರಾಯ ಕಾಮ ನಾಯಕ, ಭಾಗವತ ತಿಮ್ಮಯ್ಯ ಈ ಮೊದಲಾದ ಭಾಗವತರು ತಲಕಾಡು, ನಂಜನಗೂಡು, ಮುಡುಕುತೊರೆ, ಟಿ. ನರಸೀಪುರ, ಕೊಳ್ಳೇಗಾಲ–ಈ ಭಾಗಗಳಲ್ಲಿ ಬಯಲು ಕಥೆಯನ್ನು ವಿಶೇಷವಾಗಿ ಬೆಳೆಸಿದ, ಪ್ರದರ್ಶನಗಳ ಮೂಲಕ ಜನಮನದಲ್ಲಿ ಬಯಲಾಟದ ಅಭಿರುಚಿ ತುಂಬಿದ ಹಿರಿಯರು. ಈ ಪರಂಪರೆಯನ್ನು ಚೌಡನಾಯಕ, ಟಿ. ರವೀಂದ್ರ, ನಾರಾಯಣಸ್ವಾಮಿ, ತಿಮ್ಮಯ್ಯ ಈ ಭಾಗವತರು ಇಂದಿಗೂ ಸಮರ್ಥವಾಗಿ ವಿಸ್ತರಿಸಿದ್ದಾರೆ.

ಹಾಸನ ಜಿಲ್ಲೆಯ ಗಂಡಸಿ ಹೋಬಳಿ ಬಯಲಾಟ ಕಲೆಗೆ ಪ್ರಸಿದ್ಧವಾದ ಪ್ರದೇಶ. ಗಂಡಸಿ ಹೋಬಳಿ ಬಾಗೇಶಪುರದ ಬಿ.ಎಲ್. ಚಿಕ್ಕೇಗೌಡರು ಯಕ್ಷಗಾನದ ಹೆಸರಿನ ಬಯಲಾಟದ ಪ್ರಸಂಗ ಸಾಹಿತ್ಯವನ್ನು ರಚಿಸಿದ್ದಾರೆ. ಭಾಗವತರೂ ಆಗಿದ್ದ ಚಿಕ್ಕೆಗೌಡರು ಅಣತಿ, ಬಾಗೂರು, ನವಿಲೆ, ಇಲ್ಲೆಲ್ಲಾ 'ರಕ್ತಬೀಜಾಸುರ ವಧೆ' ಬಯಲಾಟವನ್ನು ಕಲಿಸಿ, ಪ್ರದರ್ಶಿಸಿದ್ದಾರೆ. ಸ್ವಾತಂತ್ರ್ಯ ಪೂರ್ವದಲ್ಲಿ ಬಯಲಾಟದ ಭಾಗವತರಾಗಿ, ತಿಪಟೂರು ತಾಲ್ಲೂಕು ಮತ್ತಿಹಳ್ಳಿ, ತುರುವೇಕೆರೆ ತಾಲ್ಲೂಕು ಹುಳಿಸಂದ್ರ ಇಲ್ಲೆಲ್ಲಾ ದೇವಿ ಮಹಾತ್ಮೆ ಬಯಲಾಟ ಪ್ರಸಂಗವನ್ನು ಕಲಿಸಿಕೊಟ್ಟಿದ್ದಾರೆ. ಈ ಪರಂಪರೆಯನ್ನು ಹುಳಿಸಂದ್ರ ಗ್ರಾಮದಲ್ಲಿ, ಪ್ರದರ್ಶನವಾಗುತ್ತಿರುವ ದೇವಿ ಮಹಾತ್ಮೆ ಬಯಲಾಟ ಹಸ್ತಪ್ರತಿಯನ್ನು ನೂರು ವರ್ಷಗಳಿಂದಲೂ ಬಳಸುತಿದ್ದೇವೆ ಎಂದು ಹೇಳುತ್ತಾರೆ. ದೇವಿ ಮಹಾತ್ಮೆ ಬಯಲಾಟದಲ್ಲಿ ರಕ್ತಬೀಜಾಸುರನ ಪಾತ್ರದಲ್ಲಿ ಸಮರ್ಥ ಅಭಿನಯ ನೀಡುತ್ತಿರುವ ಶಿವಣ್ಣ, ಶ್ರೀದೇವಿ ಪಾತ್ರದ ರಾಮಣ್ಣ, ಸಾರಥಿ ಪಾತ್ರದ ರಂಗನಾಥ, ನಾರದನ ಪಾತ್ರದ ಮೂಡಲಗಿರಿಯಪ್ಪ; ಇವರ ಮನೋಜ್ಞ ಅಭಿನಯ; ಬಯಲಾಟದ ಜೀವಂತಿಕೆಯ ಸಂಕೇತವಾಗಿವೆ. ಬಯಲಾಟ ಸಂಘಟಕರಾಗಿ ರಾಮಣ್ಣ, ಕೃಷ್ಣಮೂರ್ತಿ, ಗಂಗಯ್ಯ ಇವರು ಬಯಲಾಟ ಸಂಸ್ಕೃತಿಗೆ ತೋರುತ್ತಿರುವ ಕಾಳಜಿ, ಆಸಕ್ತಿಯು ಅಭಿನಂದನಾರ್ಹವಾದುದು.

ಬಯಲಾಟ ಎಂದೇ ಬಯಲು ಸೀಮೆಯಲ್ಲಿ; ಪೂರ್ವದಿಂದಲೂ ಕರೆದು ಕೊಳ್ಳುತ್ತಾ; ತಮ್ಮ ನೆಲ ಮೂಲಕ್ಕೆ ತಕ್ಕಂತೆ, ಸೀನರಿ, ಉಡುಗೆ ತೊಡಿಗೆ ಮಾಡಿಕೊಳ್ಳುತ್ತಾ; ಊರಿನ ಊರಹಬ್ಬದೊಂದಿಗೆ, ನೆಂಟರು ಇಷ್ಟರ ಮುಂದೆ ವೇಷಗಳ ಮೂಲಕ; ತಮ್ಮ ಪ್ರತಿಭೆ, ಪಾಂಡಿತ್ಯವನ್ನು ತೋರ್ಪಡಿಸಿಕೊಳ್ಳುತ್ತಾ ಬಂದ

ಈ ಕಲೆ; ಇಂದು ಹಲವಾರು ಸ್ಥಿತ್ಯಂತರಕ್ಕೆ ಒಳಗಾಗಿದೆ. ಚಲನಚಿತ್ರ, ಪೌರಾಣಿಕ ನಾಟಕಗಳು, ಈ ಹಿಂದೆ ಬಯಲಾಟಕ್ಕೆ ದೊಡ್ಡ ಕುತ್ತು ತಂದ ಪೂರಕ ಕಲಾ ಮಾಧ್ಯಮಗಳು. ಇಂದು ಚಲನಚಿತ್ರಗಳ ಆಕರ್ಷಣೆಯೂ ಇಲ್ಲವಾಗುತ್ತಿದೆ. ಪೂರಕವಾಗಿ ಮನೆ–ಮನೆಗಳಲ್ಲಿ ಒಂದು–ಎರಡರಂತೆ ಟಿ.ವಿಯನ್ನು ಒದಗಿಸಿ ಕೊಂಡು, ಮನೆಯನ್ನೇ ಮನರಂಜನೆಯ ಕೇಂದ್ರವನ್ನಾಗಿಸಿಕೊಂಡ, ಧಾರಾವಾಹಿ, ಸರಿಗಮಪ, ಬಿಗ್ ಬಾಸ್, ಈ ಬಗೆಯ ಚಾನಲ್‌ಗಳಲ್ಲಿ; ಮುಳುಗೇಳುತ್ತಿರುವುದು ಒಂದು ಕಡೆಯಾದರೆ; ದೊಡ್ಡವರು, ಚಿಕ್ಕವರು, ಪಟ್ಟಣ, ಹಳ್ಳಿ ಈ ಯಾವುದೇ ತಾರತಮ್ಯಗಳಿಲ್ಲದೆ; ಮೊಬೈಲ್‌ಗೆ ಸೆರೆ ಬಿದ್ದಿರುವ ವರ್ತನೆಯೂ; ಗ್ರಾಮೀಣ ಯುವಕರು, ಹಿರಿಯರು, ಬಯಲಾಟಗಳಿಂದ ದೂರ ಸರಿಯುತ್ತಿದ್ದಾರೆ. ಜೊತೆಗೆ ಲಕ್ಷಾಂತರ ರೂಪಾಯಿ ವೆಚ್ಚದಲ್ಲಿ; ಪರಸ್ಪರ ಆಕರ್ಷಣೆ ಬಯಸಿ, ಜಿದ್ದಿಗೆ ಬಿದ್ದವರಂತೆ, ಆಕರ್ಷಕ ಸೀನರಿ, ಪಾತ್ರಗಳಿಗೆ ಪಟ್ಟಣಗಳಿಂದ ಸ್ತ್ರೀ ಕಲಾವಿದರನ್ನು ಆಹ್ವಾನಿಸಿ, ಅವರಿಂದ ನೃತ್ಯ ಸಂಯೋಜನೆ, ಪರಸ್ಪರ ಕೈ ಹಿಡಿದು ನರ್ತಿಸುವುದು, ಈ ಬಗೆಯ ಆಕರ್ಷಣೆಯಲ್ಲಿ ಪೌರಾಣಿಕ ನಾಟಕಗಳು ಜನಾಕರ್ಷಿತವಾಗುತ್ತಿವೆ. ಈ ಕಾರಣಗಳೂ ಬಯಲಾಟಗಳು ತಮ್ಮ ನೆಲೆ ಕಳೆದುಕೊಳ್ಳುವಂತೆ ಮಾಡಿವೆ.

ಇಂದು ಬಯಲಾಟದ ರಂಗಪರಿಕರಗಳಾದ, ಭುಜಕೀರ್ತಿ, ಎದೆಹಾರ, ಕಿರೀಟ, ಸೊಂಟಪಟ್ಟಿ, ಕೈ ಬಂದಿಗಳ ಕೊರತೆ ಒಂದೆಡೆಯಾದರೆ, ಬಯಲಾಟದ ಹಸ್ತಪ್ರತಿಗಳ ಕೊರತೆಯೂ ತೀವ್ರವಾಗಿದೆ. ಇವೆಲ್ಲಕ್ಕೂ ಮಿಗಿಲಾಗಿ, ಬಯಲಾಟದ ಭಾಗವತರ ಕೊರತೆಯೂ ವ್ಯಾಪಕವಾಗಿದೆ. ಬಯಲಾಟದ ಜೀವ ಚೇತನ ವಾದ್ಯ ಮುಖವೀಣೆ, ಮದ್ದಳೆ ಕಲಾವಿದರ ಕೊರತೆಯೂ ಇದೆ. ಈ ಬಗೆಯ ಕಾರಣಗಳಿಂದ ಬಯಲಾಟ ಕಲೆ, ಸ್ಥಗಿತವಾಗುವ ಸ್ಥಿತಿಯನ್ನು ತಲುಪಿದೆ. ಇವುಗಳ ಪುನರ್ ಚೇತನದ ಕಾರ್ಯವೂ ಆಗಬೇಕಿದೆ.

## ಆಕರ ಗ್ರಂಥಗಳು

1. ಮೂಡಲಪಾಯ ಯಕ್ಷಗಾನ ಬಯಲಾಟ: ಒಂದು ಅಧ್ಯಯನ– ಡಾ. ಚಿಕ್ಕಣ್ಣ ಯಣ್ಣೆಕಟ್ಟೆ, ಅಂಕನಹಳ್ಳಿ ಪ್ರಕಾಶನ ರಾಮನಗರ–2019.

2. ಮೂಡಲಪಾಯ ಯಕ್ಷಗಾನ ಪ್ರಸಂಗ ಸಾಹಿತ್ಯ ಸಂಪುಟ –1, ಸಂ. ಡಾ. ಚಿಕ್ಕಣ್ಣ ಯಣ್ಣೆಕಟ್ಟೆ, ಗಡಿನಾಡ ಜಾನಪದ ಕೇಂದ್ರ ಸಿರಾ. 2021.

3. ಜಾನಪದ ಸಂಪನ್ನರು– ಡಾ. ಚಿಕ್ಕಣ್ಣ ಯಣ್ಣೆಕಟ್ಟೆ, ಗಡಿನಾಡ ಜಾನಪದ ಕೇಂದ್ರ ಸಿರಾ. 2018.

4. ತುಮಕೂರು ಜಿಲ್ಲೆ ಜಾನಪದ ಕಲಾವಿದರು. ಡಾ. ಚಿಕ್ಕಣ್ಣ ಯಣ್ಣೆಕಟ್ಟೆ, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು 2008

5. ಚಿತ್ರದುರ್ಗ ಜಿಲ್ಲೆ ಜನಪದ ಕಲಾವಿದರು. ಡಾ. ಚಿಕ್ಕಣ್ಣ ಯಣ್ಣೆಕಟ್ಟೆ, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಬೆಂಗಳೂರು 2008

6. ದಾವಣಗೆರೆ ಜಿಲ್ಲೆ ಜನಪದ ಕಲಾವಿದರು ಡಾ. ಚಿಕ್ಕಣ್ಣ ಯಣ್ಣೆಕಟ್ಟೆ, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಬೆಂಗಳೂರು 2008

7. ಮೂಡಲಪಾಯ ಯಕ್ಷಗಾನ ಸ್ವರೂಪ. ಡಾ. ಚಿಕ್ಕಣ್ಣ ಯಣ್ಣೆಕಟ್ಟೆ, ಕರ್ನಾಟಕ ಯಕ್ಷಗಾನ ಅಕಾಡೆಮಿ, ಬೆಂಗಳೂರು 2023

8. ಕಿನ್ನರಿಯ ಮೇಲೆ ಕಿರು ಗೆಜ್ಜೆ. ಡಾ. ಚಿಕ್ಕಣ್ಣ ಯಣ್ಣೆಕಟ್ಟೆ, ಗಡಿನಾಡ ಜಾನಪದ ಕೇಂದ್ರ ಸಿರಾ 2001.

9. ತುಮಕೂರು ಜಿಲ್ಲಾ ಜಾನಪದ ಕಲಾ ಸಂಪನ್ನರು; ಡಾ. ಚಿಕ್ಕಣ್ಣ ಯಣ್ಣೆಕಟ್ಟೆ, ಕರ್ನಾಟಕ ಜಾನಪದ ಪರಿಷತ್ತು ಬೆಂಗಳೂರು 2023

10. ಮೂಡಲಪಾಯದ ಮಹಾಮುಕುಟ ನಂಜಪ್ಪ: ಡಾ. ಚಿಕ್ಕಣ್ಣಯಣ್ಣೆಕಟ್ಟೆ, ಕರ್ನಾಟಕ ಜಾನಪದ ಪರಿಷತ್ತು ಬೆಂಗಳೂರು 2020.

11. ಚೇಳೂರು ಸೀಮೆ ಸಂಸ್ಕೃತಿ: ಡಾ. ಚಿಕ್ಕಣ್ಣ ಯಣ್ಣೆಕಟ್ಟೆ, ಕನ್ನಡ ಸಾಹಿತ್ಯ ಪರಿಷತ್ತು, ಚೇಳೂರು, 2024.

12. ತುಮಕೂರು ಜಿಲ್ಲೆ ಜಾನಪದೀಯ ಅಧ್ಯಯನ: ಡಾ. ಚಿಕ್ಕಣ್ಣಯಣ್ಣೆ ಕಟ್ಟೆ, ತುಮಕೂರು ವಿಶ್ವವಿದ್ಯಾಲಯ ಪ್ರಸಾರಾಂಗ, ತುಮಕೂರು 2010.